

ಸಂಪುಟ 22 ಸಂಚಿಕೆ 28
ಜುಲೈ 9, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಪ್ರಜಾರಂಗ



ತುರ್ತುಪರಿಸ್ಥಿತಿ: ಅಪಾಯ ಇನ್ನೂ ಜೀವಂತ



ಟೆಲಿಕಾಂ ಸಾಮ್ರಾಜ್ಯಶಾಹಿಗೆ



ದಲಿತರ ಬದುಕಿನ ಬವಣೆಗಳು

ಚಲನಚಿತ್ರಗಳು!


ಭಾವನೆಯನ್ನು ಕೆರಳಿಸುವ ಅಭಿನಯ

ಕಳೆದ ಸಂಚಿಕೆಯಲ್ಲಿ ಭಾರತಕ್ಕೆ ಭೇಟಿ ನೀಡಿದ ವಿಯೆಟ್ನಾಂನ ಮಹಾನಾಯಕ ಹೊಚಿಮಿನ್‌ರವರಿಗೆ ಪಕ್ಷ ನೀಡಿದ ಭವ್ಯ ಸ್ವಾಗತ ಮತ್ತು ಕಲ್ಕತ್ತದ ಕೊಳಗೇರಿ ನಿವಾಸಿಗಳ ಪುನರ್‌ವಸತಿಗಾಗಿ ನಡೆದ ಹೋರಾಟಗಳನ್ನು ವಿವರಿಸಿದ ಜ್ಯೋತಿಬಸು ಈ ಸಂಚಿಕೆಯಲ್ಲಿ ಕಮ್ಯುನಿಸ್ಟ್ ಪಕ್ಷದ ಅಮೃತಸರ ಅಧಿವೇಶನ, ಪಂಜಾಬಿನ ಜಲಿಯನ್ ವಾಲಾಬಾಗ್ ಹುತಾತ್ಮರಿಗೆ ಪಕ್ಷದ ಮುಖಂಡರು ನಮನ ಸಲ್ಲಿಸಿದ ಬಗ್ಗೆ ಹಾಗೂ ಪ.ಬಂಗಾಳದ ಆಹಾರ ಇಲಾಖೆಯಲ್ಲಿ ನಡೆದ ಭ್ರಷ್ಟಾಚಾರದ ವಿರುದ್ಧ ಪಕ್ಷ ಕೈಗೊಂಡ ತೀರ್ಮಾನದ ಬಗ್ಗೆ ವಿವರಿಸಿದ್ದಾರೆ.

ಲಕ್ಷ ಮಂದಿಯ ರ‍್ಯಾಲಿ!

1958 ರ ಏಪ್ರಿಲ್‌ನಲ್ಲಿ ಅಮೃತಸರದಲ್ಲಿ ನಡೆದ ಪಕ್ಷದ ವಿಶೇಷ ಅಧಿವೇಶನದಲ್ಲಿ ಪಾಲ್ಗೊಳ್ಳಲು ನಾವು ಹೊರಟೆವು. ಸೋವಿಯತ್ ಒಕ್ಕೂಟ, ಚೀನಾ, ವಿಯೆಟ್ನಾಂ, ಫ್ರಾನ್ಸ್, ಪೋಲೆಂಡ್, ಯುಗೋಸ್ಲಾವಿಯಾ, ರುಮೇನಿಯಾ, ಇಂಡೋನೇಶ್ಯಾ, ಕೊರಿಯಾ, ಚೆಕೊಸ್ಲೋವಾಕಿಯಾ, ಕೆನಡ, ನಾರ್ವೆ, ಆಲ್ಬೇನಿಯಾ, ಟ್ಯುನೀಸಿಯಾ, ಆಸ್ಟ್ರೇಲಿಯಾ, ಜಪಾನ್ ಮತ್ತು ಅಮೆರಿಕಗಳಿಂದ ಅಭಿನಂದನೆ ಸಂದೇಶಗಳು ಬಂದವು.

ಕಾಮ್ರೇಡ್ ಹರಿಕಿಷನ್ ಸಿಂಗ್ ಸುರ್ಜಿತ್ ವಿಶೇಷ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಕಾಂ. ಪಿ.ಸುಂದರಯ್ಯ ಕೆಂಪು ಧ್ವಜ ಆರೋಹಣ ಮಾಡಿದರು. ಎಸ್.ಎ. ಡಾಂಗೆ, ಸೋಹಾನ್‌ಸಿಂಗ್ ಜೋಶ್, ಇ.ಎಂ.ಎಸ್.ನಂಬೂದರಿಪಾಡ್, ಅಬ್ದುಲ್ ಹಲೀಂ, ನಾಗಿರೆಡ್ಡಿ, ಗೋದಾವರಿ ಪರುಳೇಕರ್ ಮತ್ತು ನಾನು ಕಾರ್ಯದರ್ಶಿ ಮಂಡಳಿ



ಯಲ್ಲಿದ್ದೆವು. ಅಜಯ್ ಘೋಷ್, ಬಿ.ಟಿ.ರಣದಿವೆ, ಪಿ.ರಾಮಮೂರ್ತಿ ಮತ್ತು ಭೂಪೇಶ್ ಗುಪ್ತ ಸಂಚಾಲನ ಸಮಿತಿಯಲ್ಲಿದ್ದರು.

ಅಧಿವೇಶನದ ಆರಂಭದ ದಿನ ನಡೆದ ರ‍್ಯಾಲಿಯಲ್ಲಿ ನಾನು ಮಾತನಾಡಿದೆ.

ಕಾಂ. ಅಜಯ್ ಘೋಷ್ ರಾಜಕೀಯ ಸಂಘಟನಾತ್ಮಕ ವರದಿಯನ್ನು ಮಂಡಿಸಿದರು. ಅದರ ಮೇಲೆ ದೀರ್ಘ ಚರ್ಚೆ ನಡೆಯಿತು. ಕೆಲವು ತಿದ್ದುಪಡಿಗಳೊಂದಿಗೆ ರಾಜಕೀಯ ಗೊತ್ತುವಳಿಯನ್ನು ಅಂಗೀಕರಿಸಲಾಯಿತು. 101 ಸದಸ್ಯರ ಕೇಂದ್ರ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ನಾನೂ ಇದ್ದೆ.

ಅಜಯ ಘೋಷ್, ಬಿ.ಟಿ.ರಣದಿವೆ, ಇ.ಎಂ.ಎಸ್.ನಂಬೂದರಿಪಾಡ್, ಗೋವಿಂದನ್ ನಾಯರ್, ಎ.ಕೆ.ಗೋಪಾಲನ್, ಸಿ.ರಾಜೇಶ್ವರ ರಾವ್, ಭೂಪೇಶ್ ಗುಪ್ತ, ಪಿ.ಸಿ.ಜೋಷಿ, ಝಡ್.ಎ.ಅಹಮದ್, ಹರಿಕಿಶನ್ ಸಿಂಗ್ ಸುರ್ಜಿತ್, ಎಸ್.ಎ. ಡಾಂಗೆ, ಎಂ.ಬಸವಪೊನ್ನಯ್ಯ ಮತ್ತು ಹರೇಕೃಷ್ಣ ಕೋನಾರ್ ಸಮಿತಿಗೆ ಆಯ್ಕೆಯಾದ ಇತರ ಕೆಲವು ಸಂಗಾತಿಗಳು.

ಅಜಯ್ ಘೋಷ್, ಝಡ್.ಎ. ಅಹಮದ್, ಎ.ಕೆ.ಗೋಪಾಲನ್, ಬಿ.ಟಿ.ರಣದಿವೆ, ಪಿ.ಸಿ.ಜೋಷಿ, ಎಂ.ಬಸವ ಪೊನ್ನಯ್ಯ ಮತ್ತು ಎಸ್.ಎ.ಡಾಂಗೆ ಕಾರ್ಯದರ್ಶಿ ಮಂಡಳಿಗೆ ಆಯ್ಕೆಯಾದರು.

ಸಡಗರ, ಸಂಭ್ರಮ

ಆ ಕಾಲದಲ್ಲೇ ಬಹಿರಂಗ ಅಧಿವೇಶನದಲ್ಲಿ ಸುಮಾರು ಒಂದು ಲಕ್ಷ ಜನರು ಭಾಗವಹಿಸಿದರು. ಎಲ್ಲೆಲ್ಲೂ ಸಡಗರದ ವಾತಾವರಣ ಕಾಣುತ್ತಿತ್ತು. ಪಂಜಾಬಿನ ನಾನಾ ಜಿಲ್ಲೆಗಳಿಂದ ಜನರು ಕಾಲ್ನಡಿಗೆಯಲ್ಲಿ, ಬಸ್ಸುಗಳಲ್ಲಿ, ಟಾಂಗಾಗಳಲ್ಲಿ ಮತ್ತು ಸೈಕಲ್‌ಗಳಲ್ಲಿ ಬಂದರು. ಕೆಂಬಾವುಟವನ್ನು ಸಂತೋಷದಿಂದ ಬೀಸುತ್ತಿದ್ದರು.

ಅಧಿವೇಶನಕ್ಕೆ ಬಂದಿದ್ದ ಪ್ರತಿನಿಧಿಗಳು ಮತ್ತು ನೆರೆದಿದ್ದ ಲಕ್ಷಾಂತರ ಜನರು ಮೆರವಣಿಗೆಯಲ್ಲಿ ಅಮೃತಸರ ನಗರಕ್ಕೆ ಒಂದು ಸುತ್ತು ಹಾಕಿದರು.

ನಾನು ಮತ್ತು ಕಾಂ.ಸುರ್ಜಿತ್ ಒಂದು ತೆರೆದ ಜೀಪಿನಲ್ಲಿ ಕುಳಿತಿದ್ದೆವು. ಜನರು ಮನೆಗಳ ಛಾವಣಿಗಳಿಂದ ನಮ್ಮ ಮೇಲೆ ಪುಷ್ಪವೃಷ್ಟಿ ಮಾಡಿದರು.

ಜಲಿಯನ್‌ವಾಲಾಬಾಗ್ ಹುತಾತ್ಮರಿಗೆ ನಮನ

ನಮ್ಮಲ್ಲಿ ಕೆಲವು ಸಂಗಾತಿಗಳು ಜಲಿಯನ್ ವಾಲಾಬಾಗ್‌ಗೆ ಭೇಟಿ ನೀಡಿದೆವು. ಅಬ್ದುಲ್ ಹಲೀಂ, ಕಾಕಾಬಾಬು, ಇ.ಎಂ.ಎಸ್. ಮತ್ತು ನಾನು ಹುತಾತ್ಮರಿಗೆ ಗೌರವ ಸಲ್ಲಿಸಿದೆವು.

ಬ್ರಿಟಿಷ್ ಸಾಮ್ರಾಜ್ಯಶಾಹಿ ಆಡಳಿತ ಲೆಕ್ಕವಿಲ್ಲದಷ್ಟು ಮುಗ್ಧ ಜನರ ಕಗ್ಗೊಲೆ ಮಾಡಿದ ಸ್ಥಳದಲ್ಲಿ ನಾವು ದಿಗ್ಮೂಢರಾಗಿ ನಿಂತೆವು.

1958 ಆಗಸ್ಟ್‌ನಲ್ಲಿ ನಡೆದ ಅಸೆಂಬ್ಲಿ ಉಪಚುನಾವಣೆ ದೊಡ್ಡ ವಿವಾದವನ್ನು ಹುಟ್ಟು ಹಾಕಿತು. ಆಹಾರ ಇಲಾಖೆಯಲ್ಲಿನ ಭ್ರಷ್ಟಾಚಾರವನ್ನು ವಿರೋಧಿಸಿ ಸಿದ್ಧಾರ್ಥ ಶಂಕರ ರಾಯ್ ಮಂತ್ರಿ ಸ್ಥಾನಕ್ಕೆ ರಾಜಿನಾಮೆ ಕೊಟ್ಟರು. ಆಹಾರ ಪರಿಸ್ಥಿತಿಯನ್ನು ತುಂಬಾ ಕೆಟ್ಟದಾಗಿ ನಿರ್ವಹಿಸಿದ ಸರಕಾರದ ಬಗ್ಗೆ ಜನರಲ್ಲಿ ಮೊದಲೇ ಅಸಮಾಧಾನ ಹೊಗೆಯಾಡುತ್ತಿತ್ತು. ಶಂಕರ ರಾಯ್ ರಾಜಿನಾಮೆ ಜನರ ಮನಸ್ಸನ್ನು ನಾಟಿತು. ಸಿದ್ಧಾರ್ಥ ಶಂಕರ ರಾಯ್ ಭವಾನಿಪುರ ಕ್ಷೇತ್ರದಿಂದ ಪಕ್ಷೇತರರಾಗಿ ಸ್ಪರ್ಧಿಸಿ ನಮ್ಮ ಬೆಂಬಲವನ್ನು ಕೋರಿದರು.

ಅವರನ್ನು ಬೆಂಬಲಿಸಲು ನಾವು ನಿರ್ಧರಿಸಿದೆವು. ಎಡಪಕ್ಷಗಳ ಬೆಂಬಲದೊಂದಿಗೆ ಅವರು ಕಾಂಗ್ರೆಸ್‌ನ ಬಿಜಯ್‌ಕುಮಾರ್ ಬ್ಯಾನರ್ಜಿಯನ್ನು ಎದುರಿಸಿ 10,538 ಮತಗಳ ಅಂತರದಿಂದ ಗೆಲುವು ಸಾಧಿಸಿದರು. ಆಹಾರ ಬಿಕ್ಕಟ್ಟಿಗೆ ರಾಜಕೀಯ ತಿರುವು ಬಂದಿದೆ. ಜನರು ಸರಿಯಾದ ರಾಜಕೀಯ ನಿಲುವಿಗೆ ಮತ ನೀಡಿದ್ದಾರೆ ಎಂದು ಫಲಿತಾಂಶ ಪ್ರಕಟವಾದ ನಂತರ ಹೇಳಿಕೆಯೊಂದರಲ್ಲಿ ನಾನು ತಿಳಿಸಿದೆ.

ಇನ್ನೂ ಒಂದು ಪ್ರಕರಣ ನೆನಪಾಗುತ್ತದೆ. ಆಹಾರ ಬಿಕ್ಕಟ್ಟನ್ನು ಬಗೆಹರಿಸಲು ಮುಂದಾಗುವಂತೆ ಸತತವಾಗಿ ಒತ್ತಾಯಿಸಿದ್ದ ಹಿನ್ನೆಲೆಯಲ್ಲಿ ತನಿಖಾ ಸಮಿತಿಯೊಂದನ್ನು ರಚಿಸುವ ಒತ್ತಡಕ್ಕೆ ಸರಕಾರ ಒಳಗಾಯಿತು. ಆದರೆ ಸಮಿತಿಯಲ್ಲಿ ಪ್ರತಿಪಕ್ಷದ ಯಾರನ್ನೂ ಸೇರಿಸಿಕೊಂಡಿರಲಿಲ್ಲ. ಈ ಸಮಿತಿಯ ವರದಿಯನ್ನು ಸದನದಲ್ಲಿ ಮಂಡಿಸುವ ಇರಾದೆಯೂ ಸರಕಾರಕ್ಕೆ ಇರಲಿಲ್ಲ.

ಆದರೆ, ಸಾರ್ವಜನಿಕ ಒತ್ತಡ ಮತ್ತು 'ಸ್ವಾಧೀನತಾ' ದಲ್ಲಿ ವರದಿಯ ಒಂದು ಭಾಗ ಪ್ರಕಟವಾಗಿ ಜನಾಭಿಪ್ರಾಯ ರೂಪುಗೊಂಡಿದ್ದರಿಂದ ವರದಿಯ ವಿಚಾರದಲ್ಲಿ ಸರಕಾರ ಯಾವುದೇ ಮೋಸ ಮಾಡಲು ಸಾಧ್ಯವಾಗಲಿಲ್ಲ.



ಜಲಿಯನ್ ವಾಲಾಬಾಗ್ ಹುತಾತ್ಮರ ಸ್ಮಾರಕ

ವರದಿ ಬಗ್ಗೆ ಮುಖ್ಯಮಂತ್ರಿ ಸೆ.20 ರಂದು ಸುದ್ದಿಗೋಷ್ಠಿಯೊಂದನ್ನು ನಡೆಸಿದರು. ಅದರ ಮರುದಿನವೇ ನಾನು ಪ್ರಧಾನಿಗೆ ಪತ್ರ ಬರೆದೆ. ಅದಕ್ಕೂ ಮುಂಚೆ, ವರದಿ ಪ್ರಕಟಿಸುವಂತೆ ಕೋರಿ ಮುಖ್ಯಮಂತ್ರಿಗೆ ಬರೆದು ಅದರ ಪ್ರತಿಯನ್ನು ಪ್ರಧಾನಿ ಜವಾಹರಲಾಲ ನೆಹರೂಗೆ ಕಳಿಸಿದ್ದೆ. ಆದರೆ ಈ ಬಾರಿ ನೇರವಾಗಿ ಅವರಿಗೇ ಬರೆದೆ.

ಸರಕಾರಕ್ಕೆ ಪ್ರತಿಕೂಲವಾಗಿದ್ದ ವರದಿಯ ಬಗ್ಗೆ ಪಶ್ಚಿಮಬಂಗಾಳ ಸರಕಾರ ತಾತ್ಸಾರ ತೋರಿತು. ಹೀಗಾಗಿ ಆಹಾರ ಚಳುವಳಿ ಗಂಭೀರ ತಿರುವನ್ನು ಪಡೆಯಿತು.

(ಮುಂದುವರಿಯುವುದು)

ಮನೆಗೆ ಬೆಂಕಿಯಿಟ್ಟು ಗಳ ಹಿರಿಯುವ ಬಿಜೆಪಿ

ರಾಜ್ಯ ಹೈಕೋರ್ಟ್ ತೀರ್ಪು ನೀಡಿದ ಕೂಡಲೇ ಕೆಲವು ಅತೃಪ್ತ ರಾಜಕೀಯ ಧುರೀಣರ ಕುಮ್ಮಕ್ಕಿನಿಂದ 'ಉತ್ತರ ಕರ್ನಾಟಕದ ಪ್ರತ್ಯೇಕ ರಾಜ್ಯ'ದತ್ತ ಹೋರಾಟದ ದಿಕ್ಕನ್ನೇ ಬದಲಾಯಿಸಿದ ದುರಂತ ಸಂಭವಿಸಿತು..... ಹೋರಾಟದ ಮುಂಚೂಣಿಯಲ್ಲಿದ್ದ ಧಾರವಾಡದ ವಕೀಲರ ಸರದಿ ಉಪವಾಸ ಸತ್ಯಾಗ್ರಹದ ವೇದಿಕೆಯಲ್ಲಿ ಹೋರಾಟದ ಬ್ಯಾನರ್ ಬದಲಾಯಿಸಿ, ಕಡಪಾ ಮೈದಾನದಲ್ಲಿ ಉತ್ತರ ಕರ್ನಾಟಕದ ಬಾವುಟವನ್ನು ಹಾರಿಸಲಾಯಿತು. ಹೊಸರಾಜ್ಯದ ರಾಜಧಾನಿ ಕುರಿತು, ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಸ್ಥಾನಗಳ ಹಂಚಿಕೆಗಾಗಿ ಸ್ಪರ್ಧೆಗಳೂ ಪ್ರಾರಂಭಗೊಂಡವು. ಸರಕಾರದ ಮೇಲೆ ಒತ್ತಾಯ ತರಲು ಪ್ರತ್ಯೇಕ ಕರ್ನಾಟಕ ರಾಜ್ಯದ ಬೇಡಿಕೆಯ ತಂತ್ರವನ್ನು ಬಳಸಿರುವುದಾಗಿ ವಕೀಲರ ಸಂಘದ ಧುರೀಣರು ಸಮಜಾಯಿಸಿದರೂ ಹೋರಾಟದ ದಿಕ್ಕು-ದೆಸೆ ತಪ್ಪಿತು. ಭಾರತದ ಸ್ವಾತಂತ್ರ್ಯ ಹೋರಾಟದ ಅಂಗವಾಗಿ ಕರ್ನಾಟಕದ ಏಕೀಕರಣಕ್ಕಾಗಿ ಮೂರು ವರ್ಷಗಳ ಕಾಲ ಅಪಾರ ತ್ಯಾಗ ಬಲಿದಾನಗಳಿಂದ ಹೋರಾಡಿದ ಹಿನ್ನೆಲೆಯಲ್ಲಿ, ಉತ್ತರ ಕರ್ನಾಟಕದ ಪ್ರತ್ಯೇಕ ರಾಜ್ಯದ ಬೇಡಿಕೆಗೆ ವ್ಯಾಪಕ ವಿರೋಧ ವ್ಯಕ್ತವಾಯಿತು.

ಬಾಗಲಕೋಟೆಯ ಅಖಿಲ ಭಾರತ 68ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಆ ಪ್ರಸ್ತಾವನೆಯನ್ನು ಸರ್ವಾನುಮತದಿಂದ ಖಂಡಿಸಲಾಯಿತು. ಪರಿಣಾಮವಾಗಿ, ಅಭಿವೃದ್ಧಿ ಯೋಜನೆಗಳಿಗಾಗಿ ನ್ಯಾಯಯುತ ಬೇಡಿಕೆಗಳನ್ನು ಒತ್ತಾಯಿಸಿ ನಡೆಯುತ್ತಿದ್ದ ಹೋರಾಟ ತನ್ನ ತೀವ್ರತೆಯನ್ನು ಕಳೆದುಕೊಂಡಿತು. ಅಧಿಕಾರರೂಢ ಕಾಂಗ್ರೆಸ್‌ಗೆ ಮತ್ತೆ ಉಸಿರಾಡಲು ಅನುಕೂಲವಾಯಿತು.

ಈ ಮಧ್ಯೆ, ಕಳೆದ ವಿಧಾನಸಭಾ ಹಾಗೂ ಪಂಚಾಯತ್ ಚುನಾವಣೆಗಳಲ್ಲಿ ಹೀನಾಯ ಸೋಲು ಅನುಭವಿಸಿದ ಬಿಜೆಪಿ ಹೈಕೋರ್ಟ್ ಪೀಠ ಹಾಗೂ ರೈಲ್ವೆ ವಲಯ ಬೇಡಿಕೆಗಳಿಗಾಗಿ ಪ್ರಾರಂಭವಾದ ಹೋರಾಟವನ್ನು ತನ್ನ ರಾಜಕೀಯ ವರ್ಚಸ್ಸನ್ನು ಪುನಃಶ್ಚೇತನಗೊಳಿಸಲು ದುರುಪಯೋಗಿಸಿತು. ಕದಡಿದ ನೀರಿನಲ್ಲಿ ಚೆಲ್ಲಾಟ ನಡೆಸಿತು. ಹುಬ್ಬಳ್ಳಿಯಲ್ಲಿ ಪ್ರತ್ಯೇಕ ರೈಲ್ವೆ ವಲಯ ಸ್ಥಾಪಿಸದಿದ್ದರೆ ರಾಜೀನಾಮೆ ನೀಡುವುದಾಗಿ ಘರ್ಜಿಸಿದ ಬಿಜೆಪಿ ಸಂಸತ್ ಸದಸ್ಯ ವಿಜಯ ಸಂಕೇಶ್ವರ ಸದ್ಯ ತನ್ನ 'ವಿ.ಆರ್.ಎಲ್' ಸ್ಥಾರಿಗೆ ಸಾಮ್ರಾಜ್ಯ ಹಾಗೂ 'ವಿಜಯ ಕರ್ನಾಟಕ' ಪತ್ರಿಕಾ ಸಾಮ್ರಾಜ್ಯ ವಿಸ್ತರಿಸುವುದರಲ್ಲಿ ಮುಳುಗಿದ್ದಾರೆ. ವಿಧಾನಸಭೆಯ ವಿರೋಧಿ ಧುರೀಣ ಜಗದೀಶ ಶೆಟ್ಟರ್ ಹುಬ್ಬಳ್ಳಿ-ಧಾರವಾಡ, ಬೆಳಗಾಂ, ಬಿಜಾಪುರ, ಬೆಂಗಳೂರು..... ಒಂದೊಂದು ಕಡೆಗಳಲ್ಲಿ ಒಂದೊಂದು ಹೇಳಿಕೆ ನೀಡಿ ಗೊಂದಲ ಉಂಟು ಮಾಡುತ್ತಿದ್ದಾರೆ. ಕೇಂದ್ರ ಸಚಿವ ಅನಂತಕುಮಾರ್ ಉತ್ತರ ಕರ್ನಾಟಕದ ನ್ಯಾಯಯುತ ಬೇಡಿಕೆಗಳನ್ನು ಕೇಂದ್ರ ಸರಕಾರಕ್ಕೆ ಮನವರಿಕೆ ಮಾಡಿಕೊಡಲು ವಿಫಲರಾಗಿದ್ದಾರೆ. ಉತ್ತರ ಕರ್ನಾಟಕಕ್ಕೆ ವಿಮಾನ ಸಂಪರ್ಕ ಒದಗಿಸುವುದಾಗಿ ಆಶ್ವಾಸನೆ ನೀಡಿ ವಚನ ಭ್ರಷ್ಟರಾಗಿದ್ದಾರೆ. ಪ್ರಧಾನಿ ವಾಜಪೇಯಿ 1996 ರಲ್ಲಿ ಸಂಸತ್ತಿನಲ್ಲಿ ವಿರೋಧಪಕ್ಷದ ನಾಯಕರಾಗಿ ಈ ಪ್ರದೇಶಕ್ಕೆ ಪ್ರತ್ಯೇಕ ಹೈಕೋರ್ಟ್‌ಪೀಠ ಅಗತ್ಯವಿದೆ ಎಂದು ಆಗಿನ ಪ್ರಧಾನಿಗೆ ಪತ್ರ ಬರೆದಿದ್ದರೂ, ಈಗ ಮೌನಿಬಾಬಾ ಆಗಿದ್ದಾರೆ. ಹೊಸರೈಲ್ವೆ ವಲಯಗಳಿಗೆ ಸಾಕಷ್ಟು ಸಂಪನ್ಮೂಲಗಳನ್ನು ಮುಂಗಡ ಪತ್ರದಲ್ಲಿ ಒದಗಿಸಲಿಲ್ಲ. ಹೈಕೋರ್ಟ್ ಪೀಠ ಸ್ಥಾಪನೆಗಾಗಿ ಪ್ರಧಾನಿಯನ್ನು ಒತ್ತಾಯಿಸಲು ಮುಖ್ಯಮಂತ್ರಿ ಕೃಷ್ಣರ ನೇತೃತ್ವದ ಸರ್ವಪಕ್ಷಗಳ ನಿಯೋಗವನ್ನು ಬಿ.ಜೆ.ಪಿ. ಬಹಿಷ್ಕರಿಸಿ ತನ್ನ ಓರೆ ಹಾಗೂ ಕೋರೆ ಹಲ್ಲುಗಳನ್ನು ತೋರಿಸಿದೆ. ರೈಲ್ವೆ ಅಗ್ನಿಶಾಮಕ ದಳವನ್ನು ಇತ್ತೀಚೆಗೆ ಹುಬ್ಬಳ್ಳಿಯಿಂದ ಸಿಕಂದರಾಬಾದಿಗೆ ಸ್ಥಳಾಂತರಿಸಿದ್ದು, ಅದನ್ನು ಮರಳಿ ಬರುವಂತೆ ಕೇಂದ್ರ ಸರ್ಕಾರವನ್ನು - ರೈಲ್ವೆ ಇಲಾಖೆಯನ್ನು ಒತ್ತಾಯಿಸಲು ಬಿಜೆಪಿ ವಿಫಲವಾಗಿದೆ.

ಜೂನ್ 25 ರಂದು ಧಾರವಾಡದ ವಕೀಲರ ಸಂಘದ ಸತ್ಯಾಗ್ರಹದ ವೇದಿಕೆಗೆ ಸಚಿವ ಎಚ್.ಕೆ.ಪಾಟೀಲ ಬಂದು ಮಾತುಕತೆ ನಡೆಸುತ್ತಿದ್ದಾಗ, ಬಿ.ಜೆ.ಪಿ. ಧುರೀಣ ದತ್ತ ಡೊರ್ಲೆ ಗುಂಡಾಗಿರಿ ನಡೆಸಿ, ಮಾತಿನ ಚಕಮಕಿ ನಡೆದು ವಕೀಲರ ಸಂಘದ ಅಧ್ಯಕ್ಷರಾದ ಬಿ.ಡಿ.ಹಿರೇಮಠ ಅವರ ಮೇಲೆ

ಪುಟ 4 ಕ್ಕೆ

ಪ್ರತ್ಯೇಕ ರಾಜ್ಯದ ಕೂಗು ಎಬ್ಬಿಸಿ ಭಂಡ 'ಹೋರಾಟ ನಡೆಸಿರುವ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು



ಕರ್ನಾಟಕ ಈ ವಾರ-ಒಂದು ನೋಟ

ಕಣ್ಮರೆಯಾದ ಕಕ್ಷಿದಾರರ ಹಿತ

ಹೈಕೋರ್ಟ್‌ನ ಪೀಠ ತಮ್ಮ ತಮ್ಮ ಜಿಲ್ಲೆಗಳಲ್ಲೇ ಆಗಬೇಕೆಂದು ಉ.ಕ. ಮತ್ತು ಹೈ.ಕರ್ನಾಟಕದ ಎಲ್ಲಾ ಜಿಲ್ಲೆಗಳ ವಕೀಲರ ಸಂಘಗಳು ವಾದಿಸತೊಡಗಿವೆ. ಬೇಡಿಕೆಯು ಮುಂದಿನ ವರದಿ ರಾಣೆಬೆನ್ನೂರು, ಹೊಸಪೇಟೆ, ರೋಣ ಮುಂತಾದವುಗಳದ್ದು ಬರಬಹುದು. ಕೆಲವರಂತೂ ಹೈದರಾಬಾದ್ ಕರ್ನಾಟಕವು ಉತ್ತರ ಕರ್ನಾಟಕದ ವ್ಯಾಪ್ತಿಗೆ ಬರುವುದಿಲ್ಲವೆಂದೂ ಸ್ಪಷ್ಟಪಡಿಸಿದ್ದಾರೆ. ಈನಡುವೆ ಹುಬ್ಬಳ್ಳಿ-ಧಾರವಾಡ ವಕೀಲರ ಸಂಘದ ಅಧ್ಯಕ್ಷರು ಸಚಿವ ಹಿಂಡಸಗೇರಿಯವರನ್ನು, ಕಲುಬುರ್ಗಿ ವಕೀಲರ ಸಂಘದ ಅಧ್ಯಕ್ಷರು ಸಚಿವ ಖರ್ಗೆ, ಧರ್ಮಸಿಂಗ್‌ರನ್ನು ಸಂಘದ ಸದಸ್ಯತ್ವದಿಂದ ಹಾಸ್ಯಾಸ್ಪದ ರೀತಿಯಲ್ಲಿ ಉಚ್ಚಾಟಿಸಿದ್ದಾರೆ. ಒಂದಾನೊಂದು ಕಾಲದಲ್ಲಿ ಇವರೂ ಕಾನೂನು ಪದವೀಧರರು ಎಂಬುದನ್ನು ಕರುನಾಡಿನ ಜನತೆಗೆ ನೆನಪಿಸಿದ್ದಾರೆ.

ಮುಖ್ಯಮಂತ್ರಿ ಕೃಷ್ಣರ ನೇತೃತ್ವದ ನಿಯೋಗ ಪ್ರಧಾನಿಯನ್ನು ಕಂಡು ವಾಪಾಸಾಗಿದೆ. ಕೃಷ್ಣರವರು ಮನವಿಯಲ್ಲಿಯೂ ಮತ್ತು ಬಹಿರಂಗವಾಗಿಯೂ ಹುಬ್ಬಳ್ಳಿಯೇ ಸೂಕ್ತವೆಂದು ಪ್ರತಿಪಾದಿಸತೊಡಗಿದ್ದಾರೆ. ಗೃಹಸಚಿವ ಖರ್ಗೆಯವರು ಕಲಬುರ್ಗಿಯೇ ಸೂಕ್ತವೆಂದು ಹೇಳುತ್ತಿದ್ದಾರೆ. ಸಂಸತ್ ಸದಸ್ಯ ಕೊಂಡಯ್ಯನವರು ಬಳ್ಳಾರಿಯನ್ನು ಶಿಫಾರಸು ಮಾಡುತ್ತಿದ್ದಾರೆ. ಹಿಂದೆ ಈ ಪೀಠಕ್ಕೆ ಕಲಬುರ್ಗಿ ಸೂಕ್ತವೆಂದು ಬಂಗಾರಪ್ಪ ಹೇಳಿದ್ದರು. ಒಟ್ಟಾರೆ ಸ್ಥಳದ ಬಗ್ಗೆ ಇಷ್ಟೊಂದುಗೊಂದಲಗಳು, ಬೇಡಿಕೆಗಳು ಇರುವಾಗ ಒಮ್ಮತ ತರಲು ಯತ್ನಿಸದೇ ಸ್ವತಃ ಮುಖ್ಯಮಂತ್ರಿಗಳೇ ನಿರ್ದಿಷ್ಟ ಸ್ಥಳ ಸೂಚಿಸುವುದು ಪರಿಸ್ಥಿತಿಯನ್ನು ದ್ವೇಷಮಯಗೊಳಿಸುತ್ತಿದೆ. ಚಳುವಳಿಯೂ ನಡೆದಿದೆ. ಪ್ರಾದೇಶಿಕ ಅಸಮಾನತೆ ತೊಲಗಿಸಲು ಸಿಂಗಾಪೂರ ಸಂಸ್ಥೆ ಕಂಪ್ಯೂಟರ್ ತಂತ್ರಜ್ಞಾನದ ಪಾರ್ಕ್‌ನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸುವುದು ಎಂಬುದು ಕಾರ್ಯಗತವಾಗಬೇಕಷ್ಟೆ. ಆದರೆ ಇಂತಹವುಗಳು ಅಸಮಾನತೆಯನ್ನು ಮೂಲಭೂತವಾಗಿ ತೊಲಗಿಸದೇ ಮೂಗಿಗೆ ಹಚ್ಚುವ ತುಪ್ಪವಾಗುವುದು. ಇತ್ತ ಬಿಜೆಪಿಯೂ ಪ್ರತಿ ಜಿಲ್ಲೆಗಳಲ್ಲಿಯೂ ರಾಡಿ ಎಬ್ಬಿಸತೊಡಗಿದೆ. ಒಟ್ಟಾರೆ ಕಕ್ಷಿದಾರರು, ಜನಸಾಮಾನ್ಯರ ಹಿತಗಳು ಕಣ್ಮರೆಯಾಗಿ ಸ್ಥಾಪಿತಹಿತಾಸಕ್ತಿಗಳು ವಿಜೃಂಭಿಸತೊಡಗಿವೆ. ಅವರೆಲ್ಲರೂ ರಾಜ್ಯದ ಜನ ಶಾಂತಿ-ನೆಮ್ಮದಿ, ಸಮನ್ವಯದಿಂದ ಚಿಂತಿಸಬಾರದು ಎಂದು ನಿರ್ಧರಿಸಿದಂತಿದೆ.

ಜನರೆದುರು ಅನಾವರಣಗಳ್ಳದ ಪ್ರೇತಾತ್ಮಗಳು:

ಬಿಜೆಪಿಯು ಆತ್ಮವಿರುವುದೇ ನಾಗಪುರದಲ್ಲಿ. ಇದ್ದಬದ್ದ ಆತ್ಮದ ತುಣುಕುಗಳನ್ನು ಅಮೆರಿಕಾಕ್ಕೆ ಅಡವಿಟ್ಟಮೇಲೆ ಆತ್ಮವಿಮರ್ಶೆ ಮಾಡಿಕೊಳ್ಳುವ ಮಾತನ್ನು ರಾಜ್ಯದ ಬಿಜೆಪಿ ನಾಯಕರು ಆಡುತ್ತಿದ್ದಾರೆ. ಪಂಚಾಯತ್ ಚುನಾವಣೆಯಲ್ಲಿ ಮಣ್ಣು ಮುಕ್ಕಿದೇಕೆಂದು ವಿಮರ್ಶಿಸಿಕೊಳ್ಳಲು ಮೊನ್ನೆ ಬಿಜೆಪಿ ಬೆಂಗಳೂರಿನಲ್ಲಿ ಸೇರಿತ್ತು. ಈ ಮೊದಲೇ ಸಭೆ ನಿಗದಿ ಮಾಡುವಾಗ ಕಾಂಗ್ರೆಸ್‌ನ ಹಣ, ಹೆಂಡವೇ ತಮ್ಮ ಸೋಲಿಗೆ ಕಾರಣವೆಂದು ಯಡಿಯೂರಪ್ಪನವರು ನಿರ್ಣಯ ನೀಡಿಯಾಗಿತ್ತು. ಆದರೂ ಈ ಸಭೆಯಲ್ಲಿ ನಡೆದಿದ್ದು ಬರೀ ಘೋಷಣೆ, ಹಳಹಳಿಕೆ, ಕೆಲವು ಕೂದಲು ಸೀಳಬಲ್ಲ ನಾಯಕಗಣಧಾರಿಗಳು ತಮ್ಮ ವಿರೋಧಿಗಳ ಮೇಲೆ ದೋಷಾರೋಪ ಪಟ್ಟಿ ಸಲ್ಲಿಸಿದರು. ರಾಜ್ಯ ನಾಯಕತ್ವ ಅಸಮರ್ಥವೆಂದರೆ, ಇನ್ನೂ ಕೆಲವರು ವಿರೋಧ ಪಕ್ಷದ ನಾಯಕ ಜಗದೀಶ್ ಶೆಟ್ಟರ್ ದುರ್ಬಲ ನಾಯಕ ಎಂದರು. ಇದಕ್ಕೆ ಕೆಲವರ ಖಂಡನೆ ಪ್ರತಿವಾದ ಮಂಡನೆಗಳು ಜೋರಾಗಿ ನಡೆದು ಭಿನ್ನಮತವು ಸ್ಫೋಟಗೊಂಡಿತು. ಆದರೆ ದಿನವಿಡೀ ಕೂಗಾಡಿದರೂ ತಮ್ಮ ಸೋಲಿನ ಕಾರಣ ಮಾತ್ರ ಗುರುತಿಸಲಿಲ್ಲ. ಹಿಂದೆ ವಾಜಪೇಯಿ ಬಗ್ಗೆ ಹುಟ್ಟಿಸಿದ್ದ ಭಾರಿ ಭ್ರಮೆಗಳು,

ನೋಡುಗ: ಗುರುಶಾಂತ್.ಎಸ್.ವೈ

ಹುಟ್ಟಿಸಿದ್ದ ಅಗಾಧ ನಿರೀಕ್ಷೆಗಳನ್ನು ಈಡೇರಿಸದೇ ಹೋದದ್ದು, ಹಾಗೆ ವಾಜಪೇಯಿಗೆ ಬಳಿದಿದ್ದ ಬಣ್ಣ ಕರಗಿದ್ದು, ಜನರಿಗೆ ಮಾಡಿದ ದ್ರೋಹಗಳನ್ನು ಗುರುತಿಸಲಿಲ್ಲ. ಅದು ಅವರಿಗೆ ಬೇಕಿಲ್ಲ. ಮೂಲಭೂತ ಪ್ರಶ್ನೆಗಳನ್ನು ಮರೆಸಲು, ವ್ಯಕ್ತಿನಿಷ್ಠ ಟೀಕೆಗಳನ್ನು ಮಾಡಲಾಗುತ್ತಿದೆ. ಪ್ರತೀಚುನಾವಣೆಗಳಲ್ಲಿ ಸೋತಾಗ ಇಂತಹ ಆತ್ಮವಿಮರ್ಶೆ ಮಾಡಬಯಸುವ ಬಿಜೆಪಿ, ಕಾಂಗ್ರೆಸ್‌ನಂತಹ ಬಲಪಂಥೀಯ ಪಕ್ಷಗಳಿಗೆ ಬೇಕಿರುವುದು ಜನವಂಚನೆ. ಉತ್ತರ ಪ್ರದೇಶದಲ್ಲಿ ನೆಲಕಚ್ಚಿರುವ ಬಿಜೆಪಿ ತನ್ನನ್ನು ಸಮರ್ಥಿಸಿಕೊಳ್ಳಲು ಮತ್ತೇನು ಮಂಕುಬೂದಿ ಹಿಡಿದಿದೆಯೋ ಕಾದುನೋಡಬೇಕು.

ಹೆಗಡೆಯವರಿಗೆ ರಾಜಕೀಯ ವೈರಾಗ್ಯ:

ರಾಮಕೃಷ್ಣ ಹೆಗಡೆಯವರನ್ನು ರಾಜಕಾರಣವೇ ನಿವೃತ್ತಿಯ ಅಂಚಿಗೆ ತಳ್ಳುತ್ತಿರುವಾಗ, ಹೆಗಡೆಯವರೇ ನಿವೃತ್ತರಾಗುವ ಯೋಜನೆಯನ್ನು ತೇಲಿಬಿಟ್ಟಿದ್ದಾರೆ. ಆದರೆ ಅವರ ನಿವೃತ್ತಿಯ ಘೋಷಣೆಯು ಸ್ಕೀಮಿನಲ್ಲಿ ಇದು ಏಷ್ಟನೆಯದು ಎಂಬುದಷ್ಟೇ ಪ್ರಶ್ನೆ. ಹೀಗೆ ಹೇಳಿಕೆ ಕೊಟ್ಟು ತಾವು ರಾಜಕಾರಣಕ್ಕೆ ಅನಿವಾರ್ಯ ಎಂದು ಬಿಂಬಿಸಿಕೊಳ್ಳಲು ನಡೆಸಿದ ಪ್ರಯತ್ನಗಳು ಹಲವಾರು. ಕೇಂದ್ರದ ಮಂತ್ರಿಮಂಡಲದಿಂದ ಝಾಡಿಸಿಕೊಂಡ ಮೇಲೆ ನಿಲುಕದ ದ್ರಾಕ್ಷಿ ಹುಳಿಯಾಯಿತು. ಬಾಯಲ್ಲಿ ನೀರಾಡಿಸಿಕೊಂಡು ದೇಶವೆಲ್ಲಾ ಸುತ್ತಿದ್ದರೂ ಅಧಿಕಾರದ ಹನಿ ನೀರೂ ಸಿಗದೇ ಎಲ್ಲೆಲ್ಲೂ ಬಣಗುಡುವ ಬಂಜರು ಭೂಮಿಯೇ ತೆರೆದುಕೊಂಡಿದೆ. ಅಂತೂ ಹೆಗಡೆಯವರೀಗ ರಾಜಕೀಯ ವೈರಾಗ್ಯ.

ವಿಸ್ತಾರಗೊಳ್ಳಬೇಕಾದ ಪಡಿತರ ಕಾರ್ಡುಗಳು:

ಪಡಿತರ ವಸ್ತುಗಳ ಬೆಲೆಗಳನ್ನು ಹಿಂದಿನ ದರಗಳಿಗೆ ಇಳಿಸಿ ಕಾಯ್ದುಕೊಳ್ಳಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಅದಕ್ಕಾಗಿ ಸಬ್ಸಿಡಿ ಮೊತ್ತವನ್ನು ತೆಗೆದಿರಿಸಿದೆ. ಆದರೆ ಕೇಂದ್ರ ಸರ್ಕಾರದ ಧಾಳಿ ನಿಂತಿಲ್ಲ. ಇನ್ನೂ ಸುಲಭ ದರಗಳಲ್ಲಿ, ಎಲ್ಲಾ ಅಗತ್ಯ ವಸ್ತುಗಳೂ ಸಿಗಬೇಕಾದರೆ ಕೇಂದ್ರವೇ ತನ್ನ ಸಬ್ಸಿಡಿ ನೀಡಬೇಕು. ಆದಾಗ್ಯೂ ರಾಜ್ಯ ಸರ್ಕಾರ ಕೊನೆಗಾದರೂ ಜನರ ಆಗ್ರಹಕ್ಕೆ ಮಣಿದಿದೆ.




ಇದರ ಬೆನ್ನಲ್ಲೇ ಪಡಿತರ ಕಾರ್ಡುಗಳನ್ನು ಹೊಸದಾಗಿ ವಿತರಿಸುವುದಾಗಿ ರಾಜ್ಯ ಸರ್ಕಾರ ಪ್ರಕಟಿಸಿದೆ. ಈ ಖೊಟ್ಟಿ ಕಾರ್ಡುಗಳು ಸಾವಿರಾರು ಇವೆಯೆಂಬುದು ನಿಜ. ಅವು ಬಡಜನರ ಕೈಯಲ್ಲಿರದೇ ಶ್ರೀಮಂತ, ಸ್ಥಿತಿವಂತರಲ್ಲೇ ಇವೆಯೆಂಬುದು ನಿಜ. ಆದ್ದರಿಂದ ಸರ್ಕಾರ ಅದಕ್ಕೆ ತಡೆಹಾಕಿ, ನಿಜವಾದ ಫಲಾನುಭವಿಗಳನ್ನು ಸಮರ್ಥವಾಗಿ ಗುರುತಿಸಿ, ಗ್ರಾಮಸಭೆಗಳನ್ನು ಪರಿಣಾಮಕಾರಿಯಾಗಿ ಬಳಸಿ ನೀಡುವಂತಾಗಬೇಕು. ಉದಾರೀಕರಣದ ಪರಿಣಾಮವಾಗಿ ಬಡತನ -ಬಡವರ ಸಂಖ್ಯೆ ಹೆಚ್ಚುತ್ತಿದೆ. ಇದನ್ನು ಸರಿಯಾಗಿ ಗುರುತಿಸಬೇಕು. ಕಾರ್ಡಿನ ವ್ಯಾಪ್ತಿಗೆ ತರಬೇಕು. ಆದ್ದರಿಂದ ಕಾರ್ಡುಗಳ ಸಂಖ್ಯೆ ವಿಸ್ತರಿಸಬೇಕು. ಆದರೆ ನಿಜವಾದ ಫಲಾನುಭವಿಗಳ ಹೆಸರಿನಲ್ಲಿ ಸಂಖ್ಯೆ ಕುಗ್ಗಿಸಿ, ರೇಟ್‌ಗಳನ್ನು ಇಳಿಸಿ ಸಮದೂಗಿಸುವ ದುಷ್ಟಯೋಚನೆ ಸರ್ಕಾರ ಮಾಡಕೂಡದು. ○

ನೀರಾವರಿ ಖಾಸಗೀಕರಣಕ್ಕೊಂದು ಹೊಸ ಹೆಸರು

ನೀರಾವರಿ ಸಹಕಾರ ಸಂಘಗಳು, ಮಹಾಮಂಡಳಗಳು

ಜಿ.ಎನ್.ನಾಗರಾಜ್



ನೀರಾವರಿ ಸುಧಾರಣೆಗಳಿಗಾಗಿ ಕರ್ನಾಟಕ ಸರಕಾರ ಧಿಡೀರನೆ ಒಂದು ಸುಗ್ರೀವಾಜ್ಞೆಯನ್ನೇ ಹೊರಡಿಸಿದೆ. ಅದು ಜಾರಿಗೂ ಬಂದು ಬಿಟ್ಟಿದೆ. ಯಾವುದೇ ಕಾನೂನನ್ನು ರಚಿಸಬೇಕಾದರೂ ಚುನಾಯಿತವಾದ ವಿಧಾನ ಮಂಡಲದ ಅಂಗೀಕಾರ ಪಡೆದುಕೊಂಡು ಅದರ ನಿರ್ದೇಶನದಂತೆಯೇ ರೂಪಿಸಬೇಕಾದದ್ದು ಸರ್ಕಾರದ, ಪ್ರಜಾಪ್ರಭುತ್ವ ಬದ್ಧಕರ್ತವ್ಯ. ಅದರಲ್ಲಿಯೂ ನೀರಾವರಿ ಯೋಜನೆಗಳಂತಹ ಕೋಟ್ಯಾಂತರ ಜನರಿಗೆ ಸಂಬಂಧಿಸಿದ ವಿಷಯದಲ್ಲಿಯಂತೂ ಇದನ್ನು ಚಾಚೂ ತಪ್ಪದೆ ಪಾಲಿಸಬೇಕು. ಆದರೆ ರಾಜ್ಯಪಾಲರಿಂದ ಸುಗ್ರೀವಾಜ್ಞೆ ಹೊರಡಿಸುವ, ವಿಧಾನಮಂಡಲದಲ್ಲಿನ ಚರ್ಚೆಯಿಂದ ತಪ್ಪಿಸಿಕೊಳ್ಳುವ ಮಾರ್ಗಕ್ಕೇಕೆ ಕೈಹಾಕಿತು? ವಿಧಾನಮಂಡಲದಲ್ಲಿ ತೀವ್ರ ವಿರೋಧ ಬರಬಹುದೆಂಬ ಭಯದಿಂದಲೇ?

ಈ ಸುಗ್ರೀವಾಜ್ಞೆಯಲ್ಲಿ ಕರ್ನಾಟಕದ ಜನರ ಒಪ್ಪಿಸಿ ಹೇರಬೇಕಾದದ್ದು ಬಹಳ ಇರಬೇಕು. ಜೊತೆಗೆ ಮತ್ತೊಂದು ಸಂದೇಹವೂ ಇದೆ. ವಿಶ್ವಬ್ಯಾಂಕ್‌ನ ಬಳಿ ಪ್ರತಿಯೊಂದಕ್ಕೂ ಕೈಒಡ್ಡಿರುವ ಸರ್ಕಾರ ನೀರಾವರಿಗೆ ಸಂಬಂಧಿಸಿದ ಸಾಲವೊಂದಕ್ಕೆ ಸಂಧಾನ ನಡೆಸುತ್ತಿರಬಹುದು. ಈ ಮಾತುಕತೆಗಳ ಸಂದರ್ಭದಲ್ಲಿ ವಿಶ್ವ ಬ್ಯಾಂಕ್ ಇಂತಹದೊಂದು ಕಾನೂನು ತಂದ ಮೇಲೆ ಮಾತ್ರ ಸಾಲದ ಮಾತು ಎಂದು ಖಡಾಖಂಡಿವಾಗಿ ಹೇಳಿರುವುದಕ್ಕೆ 'ಜೀಹುಜೂರ್' ಎಂದು ಆ ಆಜ್ಞೆಯನ್ನು ತರುವ ತರಾತುರಿ ಮಾಡಿದೆಯೇ?

ಈ ಪ್ರಶ್ನೆಗಳಿಗೆ ಇನ್ನೂ ಉತ್ತರಗಳು ಸಿಕ್ಕಿಲ್ಲ. ಈ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಬೇಕಾದವರು ವಿಧಾನಮಂಡಲದಲ್ಲಿ ಪ್ರಧಾನವಾಗಿ ವಿರಾಜಮಾನರಾಗಿರುವ ವಿರೋಧ ಪಕ್ಷಗಳ ನಾಯಕರು. ಪ್ರಧಾನವಾಗಿ ಬಿಜೆಪಿ, ಜನತಾದಳ (ಯು), ಜನತಾದಳ (ಎಸ್)ಗಳದ್ದು. ಆದರೆ ಈ ಪಕ್ಷಗಳಿಗೆ ಮಂತ್ರಿ ಪದವಿ ಸಮಾನವಾದ ಈ ನಾಯಕಸ್ಥಾನಗಳನ್ನು ಹಿಡಿದು ಅದರಿಂದ ಬರುವ ಸವಲತ್ತುಗಳನ್ನು ಪಡೆಯುವುದರಲ್ಲಿ ಆಸಕ್ತಿಯಿರುವಷ್ಟು ಜನರ ಬಗ್ಗೆ ಕಾಳಜಿ ಇಲ್ಲದಿರುವುದರಿಂದ ಇಂತಹದೊಂದು ಪ್ರಮುಖ ಕಾನೂನನ್ನು ಏಕೆ ವಿಧಾನ ಮಂಡಲದ ಮುಂದಿಡುವ ಧೈರ್ಯ ಮಾಡಲಿಲ್ಲ ಎಂದು ಕೇಳ ಹೋಗಲಿಲ್ಲ. ಹಾಗೂ ರಾಜ್ಯ ಸರ್ಕಾರಿ ಯಂತ್ರದ ಮೇಲೆ ತಮಗೆ ದತ್ತವಾಗಿರುವಷ್ಟು ಅಧಿಕಾರ ಬಲದಿಂದ ಏಕೆ ಈ ತರಾತುರಿ ತನಿಖೆ ಮಾಡಿ ಎಂದು ಜನರ ಮುಂದಿಡುವ ಗೋಜಿಗೆ ಹೋಗಿಲ್ಲ.

ಪ್ರಜಾಪ್ರಭುತ್ವವೆಂಬ ಈ ಪದ್ಧತಿಯಲ್ಲಿ ಹೀಗೆ ಜನರ ಪ್ರತಿನಿಧಿಗಳಿಂದ ಸರ್ಕಾರ ಹಾಗೂ ಚುನಾಯಿತ ವಿರೋಧ ಪಕ್ಷಗಳ ಜೊತೆಗೆ ಪತ್ರಿಕೆ ಮಾಧ್ಯಮಗಳ ಜವಾಬ್ದಾರಿಯೂ ಸೇರುತ್ತದೆ.

ಇದನ್ನು ಒಂದು ಮಹತ್ವದ ಸಾಧನೆ ಎಂದು ಬಣ್ಣಿಸಿದ ನೀರಾವರಿ ಸಚಿವರನ್ನು ಸುಗ್ರೀವಾಜ್ಞೆಯಾಗಿ ಏಕೆ ತಂದಿರಿ ಎಂದು ಪ್ರಶ್ನಿಸುವ, ಅದಕ್ಕೆ ಉತ್ತರವನ್ನು ತಾವೇ ಸ್ವಂತವಾಗಿ ತನಿಖೆ ಮಾಡಿ ಜನರ ಮುಂದಿಡಬೇಕಾದ ಹೊಣೆಯನ್ನು ಅವರು ನಿರ್ವಹಿಸಿಲ್ಲ. ಕೋಟ್ಯಾಂತರ ರೈತರಿಗೆ, ಕೂಲಿಕಾರರಿಗೆ, ಇಡೀ ಕೃಷಿ ವ್ಯವಸ್ಥೆಗೆ, ಆಹಾರ ಉತ್ಪಾದನೆಗೆ ಪ್ರಮುಖವಾಗಿರುವ ಈ ಕ್ರಮದ ಬಗ್ಗೆ ಒಂದೇ ಒಂದು ತನಿಖಾ ವರದಿ, ಸ್ವತಂತ್ರ ಅಭಿಪ್ರಾಯ ಪತ್ರಿಕೆಗಳಿಂದ ಮಾಧ್ಯಮಗಳಿಂದ ಬಂದಿಲ್ಲ. ಜನರ ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರತಿಬಿಂಬಗಳಾದ ಮಾಧ್ಯಮಗಳೂ ಹೀಗೆ ಸೋತಿವೆ.

ಇಲ್ಲಿವರೆಗೆ ಈ ಬಗ್ಗೆ ಪ್ರತಿಕ್ರಿಯೆ ಕೇವಲ ಕರ್ನಾಟಕ ಪ್ರಾಂತ ರೈತಸಂಘದಿಂದ ಮಾತ್ರ ಬಂದಿದೆ ನೀರಾವರಿ ಪ್ರದೇಶದಲ್ಲಿಯೇ ತಳವೂರಿ ಅಲ್ಲಿಯ ರೈತರಿಂದಲೇ ಬೆಳೆದ ರಾಜ್ಯ ರೈತ ಸಂಘದವರಿಂದಲೂ ಯಾವ ಪ್ರತಿಕ್ರಿಯೆಯೂ ಇಲ್ಲ.

ಈ ಸಂದರ್ಭದಲ್ಲಿ. ದುಡಿವ ಜನರ ಪ್ರಾಣಮಿತ್ರನೆಂಬ ಅಭಿಮಾನವುಳ್ಳ ಐಕ್ಯರಂಗ ಈ ಕಾನೂನಿನ ಒಳಹೊರಗನ್ನು ಬಿಚ್ಚಿಡುವ ಕರ್ತವ್ಯಕ್ಕೆ ಬದ್ಧವಾಗಿದೆ.

ನಾಲ್ಕು ಹಂತದ ಸಹಕಾರಿ ಮಂಡಳಿಗಳು

ರಾಜ್ಯ ಸರ್ಕಾರದ ಈ ಸುಗ್ರೀವಾಜ್ಞೆಯನ್ನು ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನುಗಳ ತಿದ್ದುಪಡಿ 2000 ಎಂದು ಕರೆಯಲಾಗಿದೆ. ಇದರಲ್ಲಿ ನಾಲ್ಕು ಹಂತದ ಸಹಕಾರಿ ಮಹಾಮಂಡಳದ ರಚನೆಯನ್ನು ನಿರೂಪಿಸಿದೆ. ಸುಮಾರು 500 ಎಕರೆ ನೀರಾವರಿ ಪ್ರದೇಶವನ್ನು ಒಳಗೊಳ್ಳುವಂತೆ ಬರುವ ರೈತರನ್ನು ಸದಸ್ಯರನ್ನಾಗುಳ್ಳ ಒಂದು ಪ್ರಾಥಮಿಕ ಹಂತದ ಬಳಕೆದಾರರ ಸಹಕಾರೀ ಸಂಘ, ಇದರ ಮೇಲೆ ಮುಖ್ಯ ಕಾಲುವೇ (ಡಿಸ್ಟಿಬ್ಯೂಟರಿ) ಹಂತದಲ್ಲಿ ಆ ಕಾಲುವೆಯ ಅಡಿಬರುವ ಪ್ರಾಥಮಿಕ ನೀರು ಬಳಕೆದಾರರ ಸಹಕಾರಿ ಸಂಘಗಳ ಒಕ್ಕೂಟ, ನಂತರ ನೀರಾವರಿ ಯೋಜನೆ ಮಟ್ಟದಲ್ಲಿ ಅಂದರೆ ತುಂಗಭದ್ರಾ ಅಣೆಕಟ್ಟು. ಕೃಷ್ಣರಾಜಸಾಗರ, ಇತ್ಯಾದಿ ನೀರಾವರಿ ಮಹಾಮಂಡಳಗಳು, ರಾಜ್ಯಮಟ್ಟದಲ್ಲಿ ನೀರಾವರಿ ಸಚಿವರೇ ಅಧ್ಯಕ್ಷರಾಗಿರುವ ನೀರಾವರಿ ಇಲಾಖೆ ಕಾರ್ಯದರ್ಶಿ ಕಾರ್ಯದರ್ಶಿಯಾಗಿರುವ ರಾಜ್ಯಮಟ್ಟದ ಅಪೆಕ್ಸ್ ಮಹಾಮಂಡಳ. ಹೀಗೆ ನಾಲ್ಕು ಹಂತದ ಮಹಾಮಂಡಳಗಳಲ್ಲಿ ರಾಜ್ಯಮಟ್ಟದಲ್ಲಿ ನೀರಾವರಿ ಯೋಜನೆಗಳನ್ನು ರೂಪಿಸುವುದರಿಂದ ಹಿಡಿದು ಯೋಜನೆಗಳ ನಿರ್ವಹಣೆ ಬೆಳೆಗಳ ಕಾರ್ಯ ಯೋಜನೆ ಯನ್ನು ರೂಪಿಸುವುದು, ಕಾಲುವೆ ರಿಪೇರಿಗಳ ಅಗತ್ಯವನ್ನು ಗುರುತಿಸುವುದು, ರಿಪೇರಿಯ

ಪುಟ 4 ಕ್ಕೆ

ನೀರಾವರಿ ಸಹಕಾರ ಸಂಘಗಳು........................

ಪುಟ 3 ರಿಂದ

ಉಸ್ತುವಾರಿ ವಹಿಸುವುದು ಇದರಲ್ಲಿ ಈ ಮಹಾಮಂಡಳಿಗಳಿಗೆ ಚುನಾಯಿತರಾದ ರೈತ ಪ್ರತಿನಿಧಿಗಳನ್ನು ಒಳಗೊಳ್ಳುವುದು ಇವೆಲ್ಲಾ ಸೇರಿವೆ.

ಈ ಯೋಜನೆಯನ್ನು ನೋಡಿದರೆ ಯಾರಾದರೂ ಮೇಲ್ನೋಟಕ್ಕೆ ಎಂತಹ ಒಳ್ಳೆಯ ಯೋಜನೆ, ನೀರಾವರಿ ಕೇವಲ ಅಧಿಕಾರ ಶಾಹಿ ಕಂಟ್ರಾಕ್ಟರುದಾರರ ಭ್ರಷ್ಟತನದ ಕೂಪಗಳಾಗಿ ಹೋಗಿರುವಾಗ ರೈತರನ್ನು ಅವರಿಂದ ಚುನಾಯಿತ ಪ್ರತಿನಿಧಿಗಳನ್ನು ಒಳಗೊಳ್ಳುವುದು ಎಂತಹ ಉತ್ತಮ ಯೋಚನೆ ಪ್ರಜಾಸತ್ತಾತ್ಮಕ ಆಡಳಿವಿಕೇಂದ್ರಿಕರಣದ ಒಂದು ಉತ್ತಮ ಮಾದರಿ ಎಂದೇ ಶ್ಲಾಘಿಸಬಹುದು. ಆದರೆ?

ಸಹಕಾರದ ಹಿಂದಿನ ಅಸಹಕಾರ:

ಹೀಗೇ ಅತ್ಯುತ್ತಮವಾಗಿ ಕಾಣುವ ಸಹಕಾರಿ ತತ್ವದ ವ್ಯವಸ್ಥೆಯನ್ನು ವಿಧಾನಮಂಡಲದಲ್ಲಿ ಚರ್ಚೆಗೇಕೆ ಇಡಲಿಲ್ಲ?

ಉತ್ತರಕ್ಕಾಗಿ ಬಹಳ ಏನೂ ಪರದಾಡಬೇಕಿಲ್ಲ. ಈ ಕಾನೂನಿನಲ್ಲಿಯೇ ಸಹಕಾರಿತತ್ವದ ಮುಸುಕನ್ನು ಸ್ವಲ್ಪ ಸರಿಸಿದರೆ ಅದು ಸ್ಪಷ್ಟವಾಗಿ ಗೋಚರಿಸುತ್ತದೆ.

ಅದರಲ್ಲಿಯೂ ಪ್ರಾಥಮಿಕ ಸಹಕಾರಿ ಸಂಘಗಳ ಕರ್ತವ್ಯ ಭಾರವೇನು ಎಂಬುದನ್ನು ಗಮನಿಸಿದರೇ ಸಾಕು. ಈ ಸಂಘಗಳು ತಮ್ಮ ಪರಿಧಿಯ ಒಳಗೆ ಬರುವ ಪ್ರದೇಶಕ್ಕೆ ರೈತರಿಗೆ ಬೇಕಾದ ನೀರನ್ನು ಯೋಜನೆಯಿಂದ ನಿಗದಿಪಡಿಸಲಾದ ದರಕ್ಕೆ ಕೊಳ್ಳಬೇಕು ಹಾಗೂ ಈ ಬೆಲೆಯನ್ನು ತೆರುವುದಕ್ಕೆ ಬೇಕಾದ ಹಣವನ್ನು ಅದನ್ನು ಹಂಚುವ ವ್ಯವಸ್ಥೆಗೆ ಹಾಗೂ ಹಂಚುವ ಕಾಲುವೆಗಳ ನಿರ್ವಹಣೆ ರಿಪೇರಿಗೆ ಬೇಕಾದ ವ್ಯವಸ್ಥೆಗೆ ಬೇಕಾದ ಹಣವನ್ನು ಗೊಳಿಸುವ, ರೈತರಿಂದ ವಸೂಲಿ ಮಾಡಿಕೊಡುವ ಕರ್ತವ್ಯ ಸಹಕಾರಿ ಸಂಘಗಳದ್ದು. ಈ ಸಂದರ್ಭದಲ್ಲಿ ಸಂಘಗಳಿಗೆ ಮಾರಲ್ಪಡುವ ನೀರಿನ ಬೆಲೆಯನ್ನು ನಿಗದಿಪಡಿಸುವ ಅಧಿಕಾರ ಈ ಸಹಕಾರಿ ವ್ಯವಸ್ಥೆಯ ಯಾವುದೇ ಹಂತದ ಮಹಾಮಂಡಳಗಳಿಗಿಲ್ಲ-ಯೋಜನಾಮಟ್ಟದ-ರಾಜ್ಯ ಮಟ್ಟದ ಮಹಾಮಂಡಳವೂ ಸೇರಿದಂತೆ. ಈ ಅಧಿಕಾರವೇನಿದ್ದರೂ ಸರ್ಕಾರದ್ದು ಮಾತ್ರ.

ಹೀಗಾಗಿ ರೈತರು ತೆರಬೇಕಾದ ನೀರಿನ ದರವನ್ನು ನಿರ್ಧರಿಸುವುದರಲ್ಲಿ ರೈತರ ಭಾಗವಹಿಸುವಿಕೆ, ಅವರ ಪ್ರತಿನಿಧಿಗಳು, ಈ ಸಮಿತಿಗಳಿಗೆ ಯಾವ ಅಧಿಕಾರವೂ ಇಲ್ಲ. ಹಾಗಾದರೆ ಈ ಮಂಡಳಗಳ ಅಧಿಕಾರವೇನು? ನಿಗದಿಪಡಿಸಿದ ದರವನ್ನು ವಸೂಲಿ ಮಾಡಿ ಸರ್ಕಾರಕ್ಕೆ ಒಪ್ಪಿಸಿ, ಸರ್ಕಾರ ಮಾರುವ ನೀರನ್ನು ಪಡೆಯುವುದು ಅಷ್ಟೆ.

ಸದ್ಯದಲ್ಲಿ ಜಾರಿಯಲ್ಲಿರುವ ವ್ಯವಸ್ಥೆಗೂ ಈ ವ್ಯವಸ್ಥೆಗೂ ಇರುವ ವ್ಯತ್ಯಾಸವೇನು?

ಇಂದೂ ನೀರಿನ ದರವನ್ನು ಸರ್ಕಾರ ನಿಗದಿ ಮಾಡುತ್ತಿದೆ. ವಿವಿಧ ಬೆಳೆಗಳಿಗೆ ಎಕರೆಗೆ ಇಷ್ಟು ಎಂಬಂತೆ. ಅದು ನೀರಾವರಿ ಯೋಜನೆಗಳ ದುರಸ್ಥಿಯ ಒಂದು ಸಣ್ಣ ಪಾಲೂ ಕೂಡ ಆಗುವುದಿಲ್ಲ. ಈ ದರವನ್ನು ಕಂದಾಯ ಇಲಾಖೆ ಕಂದಾಯ ಬಾಕಿಯ ಭಾಗವಾಗಿ ವಸೂಲಿ ಮಾಡುತ್ತದೆ. ಕಂದಾಯ ಸಲ್ಲಿಕೆಗೂ ನೀರು ಸರಬರಾಜಿಗೂ ನೇರ ಸಂಬಂಧವಿಲ್ಲ. ನೀರಿನ ದರ ಸಂದಾಯವಾಗಲಿಲ್ಲವೆಂದು ರೈತನೊಬ್ಬನಿಗೆ ನೀರಿನ ಸರಬರಾಜನ್ನು ನಿಲ್ಲಿಸುವಂತಿಲ್ಲ.

ಸಹಕಾರಿ ತತ್ವಗಳಡಿ ರೂಪಿಸಲಾದ ವ್ಯವಸ್ಥೆಯೆಂದರೆ ಇನ್ನು ಮುಂದೆ ನೀರಿನ ದರವನ್ನು ಅದರ ಪ್ರಮಾಣಕ್ಕೆ ಅನುಗುಣವಾಗಿ ಲೀಟರಿಗೆ ಇಷ್ಟು ಎಂಬಂತೆ ಕ್ಯೂಸೆಕ್‌ಗೆ (ಒಂದು ನಿಮಿಷದಲ್ಲಿ ಹರಿಯುವ ನೀರಿನ ಪ್ರಮಾಣ ಘನ ಅಡಿಗಳಲ್ಲಿ) ಇಷ್ಟು ಎಂದು ಸರ್ಕಾರ ನಿಗದಿಪಡಿಸುತ್ತದೆ. ಎಕರೆ ಲೆಕ್ಕದಲ್ಲಿ ಅಲ್ಲ. ಅದನ್ನು ಪ್ರಾಥಮಿಕ ಸಂಘಗಳು ನೀಡಿದರೆ ಅವರಿಗೆ ನೀರು ಸರಬರಾಜು ಮಾಡಲಾಗುತ್ತದೆ. ಇಲ್ಲದಿದ್ದರೆ ಇಡೀ ಸಂಘವೇ ಡಿಫಾಲ್ಟರ್ ಆಗುತ್ತದೆ. ಈ ಸಂಘದಲ್ಲಿ ಕೆಲವರು ಹಣ ನೀಡದಿದ್ದರೂ ಯಾರಿಗೂ ನೀರು



ಸಿಗುವುದಿಲ್ಲ ಎನ್ನುವಂತಾಗುತ್ತದೆ. ಈ ಕಾಲುವೆಗಳ ಉಸ್ತುವಾರಿ ನೀರು ಬಿಡುವುದು, ಬಂದ್‌ಮಾಡುವುದು ಇವುಗಳಲ್ಲಿ ಈ ಸಹಕಾರಿ ವ್ಯವಸ್ಥೆಗೆ ಏನು ಹತೋಟಿಯಿಲ್ಲ. ಎಲ್ಲ ಅಧಿಕಾರಿಗಳ ಮೂಲಕ ರಾಜ್ಯ ಸರ್ಕಾರದ್ದೇ. ಇದರಲ್ಲಿ ಸಹಕಾರಿತತ್ವವೇನಿಲ್ಲ ಸ್ವಾಹಾಕಾರಿತತ್ವ ಮಾತ್ರ.

ಸಹಕಾರಿ ಸಂಘಗಳ ಕೆಲಸವೇನಿದ್ದರೂ ಹೀಗೆ ಕ್ಯೂಸೆಕ್ಸ್‌ಗಳಾಗಿ ಕೊಂಡ ನೀರಿನ ಹಣವನ್ನು ಎಕರೆವಾರಾಗಿ ವಿಧಿಸಿ ವಸೂಲಿ ಮಾಡುವುದು. ನೀರಾವರಿಯಲ್ಲಿ ವಿದ್ಯುತ್ ಸರಬರಾಜಿನಂತೆ ಮೀಟರ್ ಅಳವಡಿಸಿ ಅಥವಾ ಪಂಪಸೆಟ್‌ಗಳಿಗೆ ಅಶ್ವ ಶಕ್ತಿಗೆ ತಕ್ಕಂತೆ ವಿದ್ಯುತ್‌ದರವನ್ನು ವಸೂಲಿ ಮಾಡುವುದು. ಅದನ್ನು ನೀಡಿದ್ದರೆ ಕಟ್ ಮಾಡುವುದು ಎಂಬಂತಹ ವ್ಯವಸ್ಥೆ ರೂಪಿಸುವುದು ಅಸಾಧ್ಯ. ನೀರು ತನ್ನ ಹೊಲದ ಮೇಲೆಯೇ ಹರಿಯುತ್ತಿರುವಾಗ ಹಣ ತೆತ್ತವನೂ ತೆರದವನೂ ಅದನ್ನು ಹೊಲಕ್ಕೆ ಹರಿಸಿಕ್ಕೊಳ್ಳಬಹುದು. ಈರೀತಿ ಮೀಟರ್‌ನಂತೆ ಬಿಲ್ ನೀಡಿ, ನೀಡದಿದ್ದರೆ ಕಟ್ ಮಾಡುವ ವ್ಯವಸ್ಥೆಯನ್ನು ನೀರಾವರಿಯಲ್ಲಿ ಸ್ಥಾಪಿಸುವುದಕ್ಕಾಗಿಯೇ ಈ ವ್ಯವಸ್ಥೆ ರೂಪುಗೊಂಡಿದೆ. ಸರ್ಕಾರ ಯಾವುದೇ ಮಾರ್ಗದಿಂದ ಮಾಡಲು ಸಾಧ್ಯವಿಲ್ಲದ ಹಣ ವಸೂಲಿಯ ಜವಾಬ್ದಾರಿಯನ್ನು ನಿಗದಿ ಮಾಡಲೆಂದು ಈ ಸಹಕಾರಿ ಹೆಸರಿನ ವ್ಯವಸ್ಥೆಯನ್ನು ರೂಪಿಸಿರುವುದು.

ಈ ನೀರಿನ ದರವಾದರೂ ಎಷ್ಟು? ಈಗಾಗಲೇ ಸರ್ಕಾರ ನೀರಿನ ದರ ನಿಗದಿ ಮಾಡುವ ತತ್ವವನ್ನು ಘೋಷಿಸಿದೆ. ಯಾವ ವಸ್ತುವಿಗೆ ಅಥವಾ ಸೇವೆಗೆ ಎಷ್ಟು ಖರ್ಚಾಗುವುದೋ ಅಷ್ಟು ಬೆಲೆ ನೀಡಬೇಕು. ಈ ತತ್ವದಂತೆ ನೀರಾವರಿ ಅಣೆಕಟ್ಟು, ಕಾಲುವೆಗಳು, ಅದರ ಸಿಬ್ಬಂದಿ ವೇತನ, ಕಂಟ್ರಾಕ್ಟರ್, ರಾಜಕಾರಣಿಗಳು ಕಬಳಿಸಿದ ಹಣ ಇವೆಲ್ಲಾವನ್ನು ಸೇರಿಸಿ ನಿಗದಿ ಮಾಡಲಾದ ದರವನ್ನು ಪ್ರತಿ ಕ್ಯೂಸೆಕ್ಸ್‌ಗೆ ಇಷ್ಟು ಎಂದು ವಿಧಿಸಲಾಗುತ್ತದೆ. ಈ ತತ್ವವನ್ನು ನಿರೂಪಿಸಿದವರು ಯಾರು? ಕರ್ನಾಟಕದ ಜನರೇ? ರೈತರೇ? ಯಾವುದೂ ಅಲ್ಲ, ವಿಶ್ವಬ್ಯಾಂಕ್-ಐ.ಎಂ.ಎಫ್. ಸಾಲಗಳ ಶರತ್ತುಗಳ ಭಾಗ. ಹೀಗಾಗಿ ವಿಶ್ವಬ್ಯಾಂಕ್ ಈ ಅಜ್ಞೆಯನ್ನು ಯಾವುದಕ್ಕೆ ಎಷ್ಟು ಖರ್ಚಾಗುತ್ತದೆ, ಎಷ್ಟು ಬೆಲೆ ವಸೂಲಿ ಮಾಡಬೇಕು ಎಂಬ ಆಜ್ಞೆಯನ್ನು ನೀರಾವರಿಯಲ್ಲಿ ಜಾರಿ ಮಾಡುವುದು ಅಸಾಧ್ಯವಾಗಿತ್ತು. ಅದನ್ನು ಸಾಧ್ಯಮಾಡಲೊಂದು ವ್ಯವಸ್ಥೆ ಇದು. ಅತ್ಯಂತ ಪ್ರಜಾಸತ್ತಾತ್ಮಕವಾಗಿ ಅಧಿಕಾರದ ವಿಕೇಂದ್ರಿಕರಣವಾಗಿ ಕಾಣುವ ಸುಂದರ ವ್ಯವಸ್ಥೆಯ ಹಿಂದಿನ ಕುರೂಪವಿದು. ವಿಶ್ವಬ್ಯಾಂಕ್ ಆಜ್ಞೆಯ ಜಾರಿಗೊಂದು ವ್ಯವಸ್ಥೆ.

ಬೆಲೆ ತೆತ್ತವರಿಂದ ಮತ್ತೊಮ್ಮೆ ವಸೂಲಿ:

ಈ ನೀರು ವಸೂಲಿ ಮಾಡುವುದು ಯಾವ ಆಧಾರದ ಮೇಲೆ? ಯಾವುದೇ ವಸ್ತುವಾದರೂ ಕೊಳ್ಳುವಾಗಲೇ ಹಣ ನೀಡಬೇಕು. ಅದರಲ್ಲಿ ಏನೂ ಸಂಶಯವಿಲ್ಲ. ನೀರಿನ ವಿಷಯದಲ್ಲಿಯೂ ಆರೋಗ್ಯ, ಶಿಕ್ಷಣ ಸೇವೆಗಳ ವಿಷಯದಲ್ಲಿಯೂ ಅಷ್ಟೇ ಎನ್ನೋಣ. ಆದರೆ ಈ ನೀರಾವರಿ ಯೋಜನೆಗಳನ್ನು ಕಟ್ಟುವುದಕ್ಕೆ ಹಣ ಎಲ್ಲಿಂದ ಬಂತು?

ಯಾರಾದರೂ ಆಕಾಶದಿಂದ ಉದುರಿಸಿದರೇ? ಖಾಸಗೀಯವರು, ವಿದೇಶದವರು ನೀಡಿದ್ದಾರೆಯೇ? ಈ 54 ವರ್ಷಗಳಲ್ಲಿ ನಿರ್ಮಾಣವಾದ ಪ್ರತಿಯೊಂದು ನೀರಾವರಿ ಯೋಜನೆಯ ಹಣ ಬಂದುದು ಭಾರತ ದೇಶದ ಜನರು ನೀಡುತ್ತಿರುವ ತೆರಿಗೆಯಿಂದ. ಹೀಗಾಗಿ ನೀರನ್ನು ಕೊಳ್ಳುವುದಕ್ಕೆ ಬಹಳ ಮೊದಲೇ ಅನೇಕ ವರ್ಷ, ದಶಕಗಳ ಮೊದಲೇ ರೈತರು ತೆರಿಗೆಗಳ ರೂಪದಲ್ಲಿ ಹಣವನ್ನು ನೀಡಿದ್ದಾರಲ್ಲ.

ಹೀಗಾಗಿ ಅವರಿಂದ ಆಯಾ ವಸ್ತುವಿನ ವೆಚ್ಚವನ್ನು ಪಡೆಯುವುದು ಯಾವ ನ್ಯಾಯ? ಈಗಾಗಲೇ ಮುಂಗಡ ಹಣ ಕೊಟ್ಟು ಕೊಂಡ ವಸ್ತುವಿಗೆ ಮತ್ತೆ ಬೆಲೆಕೇಳಿದಂತಾಗಿದೆ ಇದು.

ಸರ್ಕಾರ ಮತ್ತು ನೀರಾವರಿಯ ಹೊಣೆ:

ಇವುಗಳ ಜೊತೆಗೆ ಸಹಕಾರಿ ಮಂಡಲಗಳು ನೀರಾವರಿ ನಿರ್ವಹಣೆ ಕಾಲುವೆ ರಿಪೇರಿಗೆಂದು ಸಂಸ್ಥೆಗಳಿಂದ ಸಾಲ ಪಡೆಯುವುದಕ್ಕೆ ಅವಕಾಶ ಮಾಡಲಾಗಿದೆ. ಇಲ್ಲಿಯವರೆಗೆ ಸರ್ಕಾರದ ಬಜೆಟ್ ನಿಂದಲೇ ಇದನ್ನು ನಿರ್ವಹಿಸುತ್ತಿದ್ದ ಸರ್ಕಾರ ಇನ್ನು ಮುಂದೆ ನೀರಾವರಿ ನಿರ್ವಹಣೆಗಾಗಿ ಸರ್ಕಾರ ಹಣ ನೀಡದು. ಬೇಕಾದರೆ ಸಾಲ ಪಡೆಯಿರಿ ನಂತರ ರೈತರಿಂದ ವಸೂಲಿ ಮಾಡಿ ವಾಪಸು ಮಾಡಿರಿ ಎನ್ನುವ ಧೋರಣೆಯ ನೋಟಿಸ್ ಇದು. ನೀರಾವರಿಯ ಅಭಿವೃದ್ಧಿಯ ಹೊಣೆಯಿಂದ ಜಾರಿಕೊಳ್ಳುತ್ತಿರುವ ಧೋರಣೆ. ಹೀಗೆ ನೀರಾವರಿ ಯೋಜನೆಗಳ ನಿರ್ಮಾಣದ ಹಣ, ನಿರ್ವಹಣೆಯ ಹಣ ಪೂರ್ಣ ರೈತರಿಂದಲೇ ಎನ್ನುವ ಧೋರಣೆಯಿಂದ ಸರ್ಕಾರ ತನ್ನ ಹೊಣೆಯಿಂದ ಜಾರಿಕೊಂಡು ನೀರಾವರಿಯನ್ನು ಖಾಸಗೀಕರಿಸುವುದಕ್ಕೆ ಈ ಸಹಕಾರಿ ಎಂಬ ನಾಮಕರಣ ಮಾಡಿದೆ.

ಈಗಾಗಲೇ ನೀರಾವರಿ ಅಭಿವೃದ್ಧಿಗೆಂದು ವಿಶ್ವಬ್ಯಾಂಕ್ ಸರ್ಕಾರ ಆರಂಭಿಸಿದ ನೀರಾವರಿ ಬಾಂಡ್‌ಗಳು ಇವುಗಳಿಗೆ ಶೇ 16 ರಷ್ಟು ಬಡ್ಡಿತೆರಬೇಕಾಗಿದೆ. ಮುಂದೆ ಸಹಕಾರಿ ಸಂಘಗಳು ಪಡೆಯುವ ಸಾಲಕ್ಕೂ ಬಡ್ಡಿ ತೆರುವುದು ಇವುಗಳಿಂದಾಗಿ ಸರ್ಕಾರ ನಿಗದಿಪಡಿಸುವ, ಬಳಕೆದಾರರ ಸಂಘಗಳು ನಿಗದಿಪಡಿಸುವ ನೀರಿನ ದರ ಮುಗಿಲೆತ್ತರಕ್ಕೆ ಹೋಗುತ್ತದೆ. ಈಗಾಗಲೇ ಆಮದು ನೀತಿಯಿಂದಾದ ಬೆಲೆ ಕುಸಿತದಿಂದ ರಸಗೊಬ್ಬರ, ಔಷಧಿ ಮೊದಲಾದ ಸಾಮಗ್ರಿಗಳ ಬೆಲೆ ಏರಿಕೆಯಿಂದ ದಿವಾಳಿಯಾಗಿರುವ ರೈತನಿಗೆ ನೀರಿನ ದರ ಎಕರೆಗೆ 500-1000ರೂಗೆ ಏರಿಸುವ ಈ ನೀತಿ ಉರಿವೆ ಗಾಯದ ಮೇಲೆ ಉಪ್ಪಲ್ಲ ಮುಳುಗುತ್ತಿರುವವನ ಮೇಲೆ ಕಲ್ಲು ಹೇರಿದಂತೆ.

ಭೂಮಿ, ಬಡ್ಡಿ, ದುರ್ಲಾಭಗಳ ಜೊತೆಗೆ ನೀರಿನ ಹತೋಟಿ:

ಭೂಮಿ ಇಂದೂ ಕೂಡ ಕೆಲವರದೇ ಕೈಯಲ್ಲಿ ಕೇಂದ್ರಿಕೃತವಾಗಿದೆ. ನೂರಾರು ಸಾವಿರಾರು ಎಕರೆ ನೀರಾವರಿ ಭೂಮಿಯನ್ನು ಪಡೆದಿರುವ ಭೂಮಾಲಕರ ಅಟ್ಟಹಾಸ ಹೇಳತೀರದು. ಅವರು ಭೂಮಿಯ ಮೇಲಿನ ಹಿಡಿತದಿಂದ ಇಡೀ ಗ್ರಾಮೀಣ ಪ್ರದೇಶವನ್ನೆ ಮುಷ್ಠಿಯಲ್ಲಿರಿಸಿಕೊಂಡಿದ್ದಾರೆ. ಭೂಮಿಯನ್ನು ಗೇಣಿಗೆ, ಲೀಸ್‌ಗೆ ಕೊಟ್ಟು ಕೂಲಿಕಾರರ ಮೂಲಕ ಬೇಸಾಯ ಮಾಡಿಸಿ ಗಳಿಸಿದ ಲಕ್ಷಾಂತರ ಹಣವನ್ನು ದುಬಾರಿ ಬಡ್ಡಿಗೆ ನೀಡಿ ಗ್ರಾಮೀಣ ಪ್ರದೇಶದ ಜನರನ್ನು ಹುರಿದು ಮುಕ್ಕುತ್ತಾರೆ. ಅವರೇ ಇಂದು ರೈತರಿಗೆ ರಸಗೊಬ್ಬರ-ಔಷಧಿ ಮಾರುವ ಅಂಗಡಿಗಳ ಮಾಲೀಕರು, ರೈತರು ಬೆಳೆದ ಫಸಲನ್ನು ಕೊಳ್ಳುವವರು, ಕೊಳ್ಳೆಗಾರರು, ಅವರೇ ಸರ್ಕಾರದ ಯೋಜನೆಗಳ ಹಣವನ್ನು ಲೂಟಿಹೊಡೆಯುವ ಕಂಟ್ರಾಕ್ಟರ್‌ಗಳು. ಬ್ಯಾಂಕ್‌ಗಳ ಸಾಲಗಳನ್ನು ಕಬಳಿಸಿದವರೂ ಆವರೇ, ಗ್ರಾಮಗಳ ಸಹಕಾರ ಸಂಘಗಳ, ಪಂಚಾಯತ್‌ಗಳ ಧಣಿಗಳು.

ಈಗಾಗಲೇ ಕೃಷಿ ಸಹಕಾರ ಸಂಘಗಳು ಭೂ ಅಭಿವೃದ್ಧಿ ಸಂಘಗಳಿಗೆ ರಾಜ್ಯಾದ್ಯಂತ ಒದಗಿರುವ ಪಾಡನ್ನು ನೋಡಿದರೆ ಸಾಕು, ಇವರ ಕೈಯಲ್ಲಿ ಏನು ಕೊಟ್ಟರೂ ಸ್ವಾಹಾ ಎಂದು ಗೊತ್ತಾಗುತ್ತದೆ. ಸಹಕಾರಿ ಸಂಘಗಳೆಲ್ಲದರ ಸಾಲವನ್ನು ನುಂಗಿ ನೀರು ಕುಡಿದು ಈ ನದಿ ಒಣಗಿ ಹೋಗುವಂತೆ ಮಾಡಿರುವವರು ಅವರೇ. ಗ್ರಾಮೀಣ ಪ್ರದೇಶದಲ್ಲಿ ಇಂತಹ ಪರಿಸ್ಥಿತಿಯಿರುವಾಗ ನೀರಾವರಿ ಬಳಕೆದಾರರ ಸಂಘಗಳೂ ಕೂಡ ಅವರ ಹತೋಟಿಗೇ ಸಿಲುಕುತ್ತವೆ.

ನೂರಾರು ಸಾವಿರಾರು ಎಕರೆಗಳ ಈ ಮಾಲಿಕರ ಹತೋಟಿಗೆ ಬಂದ ಸಂಘಗಳಿಂದ ಇವರ ನಡುವೆ ಇರುಕಲಿನಲ್ಲಿ ನಾಲೆಗಳ ಕೊನೆಯಲ್ಲಿ ಜಮೀನು ಪಡೆದ 1-2 ಎಕರೆ 10-20 ಎಕರೆಗಳ ರೈತರಿಗೆ ನ್ಯಾಯವಾಗಿ ನೀರು ಸಿಗುತ್ತದೆಯೇ?

ರೈತರಿಂದ ಬಿಡದೆ ಹಣ ವಸೂಲಿ ಮಾಡಿ ಅದನ್ನು ದುರುಪಯೋಗ ಮಾಡಿಕೊಂಡು ಜೊತೆಗೆ ತಮ್ಮ ಭೂಮಿಗಳಿಗೆ ಹರಿದ ನೀರಿಗೆ ಲೆಕ್ಕವೂ ಇಡದೆ, ನೀರಿನ ದರವನ್ನು ನೀಡದೆ ಇಡೀ ಪ್ರದೇಶಕ್ಕೆ ನಿರು ಬರದಂತಹ ಪ್ರಸಂಗಗಳು ಬಂದರೇ ಅದಕ್ಕೆ ಹೊಣೆ ಯಾರು? ನೀರಿನ ಹಂಚಿಕೆಗಳ ವಿಷಯದಲ್ಲಿಯೇ ದಿನ ನಿತ್ಯವೂ ಆಗುವ ಕದನಗಳ ಪರಿಹಾರ ಈ ಪಟ್ಟಭದ್ರ ಹಿತಾಸಕ್ತಿಗಳಿಂದ ಆಗುತ್ತದೆಯೇ? ಬಡರೈತರಿಗೆ ಇವರಿಂದ ನೀರು ದೊರಕುತ್ತದೆಯೇ? ಇವೆಲ್ಲಾ ಪ್ರಶ್ನೆಗಳು ಏಳುತ್ತವೆ. ಪ್ರಬಲವಾದ, ಬಡರೈತರೇ ಪ್ರಧಾನವಾದ ರೈತರ, ಕೂಲಿಕಾರರ ಚಳುವಳಿಗಳು ಮಾತ್ರವೇ ನೀರಿನ ಹಂಚಿಕೆಯಲ್ಲಿ ಗ್ರಾಮೀಣ ಪ್ರದೇಶ ರಣರಂಗವಾಗಿ ಪರಿವರ್ತನೆಯಾಗುವುದನ್ನು ತಪ್ಪಿಸಲು ಸಾಧ್ಯ.

ಪುಟ 2 ರಿಂದ


.... ಗಳ ಹಿರಿಯುವ ಬಿಜೆಪಿ

ಕಿಡಿಗೇಡಿಗಳು ಹಲ್ಲೆ ನಡೆಸುವಂತಾಯಿತು. ಅದರ ವಿರುದ್ಧ ಧಾರವಾಡ ಬಂದ್‌ಗೆ ಕರೆಕೊಟ್ಟು ದತ್ತ ಡೊರ್ಲೆ ಬಂದ್‌ನ ದಿನ ಜೂನ್ 26 ರಂದು ನಾಪತ್ತೆಯಾಗಿದ್ದರು. ಬಿ.ಜೆ.ಪಿ. ಮುಖಂಡರು ತಮ್ಮ ರಾಜಕೀಯ ಸ್ವಾರ್ಥಕ್ಕೆ ಉತ್ತರ ಕರ್ನಾಟಕದ ಪ್ರತ್ಯೇಕ ರಾಜ್ಯಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೆಂಬಲಿಸಲೂ ಹೇಸುವುದಿಲ್ಲ ಎಂದು ಈಗ ಬಟ್ಟಬಯಲಾಗಿದೆ. ಅಧಿಕಾರ ಕಳೆದುಕೊಂಡ ಜನತಾದಳದ ಎರಡೂ ಬಣಗಳ ಕೆಲವು ಸ್ಥಳೀಯ ಮುಖಂಡರು ಬಿ.ಜೆ.ಪಿ.ಯ ಸ್ವಾರ್ಥ ರಾಜಕೀಯದ ವರ್ಚಸ್ಸಿಗೆ ಒಳಗಾಗುತ್ತಿರುವುದು ವಿಷಾದನೀಯ.

ಬಂಡವಾಳಶಾಹಿ-ಭೂಮಾಲಕ ಪ್ರಭುತ್ವದಲ್ಲಿ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆ ಇದ್ದೇ ಇರುವುದು. ದೇಶದ ವಿವಿಧ ರಾಜ್ಯಗಳಲ್ಲಿ, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ, ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಅಸಮಾನತೆ ಇರುವುದು. ಮಂತ್ರಿಗಳು, ಶಾಸಕರು, ಸಂಸತ್ ಸದಸ್ಯರು ಇರುವುದೇ ತಮ್ಮ ಶಕ್ತಿಯನುಸಾರ ಸಂಪತ್ತು ಆದಾಯಗಳನ್ನು ದೋಚಿಕೊಳ್ಳಲು, ಎಲ್ಲಾ ಪ್ರದೇಶಗಳ ಸಮಾನ ಅಭಿವೃದ್ಧಿಯ ಅಭಿಲಾಷೆಗಳು ಅವರಿಗಿಲ್ಲ. ಹೈಕೋರ್ಟ್ ಪೀಠ, ರೈಲ್ವೆ ವಲಯ ಮುಂತಾದ ಬೇಡಿಕೆಗಳನ್ನು ಒತ್ತಾಯಿಸಿ ಜನರನ್ನು ಭಾವೋದ್ರೇಕಗೊಳಿಸಿ ಹೋರಾಟಕ್ಕೆ ಇಳಿಸುವವರು ಕೇಂದ್ರ-ರಾಜ್ಯ ಸರ್ಕಾರಗಳ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಆಧಾರಿತ ಆರ್ಥಿಕ ನೀತಿಗಳಿಂದ ಜನರು ಬೆಲೆ ಏರಿಕೆ-ಹಣದುಬ್ಬರದಿಂದ ತತ್ತರಿಸುವುದನ್ನು, ರೈತರು ತಮ್ಮ ಬೆಳೆಗಳಿಗೆ ನ್ಯಾಯಬೆಲೆ ಸಿಗದೆ ಆತ್ಮಹತ್ಯೆಯ ದಾರಿ ಹಿಡಿಯುತ್ತಿರುವುದನ್ನು, ಸಣ್ಣ ಕೈಗಾರಿಕೆಗಳು ಕುಸಿದು ಬಿದ್ದು ನಿರುದ್ಯೋಗ ಹೆಚ್ಚುತ್ತಿರುವುದನ್ನು ಗಮನಿಸುವುದಿಲ್ಲ. ಜನವಿರೋಧಿ ಆರ್ಥಿಕ ನೀತಿಗಳನ್ನು ಪ್ರತಿಭಟಿಸಿ ರೈತ-ಕಾರ್ಮಿಕರು, ವಿದ್ಯಾರ್ಥಿ, ಯುವಜನರು ನಡೆಸುತ್ತಿರುವ ಪ್ರಜಾಪ್ರಭುತ್ವವಾದಿ ಹೋರಾಟಗಳಲ್ಲಿ ಭಾಗವಹಿಸುತ್ತಿಲ್ಲ. ಹುಬ್ಬಳ್ಳಿ-ಧಾರವಾಡದಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಪ್ಲೈವುಡ್‌ಕಾರ್ಖಾನೆ, ಪೈಪ್ಸ್ ಹಾಗೂ ಎಣ್ಣೆ ಮಿಲ್, ಮಹದೇವ ಟೆಕ್ಸ್‌ಟೈಲ್ಸ್ ಮುಚ್ಚಿಹೋದುದರ ವಿರುದ್ಧ, ಮೈಸೂರ್ ಕಿರ್ಲೋಸ್ಕರ್ ಮತ್ತು ಕೆ.ಎಸ್.ಆರ್.ಟಿ.ಸಿ.ಯ ಪ್ರಿಂಟಿಂಗ್ ವಿಭಾಗ ಸ್ಥಳಾಂತರಗೊಂಡ ವಿರುದ್ಧ ಹೋರಾಟಗಳಲ್ಲಿ ಪಾಲುಗೊಳ್ಳಲಿಲ್ಲ. ಯೋಜನಾಬದ್ಧ ಆರ್ಥಿಕ ಅಭಿವೃದ್ಧಿಯ ಮಾರ್ಗ ಬಿಟ್ಟು ಜಾಗತೀಕರಣ-ಖಾಸಗೀಕರಣದಿಂದ ಪ್ರಾದೇಶಿಕ ಅಸಮಾನತೆ ಇನ್ನಷ್ಟು ಹೆಚ್ಚುತ್ತಿರುವುದನ್ನು ಇವರು ಗಮನಿಸುತ್ತಿಲ್ಲ. ಕಾರಣ, ಪ್ರಾದೇಶಿಕ ಅಸಮಾನತೆ ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿದ್ದರೂ, ರಾಜ್ಯದ ಬೇರೆ ಪ್ರದೇಶಗಳಲ್ಲಿಯೂ ಈ ನೋವು ನ್ಯೂನತೆಗಳಿವೆ. ಇವುಗಳನ್ನು ಹೋಗಲಾಡಿಸಲು ವಿಶಾಲ ತಳಹದಿಯ ಐಕ್ಯಹೋರಾಟ ನಡೆಸಬೇಕಾಗುವುದು.

ಟೆಲಿಕಾಂ ನೌಕರರಿಗೆ ಉಚಿತ ದೂರವಾಣಿ....!

ಸಾಮ್ರಾಜ್ಯಶಾಹಿಗೆ ಟೆಲಿಕಾಂ ಇಲಾಖೆ ಉಚಿತವಾಗಿ......!?



ಮೀನಾಕ್ಷಿ ಸುಂದರಂ

ದೂರ ಸಂಪರ್ಕ ಕ್ಷೇತ್ರದಲ್ಲಿ ಕೆಲಸ ಮಾಡುವ ನೌಕರರಿಗೆ ಉಚಿತವಾಗಿ ದೂರವಾಣಿ ಸಂಪರ್ಕ ಕೊಡುವುದಾಗಿ ಕೇಂದ್ರ ಸರ್ಕಾರ ಪ್ರಕಟಿಸಿದ ಕೂಡಲೇ ವಿರೋಧ ಹಾಗೂ ವಿಮರ್ಶೆಗಳು ಎದ್ದಿವೆ.

ರಾಂ ವಿಲಾಸ್ ಪಾಸ್ವಾನ್‌ರ ಪ್ರಕಟಣೆ.......?

ಶ್ರೀಮತಿ ಸುಷ್ಮಾ ಸ್ವರಾಜ್‌ರವರು ದೂರಸಂಪರ್ಕ ಖಾತೆಯು ಸಚಿವರಾಗಿದ್ದಾಗ ಕೆಲಸದಿಂದ ನಿವೃತ್ತಿಗೊಂಡ 'ಟೆಲಿಕಾಂ' ನೌಕರರಿಗೆ ಮಾಸಿಕ ಬಾಡಿಗೆ ರಹಿತ ರಿಯಾಯಿತಿ ದೂರವಾಣಿ ಸಂಪರ್ಕ ನೀಡಲು ಆಜ್ಞೆ ಮಾಡಿದರು. ಈಗಾಗಲೇ ಗ್ರೂಪ್ ಎ ಹಾಗೂ ಗ್ರೂಪ್ ಬಿ ಅಧಿಕಾರಿಗಳಿಗೆ 'ಸರ್ವಿಸ್ ಟೆಲಿಫೋನ್' ಸೌಲಭ್ಯವಿದೆ.

ನಂತರ ದೆಹಲಿ ಹಾಗೂ ಮುಂಬೈ ನಗರಗಳಲ್ಲಿನ ಇಲಾಖೆಗಳು 'ಮಹಾನಗರ ಟೆಲಿಕಾಂ ನಿಗಮ ಲಿ.'(MTNL) ಆಗಿ ಪರಿವರ್ತನೆಯಾದ ನಂತರ ಅಲ್ಲಿನ ನೌಕರರಿಗೆ 'ಸರ್ವಿಸ್ ಟೆಲಿಫೋನ್' ನೀಡಲು ತೀರ್ಮಾನಿಸಲಾಯಿತು. ಈ ಹಿನ್ನೆಲೆಯಲ್ಲೇ ಟೆಲಿಕಾಂ ಇಲಾಖೆಯ ಎಲ್ಲಾ ನೌಕರರಿಗೂ ಈ ಸೌಲಭ್ಯ ದೊರಕಬೇಕು. ನೌಕರರ ನಡುವಿನ ತಾರತಮ್ಯ ಹೋಗಬೇಕೆಂದು ನೌಕರರ ಸಂಘಟನೆಗಳು ಸರ್ಕಾರವನ್ನು ಒತ್ತಾಯಿಸಿದವು.

ಮೇ 27 ರಂದು ಸಚಿವರಾದ ರಾಂವಿಲಾಸ್ ಪಾಸ್ವಾನ್‌ರವರು ನೌಕರರ ಸಂಘಗಳ ಒಕ್ಕೂಟದೊಂದಿಗೆ ಮಾತುಕತೆ ನಡೆಸಿದ ನಂತರ ಟೆಲಿಕಾಂ ನೌಕರರಿಗೆ ಬಾಡಿಗೆ ಹಾಗೂ ಸಂಪರ್ಕ ಶುಲ್ಕ ರಹಿತ 'ದೂರವಾಣಿ ಸಂಪರ್ಕ'ವನ್ನು ನೀಡುವುದಾಗಿ ಸಚಿವರು ಪ್ರಕಟಿಸಿದರು. ಈ ಪ್ರಕಟಣೆ ಪತ್ರಿಕೆಗಳಲ್ಲಿ ಬಂದ ಕೂಡಲೇ ಆರ್ಥಿಕ ಸಚಿವರಾದ ಸಿನ್ಹಾ ವಿರೋಧ ವ್ಯಕ್ತಪಡಿಸಿದರು. ಪ್ರಧಾನಿ ವಾಜಪೇಯಿ ಯವರೊಂದಿಗೆ ಈ ವಿಷಯದ ಬಗ್ಗೆ ಚರ್ಚಿಸಿಲ್ಲ, ಟೆಲಿಕಾಂ

> **ತನ್ನ ಯಜಮಾನನ ಆಜ್ಞೆಗೆ ಮಣಿದ ಸ್ವದೇಶಿಮಂತ್ರದ ಪ್ರಧಾನಿ, ಅರ್ಥ ಸಚಿವರು ಹಾಗೂ ದೂರಸಂಪರ್ಕ ಸಚಿವರುಗಳು ಸೇರಿ ಈ ನಾಟಕದ ಕ್ಲೈಮಾಕ್ಸ್‌ನ್ನು ಆಡಿ ಮುಗಿಸಿದರು.**

ಕಮಿಷನ್‌ನಿಂದ ಒಪ್ಪಿಗೆ ಪಡೆದಿಲ್ಲವೆಂದು ಪಾಸ್ವಾನ್ ಅವರ ಮೇಲೆ ಆಪಾದನೆ ಮಾಡಲಾಯಿತು.

ನಾಟಕದ ಕ್ಲೈಮಾಕ್ಸ್

ಈ ಬೆಳವಣಿಗೆಯು ಮುಂದುವರೆದ ಭಾಗವಾಗಿ ಜೂನ್ 7 ರಂದು 'ಹಿಂದು' ಪತ್ರಿಕೆಯಲ್ಲಿ ಒಂದು ಸುದ್ದಿ ಪ್ರಕಟವಾಯಿತು. ಭಾರತದ ಟೆಲಿಕಾಂ ಇಲಾಖೆಗೆ 62 ಬಿಲಿಯ ಡಾಲರ್ ಸಾಲವನ್ನು ವಿಶ್ವಬ್ಯಾಂಕ್ ನೀಡುವುದಾಗಿಯೂ, ಈ ಸಾಲವನ್ನು ಟೆಲಿಕಾಂನಲ್ಲಿ ಖಾಸಗೀಕರಣ, ಉದಾರೀಕರಣ ಹಾಗೂ ಟ್ರಾಯ್(Trai) ಸಂಬಂಧಿಸಿದ ಮುಂದಿನ ಕ್ರಮಗಳಿಗೆ ಬಳಸಬೇಕೆಂಬ ಶರತ್ತು ಇರುವುದಾಗಿ ಆ ಸುದ್ದಿ ತಿಳಿಸಿತು.

ನೌಕರರಿಗೆ 'ರಿಯಾಯಿತಿ ಟೆಲಿಫೋನ್' ಸುದ್ದಿಯನ್ನು ಮುಖಪುಟದಲ್ಲಿ ಪ್ರಕಟಿಸಿದ ಪತ್ರಿಕೆಗಳು ಈ ವಿಶ್ವಬ್ಯಾಂಕ್ ಆಜ್ಞೆಯನ್ನು ಒಳಪುಟಗಳಲ್ಲಿ ಯಾವುದೋ ಮೂಲೆಯಲ್ಲಿ ಸಣ್ಣದಾಗಿ ಪ್ರಕಟಿಸಿದವು.

ತನ್ನ ಯಜಮಾನನ ಆಜ್ಞೆಗೆ ಮಣಿದ ಸ್ವದೇಶಿಮಂತ್ರದ ಪ್ರಧಾನಿ, ಅರ್ಥ ಸಚಿವರು ಹಾಗೂ ದೂರಸಂಪರ್ಕ ಸಚಿವರುಗಳು ಸೇರಿ ಈ ನಾಟಕದ ಕ್ಲೈಮಾಕ್ಸ್‌ನ್ನು ಆಡಿ ಮುಗಿಸಿದರು. ಜೂನ್ 11 ರಂದು ವಿಶ್ವಬ್ಯಾಂಕ್‌ನ ನಿರ್ಬಂಧದಂತೆ ಆರ್ಥಿಕ ಸುಧಾರಣೆಯ ಎರಡನೇ ಹಂತದ ಕ್ರಮವಾಗಿ ಒಂದು 'ಪ್ಯಾಕೇಜ್‌ಡೀಲ್'ನ್ನು ಸರ್ಕಾರ ಪ್ರಕಟಿಸಿತು.

'ಪ್ಯಾಕೇಜ್ ಡೀಲ್' - ಏನದು?

- ಟೆಲಿಕಾಂ ನೌಕರರಿಗೆ ಬಾಡಿಗೆ ಹಾಗೂ ಸಂಪರ್ಕ ಶುಲ್ಕ ರಹಿತ 'ಟೆಲಿಫೋನ್ ಕನೆಕ್ಷನ್' ಸೌಲಭ್ಯ
- ನೌಕರರ ಬೋನಸ್ ದಿನಗಳನ್ನು 73 ರಿಂದ 70 ಕ್ಕೆ ಇಳಿಸುವುದು
- ಟೆಲಿಕಾಂ ಇಲಾಖೆಯನ್ನು ಅಕ್ಟೋಬರ್ 1 ರಿಂದ ಕಾರ್ಪೋರೇಷನ್ನಾಗಿ ಪರಿವರ್ತನೆ ಮಾಡುವುದು. ಅದು 'ಭಾರತ್ ಸಂಚಾರ್ ನಿಗಮ ಲಿಮಿಟೆಡ್' ಎಂದು ಆಗಿರುತ್ತದೆ.

ಈ ಮೂರು ಅಂಶಗಳಲ್ಲದೇ ಅಕ್ಟೋಬರ್ 1, 2000 ದ ನಂತರ ಟೆಲಿಕಾಂ ನೌಕರರು ಸರ್ಕಾರಿ ಇಲಾಖೆಯಿಂದ ಬಿಡುಗಡೆಗೊಂಡ ಅಂದರೆ ನಿವೃತ್ತರಾದ ನೌಕರರಾಗುತ್ತಾರೆ ಎಂದು ಹೇಳಲಾಗಿತ್ತು.

ಟೆಲಿಕಾಂ ಇಲಾಖೆಯ ಸ್ವರೂಪದ ಬದಲಾವಣೆಗಳಿಂದಾಗಿ ನೌಕರರ ಸೇವಾ ನಿಯಮಗಳಲ್ಲಿ ಆಗುವ ಬದಲಾವಣೆಗಳ ಕುರಿತು ಸರ್ಕಾರ ಸ್ಪಷ್ಟವಾಗಿ ಏನೂ ಹೇಳಲಿಲ್ಲ. ಟೆಲಿಕಾಂ ಇಲಾಖೆಯನ್ನು ಕಾರ್ಪೋರೇಷನ್ ಮಾಡುವ ಯೋಜನೆಗೆ ನೌಕರರು ಸಹಕರಿಸಬೇಕೆಂದು ಮಾತ್ರ ಕೇಳಿಕೊಳ್ಳಲಾಗಿತ್ತು. 'ಟೆಲಿಫೋನ್ ಕನೆಕ್ಷನ್' ಕೊಟ್ಟು 'ಕೆಲಸದ ಕನೆಕ್ಷನ್' ಕಿತ್ತುಹಾಕಿದ ಸರ್ಕಾರದ ಪಿತೂರಿ ನೋಡಿ ನೌಕರರು ಆಘಾತಕ್ಕೊಳಗಾದರು. ಸಾರ್ವಜನಿಕ ಕ್ಷೇತ್ರವಾಗಿರುವ 'ಟೆಲಿಕಾಂ' ಅನ್ನು ಖಾಸಗಿಗೊಳಿಸುವ ಸರ್ಕಾರದ ಪಿತೂರಿಯ ವಿರುದ್ಧ ಹೋರಾಟಕ್ಕೆ ಕರೆ ನೀಡಿದ್ದಾರೆ.

ಸರ್ಕಾರದ ಖಜಾನೆ ಖಾಲಿಯಾಗುವುದು ಯಾರಿಂದ?

ದೇಶದ ಇವತ್ತಿನ ಆರ್ಥಿಕ ಪರಿಸ್ಥಿತಿಯಲ್ಲಿ ಲಕ್ಷಕ್ಕೂ ಹೆಚ್ಚು ನೌಕರರಿಗೆ ಉಚಿತ ಟೆಲಿಫೋನ್ ನೀಡಿದರೆ ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರದ ಖಜಾನೆ ಕಳೆದುಕೊಳ್ಳುತ್ತದೆ ಎಂಬ ವಾದವನ್ನು ಭಾರೀ ಜೋರಾಗಿ ಸಾಮ್ರಾಜ್ಯಶಾಹಿಗಳ ಭಾರತೀಯ ಚೇಲಾಗಳು ಹೇಳುತ್ತಿದ್ದಾರೆ. ಟೆಲಿಕಾಂನ ನೌಕರರಿಗೆ ಉಚಿತ ದೂರವಾಣಿ ಸಂಪರ್ಕ ನೀಡಲು ಸುಮಾರು 68 ಕೋಟಿ ರೂಪಾಯಿಗಳಷ್ಟು ಖರ್ಚು ಬರಬಹುದು ಎಂದು ಸರ್ಕಾರ ಹೇಳಿದೆ. ಕಾರ್ಮಿಕರಿಗೆ ಕಡಿತವಾಗಿರುವ ಮೂರು ದಿನಗಳ ಬೋನಸ್ ಕಡಿತದಿಂದ ಇಲಾಖೆಗೆ ವರ್ಷಕ್ಕೆ 36 ಕೋಟಿ ರೂಪಾಯಿ ಉಳಿತಾಯ ವಾಗುತ್ತದೆ. ನೌಕರರಿಗೆ ಉಚಿತ ಟೆಲಿಫೋನ್ ಕನೆಕ್ಷನ್ ನೀಡಲು ನಿಜಕ್ಕೂ ತಗಲುವ ವೆಚ್ಚ ಕೇವಲ 38 ಕೋಟಿ ಮಾತ್ರವೇ.

ಕಳೆದ ಜುಲೈ 1998 ರಿಂದ ಖಾಸಗಿ ಸೆಲ್‌ಫೋನ್ ಕಂಪನಿಗಳಿಗೆ ನೀಡಲಾಗಿರುವ ರಿಯಾಯಿತಿಗಳು ಎಷ್ಟು ಗೊತ್ತೆ? ಈ ಖಾಸಗಿ ಕಂಪನಿಗಳಿಗಿದ್ದ 'ಲೈಸೆನ್ಸ್ ಶುಲ್ಕ'ದ ಪದ್ಧತಿಯನ್ನು ರದ್ದುಗೊಳಿಸಿ 'ಆದಾಯ ಹಂಚಿಕೆ'ಯ ಪದ್ಧತಿಯನ್ನು ಜಾರಿಗೆತರಲಾಯಿತು. ಈ ಸಂದರ್ಭದವರೆಗೆ ಈ ಖಾಸಗಿ 'ಸೆಲ್‌ಫೋನ್' ಸರ್ಕಾರಕ್ಕೆ ನೀಡಬೇಕಾಗಿದ್ದ ಲೈಸೆನ್ಸ್ ಶುಲ್ಕದ ಬಾಕಿ ರೂ. 20 ಸಾವಿರ ಕೋಟಿಗೂ ಹೆಚ್ಚು. ಈ ಹಣದಲ್ಲಿ ಶೇ 15 ರಷ್ಟು ಮಾತ್ರ ಈ ಕಂಪನಿಗಳು ಟೆಲಿಕಾಂ ಇಲಾಖೆಗೆ ಪಾವತಿಸಿ, ಉಳಿದ ಶೇ 95 ರಷ್ಟು ಹಣಕ್ಕೆ ಬ್ಯಾಂಕ್ ಗ್ಯಾರಂಟಿ ಕೊಟ್ಟರೆ ಸಾಕು. ಒಂದು ವೇಳೆ ಇದು ಸಾಧ್ಯವಿಲ್ಲದೇ ಹೋದಲ್ಲಿ ಈ ಬಾಕಿ ಹಣವನ್ನು ಮನ್ನ ಮಾಡಲು ತೀರ್ಮಾನಿಸಲಾಗಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಂಸತ್ ನಾಯಕರಾದ ಸೋಮನಾಥ ಚಟರ್ಜಿಯವರ ನೇತೃತ್ವದ 'ಟೆಲಿಕಾಂ ಸ್ಟಾಂಡಿಂಗ್ ಕಮಿಟಿ' ಸರ್ಕಾರದ ಈ ನಿಲುವನ್ನು ತೀವ್ರವಾಗಿ ವಿರೋಧಿಸಿದೆ.

ಇಷ್ಟು ಅಲ್ಲದೇ ಟ್ರಾಯ್ (Trai) ಶಿಫಾರಸ್ಸುಗಳಿಗನುಗುಣವಾಗಿ ಬದಲಾವಣೆಯಾದ ಟೆಲಿಫೋನ್ ಶುಲ್ಕದಿಂದ ಮೊದಲನೇ ವರ್ಷದಲ್ಲಿ ರೂ. 1075.14 ಕೋಟಿ, ಎರಡನೇ ವರ್ಷದಲ್ಲಿ ರೂ. 3067.69 ಕೋಟಿ, ಮೂರನೇ ವರ್ಷದಲ್ಲಿ ರೂ. 5006.75 ಕೋಟಿ ಯಷ್ಟು ಟೆಲಿಕಾಂ ಇಲಾಖೆಗೆ ನಷ್ಟವಾಗಿದೆ. ಸೆಲ್ಯೂಲರ್ ಫೋನ್‌ಗೆ ಸಂಬಂಧಿಸಿದ ತೀರ್ಮಾನಗಳಿಂದ ವರ್ಷಕ್ಕೆ ರೂ. 2 ಸಾವಿರದಿಂದ 3 ಸಾವಿರ ಕೋಟಿಯವರೆಗೆ ನಷ್ಟ. ದೂರಸಂಪರ್ಕ ಸೇವೆಯನ್ನು ಖಾಸಗಿಯವರಿಗೆ ನೀಡುವುದರಿಂದ ವರ್ಷಕ್ಕೆ ರೂ. ಆರು ಸಾವಿರ ಕೋಟಿಯವರೆಗೆ ಇಲಾಖೆಗೆ ನಷ್ಟ. ಈ ಅಂಕಿ ಅಂಶಗಳನ್ನು ನೀಡಿರುವುದು ಟೆಲಿಕಾಂ ಇಲಾಖೆಯೇ. ಈ ಪ್ರಮಾಣದ ನಷ್ಟಗಳ ತೀರ್ಮಾನವನ್ನು ಪಾರ್ಲಿಮೆಂಟಿನಲ್ಲಿ ಚರ್ಚಿಸಿಲ್ಲ, ಜನರ ಗಮನಕ್ಕೆ ತರಲಿಲ್ಲ.

ಈ ದೇಶದ್ರೋಹಿ ತೀರ್ಮಾನಗಳನ್ನು ಎಡಪಕ್ಷಗಳನ್ನು ಹೊರತುಪಡಿಸಿ ಯಾರೂ ವಿರೋಧ ಮಾಡುತ್ತಿಲ್ಲ ಮಾತ್ರವಲ್ಲ ಜನರಿಂದ ಮುಚ್ಚಿಡುತ್ತಿದ್ದಾರೆ. 'ಆನೆಗಾತ್ರ'ದಷ್ಟು ಕದ್ದುಕೊಂಡು ಹೋಗುವಾಗ ಕಣ್ಮುಚ್ಚಿ ಸುಮ್ಮನಿದ್ದು 'ಇರುವೆಗಾತ್ರ'ದಷ್ಟು ಹೋಗುವಾಗ ಹುಚ್ಚು ಹಿಡಿದಂತೆ ಕುಣಿಯುವ ವಿದೇಶಿ ಬಂಡವಾಳದ ಸ್ವದೇಶಿ ಗುಲಾಮರನ್ನು ಏನು ಮಾಡಬೇಕೆಂದು ಜನರು ತೀರ್ಮಾನಿಸಬೇಕಿದೆ.

ಸಾಮ್ರಾಜ್ಯಶಾಹಿಯ ಪಿತೂರಿಯ ಬಲೆಯಲ್ಲಿ ಟೆಲಿಕಾಂ

ಟೆಲಿಕಾಂ ಇಲಾಖೆ 1986-87 ರಲ್ಲಿ ರೂ. 2381 ಕೋಟಿ ಒಟ್ಟು ಆದಾಯ ಗಳಿಸಿದರೆ, 1990-91 ರಲ್ಲಿ 4497 ಕೋಟಿ ಆದಾಯ ಗಳಿಸಿತು. 31.3.98 ರಲ್ಲಿ ಇಲಾಖೆಯ ಒಟ್ಟು ಆದಾಯ ಗಳಿಕೆ ರೂ.18,342.25 ಕೋಟಿಯಾಗಿದೆ. ಇದರಲ್ಲಿ ಖರ್ಚು ಕಳೆದು ನಿವ್ವಳ ಲಾಭ ರೂ. 7,394.34 ಕೋಟಿಯಾಗಿದೆ. ಪ್ರತಿ ದಿನ ಸುಮಾರು ರೂ. 17 ಕೋಟಿ ಯಷ್ಟು ಲಾಭ ಗಳಿಸುವ ಸಾಮರ್ಥ್ಯವಿರುವ ಇಲಾಖೆ ಟೆಲಿಕಾಂ.

ದೇಶಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಒಟ್ಟು ದೂರವಾಣಿ ಸಂಪರ್ಕಗಳ ಸಂಖ್ಯೆ 52000 ಮಾತ್ರವೇ. ಮೊದಲನೇ ಪಂಚವಾರ್ಷಿಕ ಯೋಜನೆಯ ನಂತರ ಈ ಸಂಖ್ಯೆ 2 ಲಕ್ಷದ 54 ಸಾವಿರಕ್ಕೇರಿತ್ತು. ಈ ವರ್ಷ ಅಂದರೆ 2000 ರಲ್ಲಿ ಎರಡೂವರೆ ಕೋಟಿಗೂ ಹೆಚ್ಚು ಟೆಲಿಫೋನ್ ಸಂಪರ್ಕಗಳು ಸಾಧ್ಯವಾಗಿದ್ದು ಕೇವಲ ತಂತ್ರಜ್ಞಾನಗಳಿಂದ ಮಾತ್ರವಲ್ಲ ಲಕ್ಷಾಂತರ ಟೆಲಿಕಾಂ ಕಾರ್ಮಿಕರ ದುಡಿಮೆ ಹಾಗೂ ಸಾಮಾನ್ಯ ಜನರು ಹೂಡಿದ ಬೃಹತ್ ಬಂಡವಾಳಗಳಿಂದ ಈ ಬೆಳವಣಿಗೆ ಸಾಧ್ಯವಾಗಿದೆ. 1979-80 ರಲ್ಲಿ 1000 ಟೆಲಿಫೋನ್‌ಗೆ 114 ನೌಕರರು ಎಂಬ ರೀತಿಯಲ್ಲಿದ್ದ ನೌಕರರ ಸಂಖ್ಯೆ ಈಗ 1000 ಟೆಲಿಫೋನ್‌ಗೆ 20 ಕ್ಕೂ ಕಡಿಮೆ ನೌಕರರು ಕೆಲಸ ಮಾಡುತ್ತಿದ್ದಾರೆ.

ಇಂತಹ ಲಾಭ ಗಳಿಸುವ ಟೆಲಿಕಾಂ ಇಲಾಖೆಯನ್ನು ನುಂಗಲು ಬಹುರಾಷ್ಟ್ರೀಯ ತೋಳಗಳು ಜೊಲ್ಲು ಸುರಿಸುತ್ತಾ ಕಾಯುತ್ತಿವೆ. ಅಮೆರಿಕಾದ ಪತ್ತೆದಾರಿ ಸಂಸ್ಥೆಗೆ 'ಟೆಲಿಕಾಂ' ಇಲಾಖೆಯನ್ನು ಧಾರೆ ಎರೆಯುವ ಸಂಚ್ಯಾವಾಹಿನಿ ಯೋಜನೆಯನ್ನು ತಂತ್ರಜ್ಞಾನದ ಹೆಸರಲ್ಲಿ ಮಾಡಲು ಸರಕಾರ ಹೊರಟಿದೆ. ತೋಳಗಳ ಲಾಭದ ಹಸಿವು ನೀಗಿಸಲು ಜನರ ಆಸ್ತಿಯಾದ ಟೆಲಿಕಾಂ ಇಲಾಖೆಯನ್ನು ಧಾರೆ ಎರೆಯಲು ಕೇಂದ್ರ ಸರ್ಕಾರ ಸಿದ್ದವಾಗುತ್ತಿದೆ.

ಟೆಲಿಕಾಂ ಕಾರ್ಪೋರೇಷನ್ ಮಾಡುವುದು ಖಾಸಗೀಕರಣದ ಮೊದಲ ಹೆಜ್ಜೆ. 50 ಕ್ಕೂ ಹೆಚ್ಚು ವರ್ಷಗಳಿಂದ ಬೆಳೆಸಿ ಕಾಪಾಡಿಕೊಂಡು ಬಂದ ಸಾರ್ವಜನಿಕ ಇಲಾಖೆಯ 80,000 ಕೋಟಿ ರೂಪಾಯಿ ಮೌಲ್ಯದ ಆಸ್ತಿಗಳನ್ನು ಶೇರುಗಳನ್ನಾಗಿ ಪರಿವರ್ತಿಸಿ ಅಗ್ಗದ ಬೆಲೆಗೆ ಮಾರುವುದು ಸರ್ಕಾರದ ಉದ್ದೇಶ. ಈಗಾಗಲೇ MTNL ಹಾಗೂ VSNL ಶೇರುಗಳನ್ನು ಮಾರಾಟ ಮಾಡಲಾಗಿದೆ. ದೇಶದ ಆರು ಬೃಹತ್ ಸಾರ್ವಜನಿಕ ಉದ್ದಿಮೆಗಳನ್ನು ಈ ಕ್ರಮಗಳಿಂದ ರೋಗಗ್ರಸ್ತಗೊಳಿಸಿ ಮುಚ್ಚಲು ಸರ್ಕಾರ ಈಗಾಗಲೇ ತೀರ್ಮಾನಿಸಿದೆ.

ಕಾರ್ಪೋರೇಷನ್ ಮಾಡುವುದು ಎಂಬ ತೀರ್ಮಾನ ಹಾಗೂ ಇಲಾಖೆಯನ್ನು ಇಬ್ಭಾಗ ಮಾಡುವ ತೀರ್ಮಾನ ಟೆಲಿಕಾಂ ಇಲಾಖೆಯನ್ನು ಸಾಮ್ರಾಜ್ಯಶಾಹಿ ಪಿತೂರಿ ಬಲೆಯಲ್ಲಿ ಸಿಕ್ಕಿಸುವ ಪ್ರಯತ್ನವಲ್ಲದೇ ಇನ್ನೇನೂ ಅಲ್ಲ.

ಟೆಲಿಕಾಂ ಸಾರ್ವಜನಿಕ ವಲಯದಲ್ಲೇ ಮುಂದುವರೆಯಬೇಕು

ಆದಾಯ ಕಡಿಮೆ ಬರುವ ದೂರದ ಪ್ರದೇಶಗಳು, ಗ್ರಾಮಾಂತರ ಪ್ರದೇಶಗಳು ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ ದೂರವಾಣಿ ಸೇವಾ ಸೌಲಭ್ಯವನ್ನು ವಿಸ್ತರಿಸಲು ಟೆಲಿಕಾಂ ಇಲಾಖೆ ಸಾರ್ವಜನಿಕ ಉದ್ದಿಮೆಯಾಗಿ ಉಳಿದರೆ ಮಾತ್ರ ಸಾಧ್ಯ. ಈಗಾಗಲೇ ಡಿ.ಓ.ಟಿ(DOT) ಉದ್ದೇಶಿಸಿರುವ ರೀತಿಯಲ್ಲಿ ಜನಸಂಖ್ಯೆಯ 100 ಕ್ಕೆ 9 ಜನರಿಗೆ ದೂರವಾಣಿ ಎಂಬ ರೀತಿಯಲ್ಲಿ ಸೇವೆ ವಿಸ್ತರಿಸಲು ಈಗಿರುವ ಕನೆಕ್ಷನ್‌ಗಳ ಜತೆ ಇನ್ನು 4.70 ಕೋಟಿ ಟೆಲಿಫೋನ್ ಕನೆಕ್ಷನ್‌ಗಳನ್ನು ನೀಡಬೇಕು.

ಖಾಸಗಿ ಟೆಲಿಫೋನ್ ಕಂಪನಿಗಳು ಕನಿಷ್ಟ 12 ಗ್ರಾಮಾಂತರ ಪ್ರದೇಶಗಳಿಗೆ ಕಡ್ಡಾಯವಾಗಿ ದೂರವಾಣಿ ಸೇವೆ ನೀಡಬೇಕೆಂದು ಒಪ್ಪಂದವಿದ್ದರೂ 'ಭಾರತೀ ಟೆಲಿಫೋನ್ ಕಂಪನಿ' ಮಾತ್ರ ದೇಶದಲ್ಲಿ 6 ಗ್ರಾಮಗಳಿಗೆ ಸೇವೆ ವಿಸ್ತರಿಸಿದೆ. ಉಳಿದ ಖಾಸಗಿ ಕಂಪನಿಗಳು ಈ ನಿರ್ಬಂಧವನ್ನು ಎರಡು ಗ್ರಾಮಾಂತರ ಪ್ರದೇಶಕ್ಕೆ ಇಳಿಸಬೇಕೆಂದು ಒತ್ತಾಯಿಸುತ್ತಿವೆ. ಟೆಲಿಕಾಂ ಇಲಾಖೆ ಸಾರ್ವಜನಿಕವಾಗಿ ಉಳಿದಲ್ಲಿ ಮಾತ್ರ ಲಾಭ ಹೆಚ್ಚು ಬರುವ ಕಡೆಯಿಂದ ಕಡಿಮೆ

> **'ಟೆಲಿಫೋನ್ ಕನೆಕ್ಷನ್' ಕೊಟ್ಟು 'ಕೆಲಸದ ಕನೆಕ್ಷನ್' ಕಿತ್ತುಹಾಕಿದ ಸರ್ಕಾರದ ಪಿತೂರಿ ನೋಡಿ ನೌಕರರು ಆಘಾತಕ್ಕೊಳಗಾದರು.**

ಆದಾಯದ ಪ್ರದೇಶಗಳಿಗೆ ಟೆಲಿಫೋನ್ ಸೌಲಭ್ಯ ವಿಸ್ತರಿಸಲು ಬಂಡವಾಳ ಹೂಡುವುದು ಸಾಧ್ಯ.

ಈ ಹಿನ್ನೆಲೆಯಲ್ಲಿ ಟೆಲಿಕಾಂ ನೌಕರರು 28.6.2000 ದಂದು ಬಲಿಷ್ಟ ಮುಷ್ಕರವನ್ನು ನಡೆಸಿದ್ದಾರೆ. ಹಾಗೂ ಆಗಸ್ಟ್ ನಂತರ ಅನಿರ್ದಿಷ್ಟ ಕಾಲ ಮುಷ್ಕರಕ್ಕೆ ಕರೆ ನೀಡಿದ್ದಾರೆ. ಈ ಹೋರಾಟಗಳನ್ನು ಯಶಸ್ವಿಗೊಳಿಸಲು ಎಲ್ಲರೂ ಬೆಂಬಲ ನೀಡುವುದು ಅಗತ್ಯ. ○

ತುರ್ತುಪರಿಸ್ಥಿತಿಯ ಅನುಭವ - ಒಂದು ರಾಜಕೀಯ ವಿಶ್ಲೇಷಣೆ

ತುರ್ತುಪರಿಸ್ಥಿತಿಯೆಂಬ ಕರಾಳ ಅನುಭವ ದೇಶವನ್ನು ಕಾಡಿ ೨೫ ವರ್ಷಗಳಾದವು. ಇಂದುದೇಶದ ಅನೇಕ ಕಡೆ ತುರ್ತುಪರಿಸ್ಥಿತಿಯ ೨೫ ವರ್ಷಗಳ ಆಚರಣೆ ನಡೆದಿದೆ. ತುರ್ತು ಪರಿಸ್ಥಿತಿಯ ಅನುಭವ ದೇಶಕ್ಕೆ ಇಂದು ಇನ್ನೂ ಹೆಚ್ಚು ಪ್ರಸ್ತುತವಾಗಿದೆ. ತುರ್ತುಪರಿಸ್ಥಿತಿಯ ಅನುಭವದ ವಿಶ್ಲೇಷಣೆ ದೇಶದ ಪ್ರಮುಖ ರಾಜಕೀಯ ವಿಶ್ಲೇಷಕರಲ್ಲೊಬ್ಬರಾಗಿರುವ ಪ್ರಕಾಶ ಕಾರಟ್‌ರವರಿಂದ.

ಜೂನ್ 26, 1975 ರಂದು ನಮ್ಮ ದೇಶದ ಮೇಲೆ ಆಂತರಿಕ ತುರ್ತು ಪರಿಸ್ಥಿತಿಯನ್ನು ಹೇರಲಾಗಿತ್ತು. ಮೊಟ್ಟಮೊದಲ ಬಾರಿಗೆ, ಭಾರತದ ಆಳುವ ವರ್ಗಗಳಲ್ಲಿ ಒಂದು ವಿಭಾಗವು ತನ್ನ ಆಳ್ವಿಕೆಗೆ ಕುತ್ತು ಬಂದಿದೆ ಎಂದು ಕೊಂಡು ಸಂಸದೀಯ ಪ್ರಜಾಪ್ರಭುತ್ವದ ಮೇಲೆ ನಗ್ನ ಧಾಳಿಯನ್ನು ನಡೆಸಲು ಮುಂದಾಯಿತು. ಜನತೆಯು ನಾಗರಿಕ ಸ್ವಾತಂತ್ರ್ಯ ಹಾಗೂ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ನಿರ್ದಾಕ್ಷಿಣ್ಯವಾಗಿ ಕಿತ್ತುಕೊಳ್ಳಲಾಯಿತು. ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ತುರ್ತುಪರಿಸ್ಥಿತಿಯನ್ನು ಸಾರಲು ನಿರ್ಧರಿಸುವ ಮೊದಲು ಮಂತ್ರಿಮಂಡಲವನ್ನು ಕೇಳಲೇ ಇಲ್ಲ. ಆಂತರಿಕ ಗಲಭೆಗಳಿಂದಾಗಿ ದೇಶದ ರಕ್ಷಣೆಗೆ ಗಂಡಾಂತರ ಬಂದಿದ್ದು ಗಂಭೀರವಾದ ತುರ್ತುಪರಿಸ್ಥಿತಿ ಉಂಟಾಗಿದೆ'' ಎಂದು ಹೇಳಲಾಯಿತು. ಇದರಿಂದಾಗಿ ಮೊಟ್ಟಮೊದಲ ಬಾರಿಗೆ ಆಂತರಿಕ ಕಾರಣಗಳಿಗಾಗಿ ತುರ್ತುಪರಿಸ್ಥಿತಿಯನ್ನು ಘೋಷಿಸಿದಂತಾಯಿತು.

19 ಮಾಸಗಳ ಕರಾಳ ಅಧ್ಯಾಯ:

ಅನಂತರ ದೇಶದಲ್ಲಿ ಏನೆಲ್ಲಾ ನಡೆಯಿತು ಎಂಬುದು ಇತಿಹಾಸದ ಒಂದು ಕರಾಳ ಅಧ್ಯಾಯವಾಗಿದೆ. ಜನವರಿ 1977 ರಲ್ಲಿ ಲೋಕಸಭೆಗೆ ಹೊಸದಾಗಿ ಚುನಾವಣೆ ಘೋಷಣೆಯಾಗುವ ವರೆಗಿನ 19 ತಿಂಗಳ ಅವಧಿಯಲ್ಲಿ ಸಂವಿಧಾನದಲ್ಲಿ ನೀಡಲಾದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮತ್ತು ನಾಗರಿಕ ಸ್ವಾತಂತ್ರ್ಯವನ್ನು ಅಮಾನತ್ತುಗೊಳಿಸಲಾಗಿತ್ತು. ದೇಶಾದ್ಯಂತ ವಿರೋಧ ಪಕ್ಷಗಳ ಸಾವಿರಾರು ಜನ ನಾಯಕರನ್ನು ಮತ್ತು ಕಾರ್ಯಕರ್ತರನ್ನು ಬಂಧಿಸಲಾಗಿತ್ತು. ಆಳುವ ಕಾಂಗ್ರೆಸ್ ಪಕ್ಷದ ಕೆಲವು ಸದಸ್ಯರನ್ನು ಸಹ ವಶಕ್ಕೆ ತೆಗೆದುಕೊಳ್ಳಲಾಗಿತ್ತು. ದೇಶದ ಸಂಸತ್ತು ಬಹುತೇಕವಾಗಿ ಸ್ಥಗಿತಗೊಂಡಿತ್ತು. ಸಂಸತ್ತಿನಲ್ಲಿ ಮಾಡಲಾದ ಭಾಷಣಗಳನ್ನು ಸಹ ಸೆನ್ಸಾರ್ ಮಾಡಲಾಗುತ್ತಿತ್ತು ಮತ್ತು ಪತ್ರಿಕೆಗಳಲ್ಲಿ ಅವುಗಳ ಪ್ರಕಟಣೆಯನ್ನು ನಿಷೇದಿಸಲಾಗಿತ್ತು. ಪ್ರಸಾರ ಮಾಧ್ಯಮಗಳ ಪ್ರಕಟಣೆಗಳನ್ನು ಸೆನ್ಸಾರ್ ಮಾಡಲಾಗುತ್ತಿತ್ತು. ಯಾವುದಾದರೂ ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸಬೇಕೆಂದು ನ್ಯಾಯಾಲಯಗಳಿಗೆ ಮೊರೆ ಹೋಗುವ ನಾಗರಿಕರ ಹಕ್ಕನ್ನು ಅಮಾನತ್ತಿನಲ್ಲಿಡಲಾಗಿತ್ತು. ಶ್ರೀಮತಿ ಗಾಂಧಿಯವರ ಸುತ್ತ ಇರುತ್ತಿದ್ದ ದುಷ್ಟಕೂಟವೇ ಮಂತ್ರಿಮಂಡಲದ ಗಮನಕ್ಕೆ ತರದೆ ಪ್ರಮುಖ ದೋರಣಾತ್ಮಕ ವಿಷಯಗಳನ್ನು ನಿರ್ಧರಿಸುತ್ತಿತ್ತು. ಪೋಲಿಸ್ ಅತಿರೇಕಗಳು ಮತ್ತು ಬಲವಂತದ ಸಂತಾನ ಹರಣ ಶಸ್ತ್ರಾಚಿಕಿತ್ಸೆಯ ಪ್ರಕರಣಗಳು ವ್ಯಾಪಕವಾಗಿ ನಡೆದವು.

ಈ ಆಕ್ರಮಣಕ್ಕೆ ಆಳುವ ವರ್ಗದ ಒಂದು ವಿಭಾಗದಿಂದ ಬಂದ ಬೆದರಿಕೆ ಕಾರಣವಾಗಿತ್ತೆ ಹೊರತು ಕಾರ್ಮಿಕ ವರ್ಗದಿಂದಾಗಲಿ, ಯಾವುದೇ ಒಂದು ಕ್ರಾಂತಿಕಾರಿ ಚಳುವಳಿಯಿಂದಾಗಿ ಬೆದರಿಕೆ ಬಂದಿರಲಿಲ್ಲ. ತುರ್ತುಪರಿಸ್ಥಿತಿಯ ಘೋಷಣೆ ಹಾಗೂ ಸರ್ವಾಧಿಕಾರಿ ಆಳ್ವಿಕೆಯ ಸ್ಥಾಪನೆಯು ಬಂಡವಾಳಶಾಹಿ-ಭೂಮಾಲಿಕ ವ್ಯವಸ್ಥೆಯೊಳಗಿನ ಆಳವಾದ ಬಿಕ್ಕಟ್ಟನ್ನು ಬಯಲಿಗೆಳೆಯಿತು. ಈ ಬಿಕ್ಕಟ್ಟು ಮುಂದೆ ಬಂಡವಾಳಶಾಹಿ ಭೂಮಾಲಿಕ ಆಳುವ ಹಾಗೂ ವಿರೋಧ ಪಕ್ಷಗಳ ನಡುವೆ ತೀವ್ರಗೊಂಡ ಸಂಘರ್ಷವಾಗಿ ವ್ಯಕ್ತವಾಯಿತು. ಇದರ ಹಿನ್ನೆಲೆಯಲ್ಲಿ ಆಳುವ ಕಾಂಗ್ರೆಸ್ ಪಕ್ಷ ಮತ್ತು ಜನತೆಯ ನಡುವೆ ತೀವ್ರಗೊಂಡ ವೈರುದ್ಯವು ಸರ್ವಾಧಿಕಾರಿ ಆಳ್ವಿಕೆಯನ್ನು ಹೇರಲು ಕಾರಣವಾಯಿತು.

1971 ರಲ್ಲಿ ಶ್ರೀಮತಿ ಇಂದಿರಾ ಗಾಂಧಿ ನೇತೃತ್ವದ ಕಾಂಗ್ರೆಸ್ ಗುಂಪು "ಗರೀಬಿ ಹಟಾವೋ" ಎಂಬ ಘೋಷಣೆಯನ್ನು ಕೊಟ್ಟು ಕಾಂಗ್ರೆಸ್ (ಓ), ಜನಸಂಘ ಮತ್ತು ಭಾರತೀಯ ಲೋಕ ದಳವನ್ನೊಳಗೊಂಡ ಕೂಟವನ್ನು ಸೋಲಿಸಿ ಅಧಿಕಾರಕ್ಕೆ ಬಂತು. ಇಂದಿರಾ ಕಾಂಗ್ರೆಸ್ ಪಕ್ಷವು ಬಂಡವಾಳಶಾಹಿ-ಭೂಮಾಲಿಕ ಪರವಾದ ನೀತಿಗಳನ್ನೇ ಮುಂದುವರೆಸಿದ್ದರಿಂದ ಅದರ ಕ್ರಾಂತಿಕಾರಿ ಉದ್ದೇಶಗಳಿಂದ ಆಕರ್ಷಿತರಾಗಿ ಬಂದ ಜನರ ನಿರೀಕ್ಷೆಗಳು ಚೂರುಚೂರಾದವು. 1973-74 ರಲ್ಲಿ ಜನತೆಯ ಅತೃಪ್ತಿ ತೀವ್ರವಾಯಿತು ಮತ್ತು ಅನೇಕ ದೊಡ್ಡ ಹೋರಾಟಗಳು ಮೂಡಿಬರುವಂತಾಯಿತು. ಮೇ 1973 ರ ಅಖಿಲ ಭಾರತ ಬಂದ್ ಮತ್ತು 1974 ಐತಿಹಾಸಿಕ ರೈಲ್ವೇ ಕಾರ್ಮಿಕರ ಮುಷ್ಕರವು ಸಾಮೂಹಿಕ ಚಳುವಳಿಗಳಲ್ಲಿ ಬೆಳೆಯುತ್ತಿದ್ದ ಸಮರಶೀಲತೆಯ ದ್ಯೋತಕವಾಗಿತ್ತು. ಈ ಹಿನ್ನೆಲೆಯಲ್ಲಿ ಗುಜರಾತಿನ ವಿದ್ಯಾರ್ಥಿಗಳ ನೇತೃತ್ವದ ನವನಿರ್ಮಾಣ ಚಳುವಳಿ, ಬಿಹಾರದ ಚಳುವಳಿ ಮತ್ತು ಜಯಪ್ರಕಾಶ್ ನಾರಾಯಣರ ಚಳುವಳಿಗಳು ಬೆಳೆದು ಬಂದವು. ಇದರ ಒಟ್ಟೊಟ್ಟಿಗೆ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ದುಡಿಯುವ ವರ್ಗದ ಚಳುವಳಿಗಳನ್ನು ಸಂಘಟಿಸುತ್ತಿದ್ದವು.

ತುರ್ತುಪರಿಸ್ಥಿತಿಯ ಅಪಾಯ ಇನ್ನೂ ಜೀವಂತ

ಒಂದು ಬಗೆಯ ಸರ್ವಾಧಿಕಾರವನ್ನು ದೇಶದ ಮೇಲೆ ಹೇರಲಾಗಿತ್ತು. ಪ್ರಜಾಪ್ರಭುತ್ವದ ಮೇಲಿನ



ಸರ್ವಾಧಿಕಾರದ ವಿರುದ್ಧ ಸಿಪಿಐ(ಎಂ) ಎಚ್ಚರಿಕೆ:

1969 ರ ಕಾಂಗ್ರೆಸ್ ವಿಭಜನೆಯ ನಂತರ, ಶ್ರೀಮತಿ ಇಂದಿರಾ ಗಾಂಧಿಯವರು ಬಳಸಿದ ಕ್ರಾಂತಿಕಾರಿ ಘೋಷಣೆಗಳಿಂದಾಗಿ ಕಾಂಗ್ರೆಸಿನ ದೊಡ್ಡ ವಿಭಾಗವನ್ನು ಸಿಂಡಿಕೇಟಿನ ವಿರುದ್ಧ ಎತ್ತಿಕಟ್ಟಲು ಸಾಧ್ಯವಾಯಿತು. ಆದರೆ ಪಶ್ಚಿಮ ಬಂಗಾಳದಲ್ಲಿ ಎಡ ಚಳುವಳಿ ಮತ್ತು ಸಿಪಿಐ(ಎಂ) ವಿರುದ್ಧ ಕಾಂಗ್ರೆಸ್ ನಡೆಸಿದ ಅಪಪ್ರಚಾರ ಹಾಗೂ ದಬ್ಬಾಳಿಕೆಯಿಂದ ಕಾಂಗ್ರೆಸಿನ ಕ್ರಾಂತಿಕಾರಿ ಘೋಷಣೆಗಳು ಹೇಗೆ ಹುರುಳಿಲ್ಲದವುಗಳು ಎಂಬುದು ಬೇಗನೇ ಸಾಬೀತಾಯಿತು. 1971 ರ ಚುನಾವಣೆಯಲ್ಲಿ ಸಿಪಿಐ(ಎಂ) ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದಾಗ ಕಾಂಗ್ರೆಸ್ ಪಕ್ಷವು ಎಡ ಪಕ್ಷಗಳ ವಿರುದ್ಧ ಮುಖ್ಯವಾಗಿ ಸಿಪಿಐ(ಎಂ) ವಿರುದ್ಧ ತೀವ್ರ ಧಾಳಿ ದಬ್ಬಾಳಿಕೆಯನ್ನು ನಡೆಸಿತು. 1972ರ ಮಧ್ಯದೊಳಗಾಗಿ ಸಿಪಿಐ(ಎಂ)ನ ಸುಮಾರು 650 ಕಾರ್ಯಕರ್ತರನ್ನು ಮತ್ತು ಅನುಯಾಯಿಗಳನ್ನು ಕಾಂಗ್ರೆಸ್ ಗೂಂಡಾಗಳು, ಪೋಲಿಸರು ಹಾಗೂ ಸಮಾಜಘಾತಕ ಗ್ಯಾಂಗುಗಳು ಕೊಂದುಹಾಕಿದರು. ಸಿಪಿಐ 1971 ರಿಂದ ಕಾಂಗ್ರೆಸ್ ಪಕ್ಷದ ಜೊತೆಯಲ್ಲಿ ಇದ್ದುದರಿಂದ ಕಾಂಗ್ರೆಸಿನ ಅರೆ ಫ್ಯಾಸಿಸ್ಟ್ ದಬ್ಬಾಳಿಕೆಯನ್ನು ಸಿಪಿಐ(ಎಂ) ಏಕಾಂಗಿಯಾಗಿ ಎದುರಿಸಬೇಕಾಯಿತು. 1971 ರಿಂದ 1976 ರ ನಡುವಿನ ಅವಧಿಯಲ್ಲಿ ಸಿಪಿಐ(ಎಂ)ನ 1,100 ಕಾರ್ಯಕರ್ತರು ಕೊಲ್ಲಲ್ಪಟ್ಟರು ಮತ್ತು ಸಾವಿರಾರು ಕಾರ್ಮಿಕರನ್ನು ಮತ್ತು ಅವರ ಕುಟುಂಬಗಳನ್ನು ಅವರ ಪ್ರದೇಶಗಳಿಂದ ಓಡಿಸಲಾಯಿತು.

ಜುಲೈ 1972 ರಲ್ಲಿ ನಡೆದ ಸಿಪಿಐ(ಎಂ)ನ 9ನೇ ಮಹಾಧಿವೇಶನವು ಒಂದು ಪಕ್ಷದ ಸರ್ವಾಧಿಕಾರದ ಅಪಾಯದ ವಿರುದ್ಧ ಹೋರಾಡಲು ಕರೆ ನೀಡಿತ್ತು. ಅಲ್ಲಿಂದ ಮುಂದೆ ನಿರಂತರವಾಗಿ ಸರ್ವಾಧಿಕಾರತ್ವದ ಬೆಳವಣಿಗೆಯ ಬಗ್ಗೆ ಜನತೆಯನ್ನು ಹಾಗೂ ವಿರೋಧ ಪಕ್ಷಗಳನ್ನು

ಸಂಘ ಪರಿವಾರ ಮತ್ತು ತುರ್ತು ಪರಿಸ್ಥಿತಿ

ಬಿಜೆಪಿ ಮತ್ತು ಸಂಘಪರಿವಾರ ತುರ್ತುಪರಿಸ್ಥಿತಿ 25ನೇ ವಾರ್ಷಿಕದಲ್ಲಿ ಭಾರಿ ಗದ್ದಲ ಎಬ್ಬಿಸಿದೆ- ತುರ್ತುಪರಿಸ್ಥಿತಿಯನ್ನು ತಾವು ಮಾತ್ರ ವಿರೋಧಿಸಿದ್ದು ಅಥವಾ ತಮ್ಮದೇ ಅತಿ ದೊಡ್ಡ ಪಾತ್ರ. ಸರ್ವಾಧಿಕಾರ ಶಾಹಿ ಪ್ರವೃತ್ತಿ ಕಾಂಗ್ರೆಸ್‌ಗೆ ಮೀಸಲು ಎನ್ನುವಂತೆ ವರ್ತಿಸುತ್ತಿದೆ. ಬಿಜೆಪಿ ಕೆಲವು ವರ್ಷಗಳ ಆಡಳಿತ ನೋಡಿದವರಿಗೆ ಇದು ನಿಜವಲ್ಲ ಎಂದು ಬೇರೆ ಹೇಳಬೇಕಾಗಿಲ್ಲ. ಕ್ರಿಶ್ಚಿಯನ್ನರ ಮೇಲೆ ಸತತ ಧಾಳಿ, ಅಧ್ಯಕ್ಷೀಯ ಪದ್ಧತಿ ಬಗ್ಗೆ ಮಾತನಾಡುವುದು, ಹಿಂದಿನ ಬಾಗಿಲಿನಿಂದ ಸಂವಿಧಾನ ಬುಡಮೇಲು ಮಾಡಲು ಪ್ರಯತ್ನಿಸುತ್ತಿರುವುದು, ಮಾತೆತ್ತಿದರೆ ದೇಶದ ವಿರುದ್ಧ ಪಾಕಿಸ್ತಾನದ ಪಿತೂರಿ ಬಗ್ಗೆ ಮಾತನಾಡುವುದು, ದುಡಿಯುವ ಜನರ ಬಾಯಿ ಮುಚ್ಚಿಸಲು ಕ್ರಮಗಳು, ಸ್ವತಂತ್ರಮಾಧ್ಯಮಗಳ ಮೇಲೆ ಪ್ರಹಾರ- ಇತ್ಯಾದಿ ಬಿಜೆಪಿ ಸರ್ವಾಧಿಕಾರಿ ಮನೋಭಾವ ವನ್ನು ಸ್ಪಷ್ಟಪಡಿಸಿದೆ.

ಇದಲ್ಲದೆ ತುರ್ತುಪರಿಸ್ಥಿತಿಯಲ್ಲಿ ತನ್ನ ಪಾತ್ರದ ಬಗ್ಗೆ ಕೊಚ್ಚಿಕೊಳ್ಳುವ ಸಂಘಪರಿವಾರದ ವೀರಕಥೆ ತಿಳಿದು ಕೊಳ್ಳುವುದು ಅಗತ್ಯ. ಆರೆಸ್ಸೆಸ್ಸನ್ನು ನಿಷೇಧಿಸಿದ್ದು ಇಡೀ ಆರೆಸ್ಸೆಸ್ ನಾಯಕರನ್ನು ಕಾರ್ಯಕರ್ತರನ್ನು ತಲ್ಲಣಿಸಿತ್ತು. ಸೋಶಲಿಸ್ಟ್ ನಾಯಕ ಮಧುಲಿಮಯೆ (ಮತ್ತು ಬಿಜೆಪಿ ಜತೆ ಸರ್ಕಾರ ಮಾಡುತ್ತಿರುವ ಹಲವು ಸೋಶಲಿಸ್ಟ್ ನಾಯಕರು ಈ ಬಗ್ಗೆ ಸಂಘಪರಿವಾರವನ್ನು ಟೀಕಿಸಿದ್ದರು, ಲೇವಡಿ ಮಾಡಿದ್ದರು) ಈ ಬಗ್ಗೆ ಹೀಗೆಂದಿದ್ದಾರೆ "ತುರ್ತುಪರಿಸ್ಥಿತಿ ವಿರುದ್ಧ ಹೋರಾಟ ತಾವು ಆರಂಭಿಸಿದ್ದು ಎಂದು ಆರೆಸ್ಸೆಸ್ ನವರು ಕೊಚ್ಚಿಕೊಳ್ಳುತ್ತಾರೆ. ಇದಕ್ಕಿಂತ ದೊಡ್ಡ ಹಸಿ ಸುಳ್ಳು ಬೇರೆ ಇರಲಿಲ್ಲ. ಆರೆಸ್ಸೆಸ್ ನಿಷೇಧಿಸಿದ್ದರಿಂದ ಅವರೆಲ್ಲ ಕಂಗಾಲಾಗಿದ್ದರು. ಬಂಧಿತರಾದ ಆರೆಸ್ಸಸ್, ಜನಸಂಘ ಕಾರ್ಯಕರ್ತರ ಮನೋಸ್ಥೈರ್ಯ ಕೆಲವೇ ದಿನಗಳಲ್ಲಿ ಎಷ್ಟು ಕುಸಿದಿತ್ತೆಂದರೆ ಹೆಚ್ಚಿನವರು ಅಧಿಕಾರಿಗಳಿಗೆ ಕ್ಷಮಾಯಾಚನೆ ಪತ್ರ ಕೊಟ್ಟು ಬಿಡುಗಡೆ ಹೊಂದಿದ್ದರು. ಹಲವಾರು ಆರೆಸ್ಸೆಸ್, ಜನಸಂಘಕ್ಕೂ ನಮಗೂ ಏನೂ ಸಂಬಂಧವಿಲ್ಲ ಎಂದು ಬರೆದು ಕೊಡುವ ಮಟ್ಟಕ್ಕೆ ಹೋಗಿದ್ದರು"

ಇದಕ್ಕೆಲ್ಲ ಮುಕುಟವಿಟ್ಟಂತೆ ಆರೆಸ್ಸೆಸ್ ಸರಸಂಘ ಚಾಲಕ ಬಾಳಾಸಾಹೇಬ್ ದೇವರಸ್ ಜೈಲಿನಿಂದ ಆರೆಸ್ಸೆಸ್ ಮೇಲೆ ನಿಷೇಧ ತೆಗೆಯುವಂತೆ ಕ್ಷಮಾಯಾಚನೆಯ ದಾಟಿಯಲ್ಲಿ ಪತ್ರ ಬರೆದಿದ್ದರು. ಬಿಡುಗಡೆಮಾಡಿ, ನಿಷೇಧ ತೆಗೆದರೆ ಕಾಂಗ್ರೆಸ್ ಪಕ್ಷ, ಸರ್ಕಾರದ ಜತೆ ಸಹಕರಿಸುವುದಾಗಿ ಗೋಗರೆದಿದ್ದರು. ಸಂಘಪರಿವಾರ ಮತ್ತು ಬಿಜೆಪಿಗೆ ಇದು ಜಾಣಮರೆವು. ಆದರೆ ಬೇರೆ ಯವರು ಇದನ್ನು ಮರೆತಿಲ್ಲ.


ಅಕ್ಟೋಬರ್ 10, 1975 ರಂದು ಸುಪ್ರೀಂ ಕೋರ್ಟು ಅಲಹಾಬಾದ್ ಹೈಕೋರ್ಟು ತೀರ್ಪು ತಳ್ಳಿ ಹಾಕಿ, ಇಂದಿರಾಗಾಂಧಿ ಚುನಾವಣೆ ಎತ್ತಿಹಿಡಿದಾಗ ಇಡೀ ದೇಶ ಇದು ನಾಚಿಕೆಗೇಡು ಅಂತ ಖಂಡಿಸುತ್ತಿದ್ದರೆ, ಈ ದೇವರಸ್ ಮಹಾಶಯ ಇಂದಿರಾಗಾಂಧಿಗೆ ಅಭಿನಂದನೆ ಪತ್ರ ಬರೆದಿದ್ದ. ಅದರಲ್ಲೇ ಆರೆಸ್ಸೆಸ್ ನಿಷೇಧ ರದ್ದು ಮಾಡುವಂತೆ ಕೋರಿದ್ದು, ಆಚಾರ್ಯ ವಿನೋಭಾ ಭಾವೆಗೆ ಬರೆದ ಪತ್ರದಲ್ಲಿ ಸಂಘದ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಇರುವ ತಪ್ಪು ಅಭಿಪ್ರಾಯವನ್ನು ಹೋಗಲಾಡಿಸಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಇದರಿಂದ ಸಂಘದ ಮೇಲೆ ನಿಷೇಧ ತೆಗೆದು ಕಾರ್ಯಕರ್ತರು ಬಿಡುಗಡೆಯಾದರೆ ಪ್ರಧಾನಮಂತ್ರಿಯವರ ನಾಯಕತ್ವದಲ್ಲಿ ದೇಶದ ಅಭಿವೃದ್ಧಿ ಕಾರ್ಯಕ್ರಮಗಳಿಗೂ ಕೆಲಸ ಮಾಡುವುದಾಗಿ ಭರವಸೆ ಕೊಟ್ಟಿದ್ದರು. ಅವರು ಹೇಳುತ್ತಿರುವುದು ಆಗಲೇ ಕುಖ್ಯಾತವಾಗಿದ್ದ 20 ಅಂಶದ ಕಾರ್ಯಕ್ರಮದ ಬಗ್ಗೆ ಇಡೀ ದೇಶವೇ ಈ ಕಾರ್ಯಕ್ರಮ ಒಂದು ಕಣ್ಣೊರೆಸುವ ಸೋಗಲಾಡಿತನ ಎಂದು ಉಗಿಯುತ್ತಿದ್ದಾಗ ಈತ ಸಹಕಾರದ ಭರವಸೆ ಕೊಡುತ್ತಿದ್ದ ಹೇಗಿದೆ ಸಂಘಪರಿವಾರದ ತುರ್ತುಪರಿಸ್ಥಿತಿ ವಿರುದ್ಧ ಹೋರಾಟ!.

ಸಿಂಹದ ಗುಹೆಯಲ್ಲೇ ಸವಾಲು

ಈ ಸದನದ 34 ಸದಸ್ಯರನ್ನು ಬಂಧಿಸಿರುವುದರಿಂದ ಅವರು ಇಲ್ಲಿ ಹಾಜರಿರಲಾಗದ ಅಭೂತಪೂರ್ವ ಮತ್ತು ದುರ್ಬರ ಪರಿಸ್ಥಿತಿಯಲ್ಲಿ ನಾನು ಈ ಸದನದಲ್ಲಿ ಮಾತನಾಡಬೇಕಾಗಿ ಬಂದಿದೆ. ಶ್ರೀಮತಿ ಗಾಂಧಿ ಮತ್ತು ಅವರ ಪಕ್ಷ ಪಾರ್ಲಿಮೆಂಟನ್ನು ಒಂದು ಕೆಟ್ಟ ಜೋಕಿನಳಿಸ್ತರಕ್ಕೆ ಇಳುಸಿದೆ.

ಎಡಸೋಗು...

ನನ್ನನ್ನು ಒಂದು ವಾರ ಕಾಲ ಬಂಧಿಸಲಾಗಿತ್ತು.... ನನ್ನನ್ನು ಎರಡು ದಿನಗಳ ಹಿಂದೆಯಷ್ಟೇ ಬಿಡುಗಡೆ ಮಾಡಲಾಯಿತು. ನನಗೆ ಅದಕ್ಕೆ ಕಾರಣ ಗೊತ್ತಿದೆ. ಬಂಧಿಸಲಾಗಿರುವ ನಮ್ಮ ಪಕ್ಷದ ಮೂರು ಸಾವಿರ



ಲೋಕಸಭೆಯಲ್ಲಿ ತುರ್ತುಪರಿಸ್ಥಿತಯನ್ನು ಖಂಡಿಸಿದ ಧೀರ ನಾಯಕ ಎ.ಕೆ.ಗೋಪಾಲನ್

ನಾಯಕರು ಮತ್ತು ಕಾರ್ಯಕರ್ತರನ್ನು ಯಾಕೆ ಬಿಡುಗಡೆ ಮಾಡಿಲ್ಲ? ನನ್ನನ್ನು ಮತ್ತು ಶ್ರೀ ನಂಬೂದರಿ ಪಾದ್ ಅವರನ್ನು ಮಾತ್ರ ಬಿಡುಗಡೆಮಾಡಿದ್ದಾರೆ? ಮಾರ್ಕ್ಸ್‌ವಾದಿಗಳು ಮತ್ತು ಎಡಪಂಥೀಯ ನಾಯಕರು ಯಾರನ್ನೂ ಬಂಧಿಸಿಲ್ಲ. ಬರಿ ಬಲಪಂಥೀಯ ಪ್ರತಿಗಾಮೀ ನಾಯಕರನ್ನು ಮಾತ್ರ ಬಂಧಿಸಲಾಗಿದೆ ಎಂದು ತೋರಿಸುವ ಪ್ರಯತ್ನ ಇದು....

ಅಲಹಾಬಾದ್ ತೀರ್ಪು ನಿಜವಾದ ಕಾರಣ.......

ತುರ್ತುಪರಿಸ್ಥಿತಿಯನ್ನು ಹಟಾತ್ತಾಗಿ ಹೇರಿದ್ದು ದೇಶದ ಆಂತರಿಕ ಭದ್ರತೆಗೆ ನಿಜವಾದ ಬೆದರಿಕೆ ಬಂದಿದ್ದರಿಂದ ಅಲ್ಲ. ನಿಜವಾದ ಕಾರಣ (ಇಂದಿರಾಗಾಂಧಿಯವರ ಚುನಾವಣೆಯನ್ನು ಕಾನೂನುಬಾಹಿರ ಎಂದ) ಅಲಹಾಬಾದ್ ಹೈಕೋರ್ಟು ತೀರ್ಪು, ಗುಜರಾತ್ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮುಖ ಭಂಗವಾಗುವಂತಹ ಸೋಲು...... ಶ್ರೀಮತಿ ಗಾಂಧಿಯವರ ಸರ್ಕಾರದಲ್ಲಿ ಜನರ ಹೆಚ್ಚುತ್ತಿರುವ ಭ್ರಮನಿರಸನ, ಮತ್ತು ಅತೃಪ್ತಿ

ಇಂದಿರಾ ಎಂದರೆ ಇಂಡಿಯಾ, ಇಂಡಿಯಾ ಎಂದರೆ ಇಂದಿರಾ....

ಒಂದೇ ನಾಯಕಿ, ಒಂದೇ ಪಕ್ಷ. ಒಂದೇ ದೇಶ' ಎಂದು ಕೆಲವು ಕಾಂಗ್ರೆಸ್ ನಾಯಕರು ಕೆಲಕಾಲದ ಹಿಂದೆ ಹಾಕಿದ ಘೋಷಣೆ ನಿರಂಕುಶ ದೋರಣೆಯ ರಾಜಕೀಯ ಪ್ರತಿಫಲನವಾಗಿತ್ತು... ಇಂಡಿಯಾ ಎಂದರೆ ಇಂದಿರಾ ಇಂದಿರಾ ಎಂದರೆ ಇಂಡಿಯಾ' ಎಂಬ ಈಗಿನ ಘೋಷಣೆ ಆಕೆ ಜೀವನಾದ್ಯಂತ ಸರ್ವಾಧಿಕಾರಿ ಆಗಿರುತ್ತಾರೆ ಎಂಬಂತಿದೆ....

ಆರೆಸ್ಸೆಸ್ ಮತ್ತು ಆನಂದ ಮಾರ್ಗ. -ಅನುಕೂಲ ಶಾಸ್ತ್ರ.....

ಈಗ ನಿಷೇಧಿತವಾಗಿರುವ ಆರೆಸ್ಸೆಸ್ ಮತ್ತು ಆನಂದಮಾರ್ಗದ ಬಗ್ಗೆ ಸರ್ಕಾರದ ಧೋರಣೆ ನೋಡಿದರೆ, ಈ ಸರ್ಕಾರದ ಸೋಗು ಬಯಲಾಗುತ್ತದೆ. ಸಮಯಕ್ಕೆ ತಕ್ಕಂತೆ ಅನುಕೂಲಕ್ಕೆ ತಕ್ಕಂತೆ ಬದಲಾಗುತ್ತದೆ. 1965 ರಲ್ಲಿ ಭಾರತ-ಪಾಕಿಸ್ತಾನ ಯುದ್ಧದ ಸಮಯದಲ್ಲಿ ಆಗಿನ ಪ್ರಧಾನಿ ದೆಹಲಿಯ ನಾಗರಿಕ ಸೇವೆಗಳ ಕೆಲಸವನ್ನು ಆರೆಸ್ಸೆಸ್‌ಗೆ ಒಪ್ಪಿಸಿ ಬಿಟ್ಟಿದ್ದರು.... ಜ್ಯೋತಿಬಸುರವರ ಕೊಲೆಗೆ ಯತ್ನಿಸಿದ ಆನಂದಮಾರ್ಗದ ಮೇಲೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ.... ಬದಲಾಗಿ 1971 ರಲ್ಲಿ ಬಾಂಗ್ಲಾದೇಶ ನಿರಾಶ್ರಿತರ ಪರಿಹಾರಕ್ಕೆ 12 ಲಕ್ಷವನ್ನು ಆನಂದ ಮಾರ್ಗಕ್ಕೆ ಕೊಡಲಾಯಿತು.!

ಇದರಲ್ಲಿ 2.8 ಲಕ್ಷ ರೂ.ಗಳಿಗೆ ಇನ್ನೂ ಲೆಕ್ಕಸಿಕ್ಕಿಲ್ಲ... ಈಗ ಈ ಎರಡೂ ಸಂಘಟನೆಗಳು ಎಷ್ಟು ಅಪಾಯಕಾರಿಯೆಂದರೆ ಆಂತರಿಕ ತುರ್ತುಪರಿಸ್ಥಿತಿ ಹೊರಿಸಿದರೆ ಮಾತ್ರ ಅವನ್ನು ನಿಯಂತ್ರಿಸಲು ಸಾಧ್ಯ!

ಮುಷ್ಕರಕ್ಕೆ ನಿಷೇಧ- ಲಾಕೌಟಿಗೆ ಅಡ್ಡಿ ಇಲ್ಲ.....

ಮುಷ್ಕರ ಮಾಡುವಂತಿಲ್ಲ ತುರ್ತುಪರಿಸ್ಥಿತಿಯಲ್ಲಿ, ಲಾಕೌಟ್ ಮತ್ತು ಲೇ-ಆಫ್‌ಗೆ ಏನೂ ಅಡ್ಡಿಇಲ್ಲ. ಸರ್ಕಾರಿ ಕಾರ್ಖಾನೆಗಳೂ ಲಾಕೌಟುಗಳೂ, ಲೇ-ಆಫ್‌ಗಳು ಮಾಡುತ್ತಿವೆ.... ಈ ಸರ್ವಾಧಿಕಾರ ಹೊರಿಸಿದ್ದು ಯಾರ ಹಿತಾಸಕ್ತಿ ಕಾಪಾಡಲಿಕ್ಕೆ?.... ಕಾರ್ಮಿಕರಲ್ಲದ ರೈತರಲ್ಲದ, ಕೃಷಿ ಕೂಲಿಕಾರರಲ್ಲದ ಪ್ರಧಾನಮಂತ್ರಿಯವರ ಮನೆಗೆ ಹೋಗಿ ಅವರ ತುರ್ತು ಪರಿಸ್ಥಿತಿಗೆ ಬೆಂಬಲ ವ್ಯಕ್ತಪಡಿಸಿದರಲ್ಲ, ಆ ಚೇಂಬರ್ ಆಫ್ ಕಾಮರ್ಸ್ ಸದಸ್ಯರ ಹಿತಾಸಕ್ತಿ ಕಾಪಾಡಲಿಕ್ಕೆ ಈ ತುರ್ತು ಪರಿಸ್ಥಿತಿ..... ಸ್ವತಂತ್ರ ಭಾರತದಲ್ಲಿ ಮೊದಲ ಬಾರಿಗೆ ಬಿರ್ಲಾ ಮುಂತಾದ ಹಿರಿಯ ಉದ್ಯಮಿಗಳ ಮೆರವಣಿಗೆಯಲ್ಲಿ ಹೋಗಿ ಪ್ರಧಾನಮಂತ್ರಿ ಇಂದಿರಾಗಾಂದಿಗೆ ಬೆಂಬಲ ಸೂಚಿಸಿದರು.

ಗರಿಬ್‌ಕೂ ಹಟಾವೊ.......

ಇಂದಿರಾಗಾಂಧಿಯವರು ಹೇಳುತ್ತಾರೆ- ಗ್ರಾಮೀಣ ಜನರ ಸ್ಥಿತಿ ಸುಧಾರಿಸಿದೆ ಅಂತ. ಅವರದೇ ಸರ್ಕಾರದ ಅಂಕಿ ಸಂಖ್ಯೆ ಬೇರೆ ಕಥೆ ಹೇಳುತ್ತವೆ. ಬಡತನದ ರೇಖೆಯ ಕೆಳಗಿರುವ ಜನರ ಸಂಖ್ಯೆ ಶೇಕಡಾ 50 ರಿಂದ ಶೇಕಡಾ 70 ಕ್ಕೇರಿದೆ. ಅವರ ಆಡಳಿತಾವಧಿಯಲ್ಲಿ ನಿರುದ್ಯೋಗಿಗಳ ಸಂಖ್ಯೆ 26.3 ಲಕ್ಷದಿಂದ 81.5 ಲಕ್ಷಕ್ಕೆ ಏರಿದೆ.

ಇಡೀ ದೇಶದಲ್ಲಿ ಸ್ಮಶಾನದಂತಹ ಮೌನ ಆವರಿಸಿದಾಗ ಜನಸಾಮಾನ್ಯರೂ ಕೂಡ ಪಿಸುಗುಡಲೂ ಕೂಡ ಅತ್ತಿತ್ತ ನೋಡಬೇಕಾದ ವಾತಾವರಣದಲ್ಲಿ ಲೋಕಸಭೆಯಲ್ಲಿ ವಿರಾಜಮಾನರಾಗಿದ್ದ ಇಂದಿರಾಗಾಂಧಿಯವರ ಎದುರಿಗೆ ಅವರ ಶಾಸನದ ಕರಾಳ ಮುಖಗಳನ್ನು ಬಿಚ್ಚಿಟ್ಟ ಎ.ಕೆ.ಜಿ.ಯವರ ಭಾಷಣದ ಆಯ್ದ ಭಾಗಗಳು.

ಚುನಾಯಿತ ಸರ್ಕಾರದಿಂದ ಇಳಿಸಬಾರದು?

ಶ್ರೀ ಜಗಜೀವನರಾಮ ಹೇಳುತ್ತಾರೆ. ಜನರೇ ಚುನಾಯಿಸಿದ ಸರ್ಕಾರವನ್ನು ಚಳುವಳಿಮಾಡಿ ಕೆಳಗಿಳಿಸುವುದು ಸರಿಯಲ್ಲ ಅಂತ. 1959 ರಲ್ಲಿ ಏನುಸ್ವಾಮಿ ಮಾಡಿದ್ದು ನಿಮ್ಮ ಪ್ರಧಾನಿ ಇಂದಿರಾಗಾಂಧಿ ಕೇರಳದಲ್ಲಿ ಚುನಾಯಿತ ಕಮ್ಯುನಿಸ್ಟ್ ಸರ್ಕಾರವನ್ನು ಆಕೆ ಕಾಂಗ್ರೆಸ್ ಅಧ್ಯಕ್ಷೆ ಆಗಿದ್ದಾಗ ವಿಮೋಚನಾ ಹೋರಾಟ ಎಂಬ ಹೆಸರಿನ ಚಳುವಳಿ ಮಾಡಿ ಉರುಳಿಸಲಿಲ್ಲವೆ.

ಸಿಪಿಎಸ್‌ಯು, ಸಿಪಿಐ ಪಾತ್ರ ದುರದೃಷ್ಟಕರ........

ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷ ಮತ್ತಿತರ ಕಮ್ಯುನಿಸ್ಟ್ ಪಕ್ಷಗಳು ಭಾರತ ಸರ್ಕಾರದ ಪ್ರಚಾರಕ್ಕೆ ಮಾರು ಹೋಗಿದ್ದಾರೆ. ತುರ್ತುಪರಿಸ್ಥಿತಿ ಬಲ ಪ್ರತಿಗಾಮಿಗಳ ವಿರುದ್ಧ ಅಂತ. ಇದು ಜನರ ಹೋರಾಟಗಳ ಮೇಲೆ ದಬ್ಬಾಳಿಕೆ ಎಂಬ ನಿಜಸಂಗತಿ ಅವರಿಗೆ ಅರಿವಾಗುತ್ತಿಲ್ಲ ಎಂಬುದು ದುರದೃಷ್ಟಕರ..... ರಾಣಿಯ ವಿಧೇಯ ವಿರೋಧ ಪಕ್ಷವಾಗಿ ಸಿಪಿಐ ಕೆಲಸ ಮಾಡುತ್ತಿರುವುದು ಅಷ್ಟೇ ದುರದೃಷ್ಟಕರ

ಎಚ್ಚರಿಸುತ್ತಾ ಬಂದ ಸಿಪಿಐ(ಎಂ) ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ವಿಶಾಲವಾದ ಐಕ್ಯತೆಯನ್ನು ರೂಪಿಸಲು ಕರೆನೀಡುತ್ತಾ ಬಂತು.

ಕಾಂಗ್ರೆಸ್ ಆಳ್ವಿಕೆಯ ವಿರುದ್ಧ ಬೆಳೆಯುತ್ತಾ ಹೋದ ಜನತೆಯ ಪ್ರತಿರೋಧವು ರಾಯಬರೇಲಿ ಕ್ಷೇತ್ರದಿಂದ ಶ್ರೀಮತಿ ಇಂದಿರಾ ಗಾಂಧಿಯವರ ಆಯ್ಕೆಯನ್ನು ರದ್ದುಮಾಡಿದ ಅಲಹಾಬಾದ್ ಉಚ್ಚನ್ಯಾಯಾಲಯದ ತೀರ್ಪಿನಿಂದಾಗಿ ಹೊಸ ಆಯಾಮ ಪಡೆಯುವಂತಾಯಿತು. ಜಯಪ್ರಕಾಶ್ ನಾರಾಯಣರು ನೇತೃತ್ವವಹಿಸಿದ ಚಳುವಳಿಯು ಪ್ರಜಾಸತ್ತಾತ್ಮಕ ಹಕ್ಕುಗಳ ಮತ್ತು ನಾಗರಿಕ ಸ್ವಾತಂತ್ರ್ಯದ ರಕ್ಷಣೆ ಮತ್ತು ಭ್ರಷ್ಟಾಚಾರದ ವಿರುದ್ಧದ ಹೋರಾಟಕ್ಕೆ ಪ್ರಾಮುಖ್ಯತೆ ನೀಡಿತ್ತು. ಬಹುಬೇಗ ಜನಸಂಘ, ಕಾಂಗ್ರೆಸ್ (ಓ) ಮತ್ತು ಸ್ವತಂತ್ರ ಪಕ್ಷಗಳು ಸೇರಿದಂತೆ ಬಂಡವಾಳಶಾಹಿ ವಿರೋಧಪಕ್ಷಗಳು ಚಳುವಳಿಯತ್ತ ಆಕರ್ಷಿತವಾದವು. ಸಿಪಿಐ(ಎಂ) ಬಿಹಾರ ಆಂದೋಲನಕ್ಕೆ ಹಾಗೂ ಜೆ.ಪಿ. ಆಂದೋಲನಕ್ಕೆ ಬೆಂಬಲ ನೀಡಿತ್ತಲ್ಲದೆ ಸ್ವತಂತ್ರವಾಗಿಯೂ ಹೋರಾಟಗಳನ್ನು ಸಂಘಟಿಸಿತು. ಪ್ರಜಾಪ್ರಭುತ್ವದ ರಕ್ಷಣೆಗಾಗಿ ಬೆಳೆದು ಬಂದ ಐಕ್ಯತೆಯಿಂದಾಗಿ ಜಯಪ್ರಕಾಶ್ ನಾರಾಯಣರು "ಆರ್.ಎಸ್.ಎಸ್., ನಕ್ಸಲ್ ವಾದಿಗಳು ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟರು ಮೊದಲಾದ ಎಲ್ಲಾ ತರಹದ ಶಕ್ತಿಗಳಿಗೆ ಮಾನ್ಯತೆ ನೀಡುತ್ತಿದ್ದಾರೆ" ಎಂದು ಶ್ರೀಮತಿ ಇಂದಿರಾ ಗಾಂಧಿ ಆರೋಪಿಸುವಂತಾಯಿತು.



ಸಂಪಾದಕರೆಂದರೆ ಏನೆಂದುಕೊಂಡಿದ್ದೀರಿ?
ಸೆನ್ಸಾರ್‌ರವರಿಗಿಂತಲೂ ಹೆಚ್ಚು ಏಷ್ಟರು

ತುರ್ತುಪರಿಸ್ಥಿತಿಯ ಅವಧಿಯಲ್ಲಿ, ಶ್ರೀಮತಿ ಗಾಂಧಿ ಸಿಪಿಐ ಬೆಂಬಲದೊಂದಿಗೆ, ತುರ್ತುಪರಿಸ್ಥಿತಿಯನ್ನು ಬಲ ಪ್ರತಿಗಾಮಿಗಳ ಮತ್ತು ಫ್ಯಾಸಿಸಂ ವಿರುದ್ಧದ ಕ್ರಮವೆಂದು ಬಣ್ಣಿಸತೊಡಗಿದ್ದರು. ತುರ್ತುಪರಿಸ್ಥಿತಿಗೆ ಸಿಪಿಐ(ಎಂ)ನ ದೃಢವಾದ ವಿರೋಧವು ಕಾಂಗ್ರೆಸಿನ ಅಂತಹ ರಾಜಕೀಯ ನಿಲುಮೆಗೆ ಬಲವಾದ ಅಡ್ಡಿಯಾಗಿತ್ತು. ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಹರಿಬಿಟ್ಟ ಅರೆ-ಫ್ಯಾಸಿಸ್ಟ್ ದಬ್ಬಾಳಿಕೆಯಿಂದಾಗಿ ಶ್ರೀಮತಿ ಗಾಂಧಿಯವರ ಜೊತೆಗಿದ್ದ ದುಷ್ಟಕೂಟ ಬಳಸುತ್ತಿದ್ದ ಕ್ರಾಂತಿಕಾರಿ ಉದ್ಘೋಷಣೆಗಳ ಮೋಸವನ್ನು ಮುಚ್ಚಿಕೊಳ್ಳಲಾಗಲಿಲ್ಲ.

ದ್ವಂದ ನೀತಿಯ ಮುಸುಕಿನಲ್ಲಿ ದಬ್ಬಾಳಿಕೆ:

ಆದ್ದರಿಂದ ಕಾಂಗ್ರೆಸ್ ಆಳ್ವಿಕೆಯು ಸಿಪಿಐ(ಎಂ) ವಿರುದ್ಧ ದ್ವಂದ್ವ ನೀತಿಯನ್ನು ಅನುಸರಿಸತೊಡಗಿತು. ರಾಜ್ಯ ಮಟ್ಟದ ಮತ್ತು ಕೆಳಗಿನ ನಾಯಕರನ್ನು ಮತ್ತು ಕಾರ್ಯಕರ್ತರನ್ನು ದೊಡ್ಡ ಪ್ರಮಾಣದಲ್ಲಿ ಬಂಧಿಸಲಾಯಿತು. ಅಖಿಲ ಭಾರತ ಮಟ್ಟದ ನಾಯಕರನ್ನು ಅವರು



ಜನತಾ ಪಕ್ಷದ ಪ್ರಮುಖರು ವಿಜಯದ ಕ್ಷಣಗಳನ್ನು ಆಚರಿಸುತ್ತಾ ಗಾಂಧೀಜಿಯವರ ಸಮಾಧಿಯ ಬಳಿ. ಜಯಪ್ರಕಾಶ ನಾರಾಯಣ(ಕುಳಿತಿರುವವರು), ಜಗಜೀವನರಾಂ, ಮೊರಾರ್ಜಿ ದೇಸಾಯಿ, ಮತ್ತಿತರರು


ಸಾಮೂಹಿಕ ಚಳುವಳಿಗೆ ಇಳಿದಾಗ ಮಾತ್ರ ಬಂಧಿಸಲಾಗುತ್ತಿತ್ತು. ಇನ್ನುಳಿದಂತೆ ಅಖಿಲ ಭಾರತ ನಾಯಕರನ್ನು ಬಂಧಿಸಲಾಗುತ್ತಿರಲಿಲ್ಲ. ಪಶ್ಚಿಮ ಬಂಗಾಳದಲ್ಲಿಯೂ ಪಕ್ಷವನ್ನು ಕಾನೂನು ಬದ್ಧವಾಗಿ ಕಾರ್ಯನಿರ್ವಹಿಸಲು ಬಿಡಲಾಗಿತ್ತಾದರೂ ಸಾಮಾನ್ಯ ಕಾರ್ಯಕರ್ತರನ್ನು ಭೇಟಿಯಾಡಲಾಯಿತು. ದೇಶಾದ್ಯಂತ ಪಕ್ಷದ ಅನೇಕ ರಾಜ್ಯ ಕಾರ್ಯದರ್ಶಿಗಳೂ ಸೇರಿದಂತೆ ನೂರಾರು ಸಿಪಿಐ(ಎಂ) ನಾಯಕರು ಮತ್ತು ಕಾರ್ಯಕರ್ತರು, ಸಾಮೂಹಿಕ ಸಂಘಟನೆಗಳ ನಾಯಕರು ಜೈಲಿನಲ್ಲಿದ್ದರು. ವಿದ್ಯಾರ್ಥಿ ಚಳುವಳಿಯನ್ನು ಮುಖ್ಯ ಗುರಿ ಯಾಗಿಟ್ಟುಕೊಂಡು ಅನೇಕ ಎಸ್.ಎಫ್.ಐ ಪದಾಧಿಕಾರಿಗಳನ್ನು ಮೀಸಾ ಕಾಯ್ದೆ ಅಡಿಯಲ್ಲಿ ಬಂಧಿಸಲಾಗಿತ್ತು. ಜೈಲಿನಲ್ಲಿದ್ದ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಅತಿರೇಕಗಳನ್ನು ನಡೆಸಲಾಯಿತು. ಇ.ಎಂ.ಎಸ್. ನಂಬೂದರಿಪಾಡ್, ಎಂ. ಬಸವಪೊನ್ನಯ್ಯ ಮತ್ತು ಎ.ಕೆ. ಗೋಪಾಲನ್ ಅಂತಹ ನಾಯಕರನ್ನು ಸ್ವಲ್ಪ ಅವಧಿಗೆ ಮಾತ್ರ ಬಂಧನದಲ್ಲಿಡಲಾಗಿತ್ತು. ಪಕ್ಷದ ಪ್ರಧಾನ ಕಾರ್ಯದರ್ಶಿ ಪಿ. ಸುಂದರಯ್ಯ ಮತ್ತು ಬಿ.ಟಿ.ರಣದಿವೆ ತುರ್ತುಪರಿಸ್ಥಿತಿ ಮುಗಿಯುವ ವರೆಗೂ ಭೂಗತರಾಗಿದ್ದರು. ಪಕ್ಷದ ತೀರ್ಮಾನಕ್ಕೆ ಅನುಗುಣವಾಗಿ ಪಕ್ಷದ ಅನೇಕ ಪ್ರಮುಖ ಕಾರ್ಯಕರ್ತರು ಭೂಗತರಾಗಿ ಕೆಲಸಮಾಡಿದರು.

ಸಂಸತ್ತಿನಲ್ಲಿ ವಿರೋಧ ಪಕ್ಷದ

ಪುಟ 9 ಕ್ಕೆ


ಕರ್ನಾಟಕದಲ್ಲಿ ತುರ್ತುಪರಿಸ್ಥಿತಿ

ಕರ್ನಾಟಕದಲ್ಲಿ ತುರ್ತುಪರಿಸ್ಥಿತಿ ಇರಲಿಲ್ಲ ಅಂತ ದೇವರಾಜ್ ಅರಸ್ ಮತ್ತು ಕಾಂಗ್ರೆಸ್ಸಿಗರು ಪ್ರಚಾರ ಮಾಡಿಕೊಂಡು ಬಂದಿದ್ದಾರೆ. ತುರ್ತುಪರಿಸ್ಥಿತಿಯಲ್ಲಿ ಉತ್ತರ ಭಾರತದ ರಾಜ್ಯಗಳಲ್ಲಿ ಆದಷ್ಟು ಬಲಾತ್ಕಾರದ ಸಂತಾನಹರಣ ಆಪರೇಷನ್‌ಗಳು ತುರ್ಕ್‌ಮನ್ ಗೇಟ್‌ನಂತಹ ಅಲ್ಪಸಂಖ್ಯಾತರ ಮನೆಮಾರು ನಾಶಮಾಡಿದ ಭೀಕರ ಪ್ರಕರಣಗಳು ನಡೆಯುಲಿಲ್ಲ ನಿಜ.


ವಿ.ಜೆ.ಕೆ.ನಾಯರ್


ಆದರೆ ಎಲ್ಲಾ ಜನ ವಿಭಾಗಗಳ ಅದರಲ್ಲೂ ದುಡಿಯುವ ಜನರ ದನಿಯನ್ನು ಅಡಗಿಸಲಾಗಿತ್ತು. ಯಾವುದೇ ರೀತಿಯ ಚಳುವಳಿಗೆ, ಪ್ರತಿಭಟನೆಗೆ ಅವಕಾಶ ಇರಲಿಲ್ಲ. ಅದರಲ್ಲೂ ರೈತ-ಕಾರ್ಮಿಕರ ಹಕ್ಕಿಗಾಗಿ ಹೋರಾಟಗಳನ್ನು ದಮನಿಸಲಾಗಿತ್ತು. 1975 ರ ಜೂನ್ 25, ರ ಮಧ್ಯರಾತ್ರಿ ಕದ ತಟ್ಟಿ ಬಂಧಿಸಿದ ಪ್ರಕರಣಗಳು ಕಡಿಮೆಯಾದರೂ ತುರ್ತುಪರಿಸ್ಥಿತಿಯ ವಿರುದ್ಧ ಯಾವುದೇ ಜನವಿಭಾಗಗಳು, ಹೋರಾಟಕ್ಕೆ ಇಳಿದ ವಿರೋಧಪಕ್ಷದ ನಾಯಕರನ್ನು ಬಂಧಿಸಲಾಗುತ್ತಿತ್ತು. ಸಿಪಿಐ(ಎಂ)ನ ಮತ್ತು ಸಿಐಟಿಯುನ ಹಿರಿಯ ನಾಯಕರಾದ ಕಾಂ|| ಸೂರಿ ಮತ್ತು ಕಾಂ|| ವಿಜೆಕೆ ನಾಯರ್‌ರನ್ನು ಬಂಧಿಸಲಾಗಿತ್ತು. ತಾತ್‌ಗುಣಿಯ ರೊರಿಚ್ ಎಸ್ಟೇಟ್‌ನಲ್ಲಿ ತೋಟ ಕಾರ್ಮಿಕರನ್ನು ಸಂಘಟಿಸಿದ್ದು ಮತ್ತು ಎಕೆಜಿಯ ಚಾರಿತ್ರಿಕ ಪಾರ್ಲಿಮೆಂಟಿನ ಭಾಷಣವನ್ನು ಕನ್ನಡದಲ್ಲಿ ಅಚ್ಚುಮಾಡಿದ್ದು ಅವರ ಅಪರಾಧವಾಗಿತ್ತು. ತಾತಗುಣಿಯ ಎಸ್ಟೇಟ್‌ನ ತೋಟ ಕಾರ್ಮಿಕರನ್ನು ಆಗ ಸಂಘಟಿಸಿದ್ದ ಕಾಂ|| ಜಗನ್ನಾಥ್ ಅವರನ್ನು ಬಂಧಿಸಲಾಗಿತ್ತು. ಎಕೆಜಿ ಪಾರ್ಲಿಮೆಂಟಿನ ಭಾಷಣವನ್ನು ಕನ್ನಡದಲ್ಲಿ ಮುದ್ರಿಸಿದ ಮುದ್ರಣಾಲಯದ ಅಮಾಯಕ ಮಾಲೀಕ (ಪುಟ್ಟಪ್ಪ), ರಾಮಕೃಷ್ಣ ಹೆಗಡೆ, ಜೆ.ಎಚ್. ಪಟೇಲ್ ಮುಂತಾದ ಹಲವು ವಿರೋಧಿ ನಾಯಕರನ್ನು ಬಂಧಿಸಲಾಗಿತ್ತು. ಹಲವು ನಗರಗಳಲ್ಲಿ ಮುಖ್ಯವಾಗಿ ಟ್ರೇಡ್‌ಯೂನಿಯನ್ (ಅದರಲ್ಲೂ ಸಿಐಟಿಯು ನ ಎಲ್ಲಾ ಹಂತದ ನಾಯಕರನ್ನು ಒಂದಲ್ಲ ಒಂದು ನೆಪದ ಮೇಲೆ ಬಂಧಿಸಲಾಗಿತ್ತು. ಹೀಗೆ ರಾಜಕೀಯ ಚಟುವಟಿಕೆಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ತುರ್ತುಪರಿಸ್ಥಿತಿ ಅಷ್ಟೇ ತೀವ್ರವಾಗಿತ್ತು.

ಏಕೆಂದರೆ 1971 ರಲ್ಲಿ ಇಂದಿರಾ ಅವರ ಗರೀಬಿಹಟಾವೋ ಮತ್ತು ಬಾಂಗ್ಲಾದೇಶ ಯುದ್ಧದ ವಿಜಯದ ಅಲೆಯ ಮೇಲೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಜನರ ಆಸೆ-ಆಕಾಂಕ್ಷೆಗಳನ್ನು ಮುಟ್ಟುವಲ್ಲಿ ರಾಜ್ಯದಲ್ಲೂ ವಿಫಲವಾಗಿತ್ತು. ದಬ್ಬಾಳಿಕೆ ಭ್ರಷ್ಟಾಚಾರ, ನಿರುದ್ಯೋಗ ಬಡತನದ ವಿರುದ್ಧ ಜನ ಚಳುವಳಿಗಳು ಎದ್ದು ಬರುತ್ತಿದ್ದವು. ಟ್ರೇಡ್ ಯೂನಿಯನ್ ವಿದ್ಯಾರ್ಥಿ, ರೈತರ ಚಳುವಳಿಗಳು ಗರಿಗೆದರಿಕೊಳ್ಳುತ್ತಿದ್ದ ಕಾಲ ಅದು.


ಚಂಪಾ

1974 ರೈಲ್ವೆ ಮುಷ್ಕರ, ಆ ಮೇಲೆ ಆರಂಭವಾದ ಜೆಪಿಯವರ ನವನಿರ್ಮಾಣ ಚಳುವಳಿಗೆ ಕರ್ನಾಟಕದಲ್ಲಿ ಪ್ರತಿಸ್ಪಂದನ ದೊರಕಿತ್ತು. ಲೇಖಕರು, ಬುದ್ಧಿಜೀವಿಗಳು ಇದರಿಂದ ಆಕರ್ಷಿತರಾಗಿ ಭಾಗವಹಿಸಿದ್ದರು. ಕಾಲೇಜು, ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ವ್ಯವಸ್ಥೆಯನ್ನು ತೀವ್ರವಾಗಿ ಪ್ರಶ್ನಿಸಲು ಆರಂಭಿಸಿದ್ದರು. ಇದನ್ನು ಚಿವುಟಿ ಹಾಕಿದ್ದು ತುರ್ತು ಪರಿಸ್ಥಿತಿ ಪ್ರಜಾಸತ್ತಾತ್ಮಕ ಚಳುವಳಿಯನ್ನು, ಅದರ ಆರೋಗ್ಯಕರ ಬೆಳವಣಿಗೆಯನ್ನು ದಮನ ಮಾಡುವುದರಲ್ಲಿ ಕರ್ನಾಟಕದಲ್ಲೂ ತುರ್ತುಪರಿಸ್ಥಿತಿ ಅಷ್ಟೇ ಪಾತ್ರ ವಹಿಸಿದೆ. ದೇವರಾಜ ಅರಸರ ಸೀಮಿತ ಭೂಸುಧಾರಣೆ ಸ್ವಲ್ಪ ಮಟ್ಟಿಗೆ ಗ್ರಾಮೀಣ ಪ್ರದೇಶದಲ್ಲಿ ಕೆಲವರಿಗೆ ಪರಿಹಾರ ಕೊಟ್ಟಿದ್ದು ಬಿಟ್ಟರೆ ಇಡೀ ವ್ಯವಸ್ಥೆ ಕೊಳೆತು ನಾರುತ್ತಿತ್ತು. ಬಿಕ್ಕಟ್ಟು ಪೀಡಿತವಾಗಿತ್ತು. ಅದನ್ನು ಜನ ಪ್ರಶ್ನಿಸಲಾರಂಭಿಸಿದ್ದರು. ಪ್ರೊಫೆಸರ್ ಚಂದ್ರಶೇಖರ ಪಾಟೀಲರಂತಹ ಲೇಖಕರನ್ನು ತುರ್ತುಪರಿಸ್ಥಿತಿ ಬಗ್ಗೆ ಮಾತಾಡಿದ್ದಕ್ಕೆ ಬಂಧಿಸಲಾಗಿತ್ತು. ಅಲ್ಲದೆ ತುರ್ತುಪರಿಸ್ಥಿತಿಯ ನಂತರ ಭುಗಿಲೆದ್ದ ಟ್ರೇಡ್‌ಯೂನಿಯನ್, ರೈತರ ಹೋರಾಟಗಳು ವಿದ್ಯಾರ್ಥಿ-ಯುವಜನರ, ಸಾಹಿತ್ಯದ ಸಾಂಸ್ಕೃತಿಕ ಚಳುವಳಿಗಳು ತುರ್ತುಪರಿಸ್ಥಿತಿಯಲ್ಲಿ ಪ್ರಜಾಸತ್ತಾತ್ಮಕ ಚಳುವಳಿಯು ಎಷ್ಟು ಒತ್ತಿ ಇಡಲಾಗಿತ್ತು ಎಂಬುದನ್ನು ಸೂಚಿಸುತ್ತದೆ. ○

ತುರ್ತುಪರಿಸ್ಥಿತಿಯಲ್ಲಿ ಸೂರಿ.........



ನಾನು ಮತ್ತು ಸಮರ ಮುಖರ್ಜಿ (ಸಿಐಟಿಯುವಿನ ಅಖಿಲ ಭಾರತ ಕಾರ್ಯದರ್ಶಿ ಹಾಗೂ ಪ.ಬಂಗಾಳದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿದ್ದರು) ಕೆಜಿಎಫ್‌ನಲ್ಲಿದ್ದೆವು. ನಾನು ಚಿನ್ನದಗಣಿ ಕಾರ್ಮಿಕ ಸಂಘದ ಅಧ್ಯಕ್ಷನಾಗಿದ್ದೆ. ಕಾರ್ಮಿಕರ ಸಭೆಯೊಂದರ ಸಲುವಾಗಿ ಅಲ್ಲಿ ಸೇರಿದ್ದೆವು. "ತುರ್ತು ಪರಿಸ್ಥಿತಿಯನ್ನು" ಜಾರಿಗೊಳಿಸಲಾಗಿದೆ ಎನ್ನುವ ಘೋಷಣೆಯನ್ನು ಪ್ರಥಮವಾಗಿ ಕೇಳಿದ್ದು ಅಲ್ಲೆ.

ತುರ್ತು ಪರಿಸ್ಥಿತಿ' ಹೇರಿಕೆ ನಂತರ ಭೂಗತರಾಗಲು ನಾವು ಯೋಚಿಸಿದೆವು. ಆದರೆ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕಾರ್ಮಿಕರ ಮೇಲಿನ ದಮನ ಆಕ್ರಮಣಗಳು ಹೆಚ್ಚಾದವು. ಕಾರ್ಮಿಕರ ಹಕ್ಕುಗಳನ್ನು ಕಸಿಯುವ ದಬ್ಬಾಳಿಕೆಗಳು ವಿಪರೀತವಾದವು ಅದೇ ಸಂದರ್ಭಕ್ಕೆ ಬೆಂಗಳೂರಿನ ಬಳಿಯಿರುವ ರೊರಿಚ್ ಮಾಲಿಕತ್ವದ ತಾತಗುಣಿ ಎಸ್ಟೇಟ್‌ನಲ್ಲಿ ದುಡಿಯುತ್ತಿದ್ದ ಕಾರ್ಮಿಕರು ಕನಿಷ್ಟ ಕೂಲಿ ಹಾಗೂ ಸೌಲಭ್ಯಗಳಿಗಾಗಿ ಹೋರಾಟ ನಡೆಸಿದ್ದರು. ಪಿ.ಜಗನ್ನಾಥ್ ಮತ್ತು ನಾನು ಅವರ ಹೋರಾಟಗಳಿಗೆ ನೇತೃತ್ವ ನೀಡಿದ್ದೆವು. ರೋರಿಚ್ ತಾತಗುಣಿ ಎಸ್ಟೇಟಿನಲ್ಲಿ ಬೆಲೆ ಬಾಳುವ ಸುಗಂಧದ ಸಾಮಗ್ರಿಗಳನ್ನು ಬೆಳೆದು ವಿದೇಶಕ್ಕೆ ರಫ್ತು ಮಾಡುತ್ತಿದ್ದರು. ಅಪಾರ ಲಾಭ ಬರುತ್ತಿತ್ತು. ಆದರೆ ಕೂಲಿ ಮಾಡುವ ಕಾರ್ಮಿಕರಿಗೆ ಕನಿಷ್ಟ ಸೌಲಭ್ಯಗಳನ್ನು ನೀಡುತ್ತಿರಲಿಲ್ಲ. ಕಾರ್ಮಿಕರನ್ನು ನಿಕೃಷ್ಟವಾಗಿ ನೋಡಲಾಗುತ್ತಿತ್ತು. ಹೀಗಾಗಿ ಕಾರ್ಮಿಕರ ಬೆಂಬಲವಾಗಿ ಕಾಂ: ಸೂರಿ ನಿಂತರು. ರೋರಿಚ್ ಹಾಗೂ ದೇವರಾಜ ಅರಸುರವರು ಆಪ್ತ ಸ್ನೇಹಿತರು. ರೋರಿಚ್ ಎಸ್ಟೇಟಿನಲ್ಲಿ ಅರಸು ಅವರು ತಂಗುತ್ತಿದ್ದರು. ಅರಸು ರೋರಿಚ್ ಬೆಂಬಲಕ್ಕೆ ನಿಂತರು. ಕಾರ್ಮಿಕರ ಹೋರಾಟ ನಡೆದೇ ಇತ್ತು. 'ತುರ್ತುಪರಿಸ್ಥಿತಿ' ಯನ್ನು ಬಳಸಿ ಸೂರಿಯವರನ್ನು ಬಂಧಿಸುವಂತೆ ರೋರಿಚ್ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದರು ಜೊತೆಗೆ ಯಶಸ್ವಿಯೂ ಆದರು.


ಬಿ.ಮಾಧವ


ಒಂದು ದಿನ ಅಂದಿನ ಬೆಂಗಳೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಾಗಿದ್ದ ವಿಜಯ ಸಾಸನೂರ್ ಪೋಲೀಸ್ ಠಾಣೆಗೆ ಬರುವಂತೆ ಕೋರಿ ದ್ದರು. ನಾನು ಅವರನ್ನು ಭೇಟಿಯಾಗುವ ಸಲುವಾಗಿ ಪೊಲೀಸ್ ಠಾಣೆಗೆ ಹೋದೆ. ಹೋರಾಟಕ್ಕೆ ಸಂಬಂಧಿಸಿದಂತೆ ನನ್ನೊಂದಿಗೆ ಏನಾದರು ಚರ್ಚಿಸಬಹುದೆಂದು ನಾನು ಭಾವಿಸಿದ್ದೆ, ಸುಮಾರು ಮೂರರಿಂದ ನಾಲ್ಕು ಗಂಟೆಗಳ ಕಾಲ ಕಾದರೂ ಎಸ್.ಪಿ. ಯವರು ಬರಲೇ ಇಲ್ಲ. ನಂತರ ಠಾಣೆಯ ಸಿಬ್ಬಂದಿ "ಡಿಫೆನ್ಸ್ ಆಫ್ ಇಂಡಿಯಾ" ಕಾನೂನಿನಡಿ ನಿಮ್ಮನ್ನ ಬಂಧಿಸಿರುವುದಾಗಿ ತಿಳಿಸಿ ಕೂಡಲೇ ನನ್ನನ್ನು ಬಳ್ಳಾರಿ ಜೈಲಿಗೆ ಕರೆದುಕೊಂಡು ಹೋದರು. ತುರ್ತುಪರಿಸ್ಥಿತಿ ಬಲಗೆ ನಾನು ಬಿದ್ದದ್ದು ಹೀಗೆ....

ಹೀಗೆ ತಮ್ಮ ಬಂಧನದ ದಿನಗಳನ್ನು ನೆನಪಿಸಿಕೊಂಡವರು. ಕಾಂ|| ಎಸ್. ಸೂರ್ಯನಾರಾಯಣರಾವ್. ಪ್ರಸ್ತುತ ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿಗಳಾಗಿರುವ ಹಾಗೂ ಐದು ದಶಕಗಳಿಗಿಂತಲೂ ಮಿಗಿಲಾಗಿ ರಾಜ್ಯದ ಕಾರ್ಮಿಕ ಚಳುವಳಿಯಲ್ಲಿ ದುಡಿದು ಸಿಐಟಿಯುವಿನ ರಾಜ್ಯ ಅಧ್ಯಕ್ಷರೂ ಆಗಿರುವ ಸೂರಿಯವರು ತುರ್ತುಪರಿಸ್ಥಿತಿಯ ಸಮಯದಲ್ಲಿ ಸುಮಾರು ಎಂಟೊಭತ್ತು ತಿಂಗಳನ್ನು ಸರಳುಗಳ ಹಿಂದೆ ಕಳೆಯಬೇಕಾಯಿತು.

ತಮ್ಮ ಹಾಗೂ ಕೆಲವೇ ಕೆಲವು ವ್ಯಕ್ತಿಗಳ ಹಿತಾಸಕ್ತಿಗಳ ಸಲುವಾಗಿ 'ತುರ್ತುಪರಿಸ್ಥಿತಿ'ಯೆಂಬ ಅಸ್ತ್ರವನ್ನು ಬಳಸಿ ಪ್ರಜಾಸತ್ತೆಯ ಉಳಿವಿಗಾಗಿ ಹಾಗೂ ಜನತೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ದುಡಿಯುತ್ತಿದ್ದ ದೇಶಪ್ರೇಮಿ ಹೋರಾಟಗಾರರನ್ನು ಇಂದಿರಾಗಾಂಧಿ ನೇತೃತ್ವದ ಆಳುವವರ್ಗ ದಮನ ಮಾಡಿದ್ದಕ್ಕೆ ಇದೊಂದು ಸ್ಪಷ್ಟ ಉದಾಹರಣೆ.

'ಡಿಟನ್ಯೂಗಳ' ಲೆಕ್ಕದಲ್ಲಿ ಸೂರಿಯವರನ್ನು ಬಂಧಿಸಿದರಾದರೂ ಒಂದೇ ಒಂದು ಸಣ್ಣ ಕಾರಣವನ್ನೂ ನೀಡದೆ ದಿಢೀರನೆ ಬಂಧಿಸಲಾಗಿತ್ತು. ಬಂಧನದ ಕಾರಣವನ್ನೇ ತಿಳಿಯದೇ ಜೈಲುವಾಸ ಅನುಭವಿಸಿದ್ದ ಅವರು ತುರ್ತುಪರಿಸ್ಥಿತಿ ಹಿಂತೆಗೆದುಕೊಂಡ ನಂತರ ಜೈಲಿನಿಂದ ಹೊರಗಡೆ ಬಂದ ನಂತರ ಹೀಗೇ ಒಮ್ಮೆ ವಿಜಯ ಸಾಸನೂರು ಅವರಿಗೆ ಎದುರಾದರಂತೆ, ಅವರು ಸೂರಿಯವರನ್ನು ಬಂಧಿಸಿದ್ದಕ್ಕಾಗಿ ವಿಷಾದ ವ್ಯಕ್ತಪಡಿಸಿದರಂತೆ. "ನಾನು ನಿಮ್ಮನ್ನು ಅರೆಸ್ಟ್ ಮಾಡುವಾಗ ತಪ್ಪು ಮಾಡುತ್ತಿರುವೆನೆಂಬ ಭಾವನೆ ಕಾಡಿತ್ತು. ತಡೆಯಲಾರದೆ ನನ್ನ ತಂದೆಯವರಿಗೆ ವಿಷಯ ತಿಳಿಸಿದೆ. ಅದಕ್ಕೆ ಅವರು ಪ್ರತ್ಯುತ್ತರವಾಗಿ ನೀನು ಒಬ್ಬ ಪೋಲೀಸ್ ಅಧಿಕಾರಿಯಾಗಿರುವೆ. ನಿನ್ನ ಪಾಲಿನ ಕರ್ತವ್ಯವನ್ನು ನೀನು ಮಾಡು ಎಂದರು. ನಂತರ ನಿಮ್ಮನ್ನು ಬಂಧಿಸಲಾಯಿತು" ಎಂದರಂತೆ.

ಕರ್ನಾಟಕದ ಒಳಗೆ ತೀವ್ರ ರೀತಿಯ ಹಿಂಸಾತ್ಮಕ ಕ್ರೌರ್ಯವಿಲ್ಲದೆ ಇದ್ದರೂ ಭಯ, ಸಂಶಯ, ಪತ್ರಿಕಾ, ಕಾರ್ಮಿಕರ, ರೈತರು ಬೆಂಗಳೂರಿನ ಕಾರ್ಮಿಕ ಸಂಘಕ್ಕೆ ಪ್ರಜಾಸತ್ತೆ ಕಳೆದುಕೊಂಡ ಅನುಭವ ಬೆಂಗಳೂರಿನ ಎರಡು ಸೀಟುಗಳನ್ನು ಕಾಂಗ್ರೆಸ್ ಕಳೆದುಕೊಂಡಿತು. ಕಾರ್ಮಿಕ ವರ್ಗದ ವಿಶ್ವಾಸ ಕಳೆದುಕೊಂಡಿತು.


ಪಿ.ಜಗನ್ನಾಥ್

ಕರ್ನಾಟಕದಲ್ಲಿ ತುರ್ತುಪರಿಸ್ಥಿತಿಯ ಬಿಸಿ ತಟ್ಟಲಿಲ್ಲವೆಂದು ಹೇಳಲಾಗುತ್ತಿದೆ. ಇದು ಸರಿಯಲ್ಲ. ದುಡಿಯುವ ಜನರ ಹಾಗೂ ಕಾರ್ಮಿಕರ ಮೇಲೆ ಇನ್ನಿಲ್ಲದ ದಾಳಿಗಳು ಇಲ್ಲೂ ಸಹ ಆಗಿವೆ - ತುರ್ತುಪರಿಸ್ಥಿತಿಯ ಛಾಯೆಯಿಂದಾಗಿ ಬೋನಸ್ ರದ್ದಾಯಿತು. ಕಾರ್ಮಿಕರ ಮೇಲೆ ಎಗ್ಗಿಲ್ಲದೆ ದಮನ ನಡೆದಿದೆ 'ಹಾಗಾಗಿಯೆ ತುರ್ತುಪರಿಸ್ಥಿತಿಯ ವಿರುದ್ಧ ಕಾರ್ಮಿಕರು ಸಮಾವೇಶವನ್ನೇ ಸಂಘಟಿಸಿದ್ದರು. ಇದರಿಂದಾಗಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಬೆಂಗಳೂರಿನ ಎರಡು ಎಂ.ಪಿ. ಸೀಟುಗಳನ್ನು ಕಳೆದುಕೊಂಡಿತು. ಈ ಸಂದರ್ಭದಲ್ಲಿ ಕೆಂಗಲ್ ಹನುಮಂತಯ್ಯನವರಂತವರೂ ಸೋತರು. ಕಾಂಗ್ರೆಸ್ ವಿರೋಧಿ ಅಲೆ ರಾಜ್ಯದಲ್ಲಿ ಮೂಡಿಬಂದಿತ್ತು. ○

ಆ ದಿನ ದಢಾರನೇ ಮನೆ ನುಗ್ಗಿದ ಪೋಲೀಸರು ಕಾಗದ, ಪತ್ರ, ಪುಸ್ತಕ ಇತರೆ ದಾಖಲೆಗಳನ್ನು ಚೆಲ್ಲಾಪಿಲ್ಲಿ ಮಾಡಿದರು. ಮನೆಯನ್ನೆಲ್ಲ ಶೋಧಿಸಿದರು ಕೊನೆಗೆ ಮನೆಯಿಂದ ಎರಡು ವಸ್ತುಗಳನ್ನು ಮಾತ್ರ ತೆಗೆದುಕೊಂಡರು. ಅವುಗಳಲ್ಲಿ ಕೇರಳದ ಅರ್ಥಶಾಸ್ತ್ರಜ್ಞ ಕೆ.ಎನ್.ರಾಜ್ ತುರ್ತುಪರಿಸ್ಥಿತಿಗೆ ಮೊದಲೇ ಬರೆದಿದ್ದ 'ಭಾರತದ ಅರ್ಥಪರಿಸ್ಥಿತಿಯ ಪ್ರಬಂಧದ ವಿಶ್ಲೇಷಣಾತ್ಮಕ ಪ್ರಬಂಧದ ಪ್ರತಿ ಒಂದು.

ಹಾಸ್ಯಾಸ್ಪದ ರೀತಿಯ ನೆಪವೊಡ್ಡಿ ಸೆಕ್ಷನ್ 107 ರ ಅಡಿಯಲ್ಲಿ ಬಂಧಿಸಿದರು ಎಂದು ತುರ್ತುಪರಿಸ್ಥಿತಿಯನ್ನು ನೆನಪಿಸಿಕೊಂಡವರು ಕಾರ್ಮಿಕ ಮುಖಂಡರು ಹಾಗೂ ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರು ಆದ ಮಂಗಳೂರಿನ ಬಿ.ಮಾಧವ ಅವರು.

ತುರ್ತು ಪರಿಸ್ಥಿತಿಯ ಅನುಭವ.......

ಪುಟ 7 ರಿಂದ

ಗೈರುಹಾಜರಿಯನ್ನು ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಅಮಾನತ್ತನ್ನು ಬಳಸಿಕೊಂಡು ಕಾಂಗ್ರೆಸ್ ಸಂವಿಧಾನದ 42 ತಿದ್ದುಪಡಿ ಮಸೂದೆಯನ್ನು ಪಾಸುಮಾಡಿಕೊಂಡಿತು. ಇದರಿಂದಾಗಿ ಮತ್ತೆ ಜನತೆಗೆ ಎಲ್ಲಾ ಸಂಸದೀಯ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ನಿರಾಕರಿಸಿದಂತಾಯಿತು. ಸಂಸತ್ತಿನ ಅವಧಿಯನ್ನು ಇನ್ನೊಂದು ವರ್ಷಕ್ಕೆ ವಿಸ್ತರಿಸಿ 6 ವರ್ಷಕ್ಕೆ ಹೆಚ್ಚಿಸಲಾಯಿತು. ಕಾಂಗ್ರೆಸಿನ ಈ ದೌರ್ಜನ್ಯ ಅವರಿಗೆ ತಿರುಗು ಬಾಣವಾಯಿತು. ಬಲವಂತದ ಸಂತಾನಹರಣ ಶಸ್ತ್ರಕ್ರಿಯೆಯ ಹೆಸರಿನಲ್ಲಿ ನಡೆಸಲಾದ ಅತಿರೇಕಗಳು ಮತ್ತು ಸಂಜಯಗಾಂಧಿ ನೇತೃತ್ವದಲ್ಲಿ ನಡೆಸಲಾದ ಕಟ್ಟಡ ನಾಶ ಪ್ರಕರಣಗಳು ಕಾಂಗ್ರೆಸ್ ಸರ್ವಾಧಿಕಾರಿ ಆಳ್ವಿಕೆಯ ಸಂಕೇತಗಳಾದವು.



ಐತಿಹಾಸಿಕವೆನಿಸಿದ 1977 ಚುನಾವಣೆ ವಿರೋಧ ಪಕ್ಷಗಳು ದೌರ್ಜನ್ಯದ ಅಡಿಯಲ್ಲಿ ನಲುಗಿದ ಪರಿಸ್ಥಿತಿಯ ಲಾಭಪಡೆದು ಪುನಃ ಅಧಿಕಾರಕ್ಕೆ ಬಂದು ಬಿಡಬಹುದೆಂದು ಬಗೆದ ಶ್ರೀಮತಿ ಇಂದಿರಾಗಾಂಧಿಯವರು ಏಕಾಏಕಿಯಾಗಿ 1977 ಜನವರಿ ಅಂತ್ಯದಲ್ಲಿ ಚುನಾವಣೆಯನ್ನು ಸಾರಿದರು. 1977 ರ ಐತಿಹಾಸಿಕ ಚುನಾವಣೆಯಲ್ಲಿ ಸರ್ವಾಧಿಕಾರಿ ಆಳ್ವಿಕೆಯ ವಿರುದ್ಧ ಜನತೆಯ ವ್ಯಾಪಕ ಪ್ರತಿರೋಧ ವ್ಯಕ್ತವಾಯಿತು. ಮೊಟ್ಟ ಮೊದಲ ಭಾರಿಗೆ ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರ ಕಳೆದುಕೊಂಡಿತು. ಶ್ರೀಮತಿ ಗಾಂಧಿಯವರೇ ಸೋಲುವಂತಾಯಿತು. ವಿವಿಧ ಬಂಡವಾಳಶಾಹಿ ವಿರೋಧ ಪಕ್ಷಗಳು ಒಂದಾಗಿ ರಚಿಸಿದ ಜನತಾ ಪಕ್ಷ ಅಧಿಕಾರಕ್ಕೆ ಬಂತು. ಮೊರಾರ್ಜಿ ದೇಸಾಯಿ ಪ್ರಧಾನ ಮಂತ್ರಿಯಾದರು. ಸಂವಿಧಾನಕ್ಕೆ ಹಾಗೂ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ತುರ್ತುಪರಿಸ್ಥಿತಿಯಲ್ಲಿ ಮಾಡಲಾದ ಬಹುತೇಕ ಹಾನಿಯನ್ನು ಜನತಾ ಪಕ್ಷದ ಸರ್ಕಾರದ ಸರಿಪಡಿಸಿತು. ಆದರೆ ಜನತಾ ಪಾರ್ಟಿ ಸರ್ಕಾರದ ವರ್ಗಗುಣವು ಕಾಂಗ್ರೆಸಿನಿಂದ ಭಿನ್ನವಲ್ಲದಾದುದರಿಂದ ಅದರ ಮೂಲಭೂತ ನೀತಿಗಳಲ್ಲಿ ಬದಲಾವಣೆ ಬರಲಿಲ್ಲ.

ಸಿಪಿಐ(ಎಂ)ನ 10ನೇ ಮಹಾಧಿವೇಶನದ ರಾಜಕೀಯ ನಿರ್ಣಯವು ತುರ್ತುಪರಿಸ್ಥಿತಿಯ ಅನುಭವವನ್ನು ಪರಿಶೀಲಿಸುತ್ತಾ ಪಕ್ಷವು ಈ ಕೆಳಗಿನಂತೆ ಎಚ್ಚರಿಕೆ ನೀಡಿತು. "ಸಾಮ್ರಾಜ್ಯಶಾಹಿ ನೆರವಿನ ಮೇಲೆ ಮತ್ತು ಜಾಗತಿಕ ಮಾರುಕಟ್ಟೆಯ ಮೇಲೆ ಹೆಚ್ಚುತ್ತಿರುವ ಅವಲಂಬನೆ ಮತ್ತು ಬಹುರಾಷ್ಟ್ರೀಯ ಕಂಪೆನಿಗಳಿಗೆ ನೀಡುತ್ತಿರುವ ಆಹ್ವಾನವು ಸರ್ವಾಧಿಕಾರಿ ಶಕ್ತಿಗಳನ್ನು ಬಲಪಡಿಸುತ್ತದೆ. ಗುತ್ತೆದಾರಿಗಳ, ಹಿರಿಯ ಬಂಡವಾಳಿಗರ, ಮತ್ತು ಭೂಮಾಲಿಕರ ಹಿಡಿತ ಭಾರತದ ಆರ್ಥಿಕತೆಯ ಮೇಲೆ ಮುಂದುವರೆದಷ್ಟು ಕಾಲ ಒಂದಲ್ಲ ಒಂದು ರಂಗವು ಸರ್ವಾಧಿಕಾರವನ್ನು ಹೇರಲು ಮತ್ತು ಆಮೂಲಕ ತನ್ನ ಆಳ್ವಿಕೆಯನ್ನು ಮುಂದುವರೆಸಲು ಪ್ರಯತ್ನಮಾಡುವುದು. ಒಂದು ರಂಗಕ್ಕೆ ಅಥವಾ ಪಕ್ಷಕ್ಕೆ ಪ್ರಜಾಪ್ರಭುತ್ವಕ್ಕೆ ನಿಷ್ಠೆ ಮತ್ತು ಸರ್ವಾಧಿಕಾರತ್ವವನ್ನು ವಿರೋಧಿಸುವ ಬದ್ಧತೆ ಇರುತ್ತದೆ ಎಂದು ನಿರ್ಧರಿಸುವುದು ತಪ್ಪಾಗುತ್ತದೆ."

ಇದು ಪ್ರಸಕ್ತ ಸಂದರ್ಭದಲ್ಲಿ ಹೆಚ್ಚು ಪ್ರಸ್ತುತವಾಗಿದೆ ಭಾರತದಲ್ಲಿ ಸಂಸದೀಯ ಪ್ರಜಾಪ್ರಭುತ್ವವು ತುರ್ತುಪರಿಸ್ಥಿತಿಯ ಧಾಳಿಯನ್ನು ಎದುರಿಸಿ ಬದುಕುಳಿದಿದೆ. ಸರ್ವಾಧಿಕಾರದ ವಿರುದ್ಧದ ಹೋರಾಟವು ಜನತೆಯ ಪ್ರಜಾಸತ್ತಾತ್ಮಕ ಪ್ರಜ್ಞೆಯನ್ನು ಹೆಚ್ಚಿಸಿದೆ. ಆದರೆ ತುರ್ತುಪರಿಸ್ಥಿತಿಯ ನಂತರದ ದಶಕಗಳಲ್ಲಿ ಬಂಡವಾಳಶಾಹಿ-ಭೂಮಾಲೀಕ ಆಳ್ವಿಕೆಯ ಪರಿಣಾಮದಿಂದಾಗಿ ಅನೇಕ ಸಂಸದೀಯ ಸಂಸ್ಥೆಗಳು ಬಲಹೀನವಾಗಿದ್ದು ಕೋಮುವಾದಿ ಶಕ್ತಿಗಳ ಬೆಳವಣಿಗೆಗೆ ದಾರಿಮಾಡಿಕೊಟ್ಟಿವೆ. ಇಂದು ಭಾರತವೂ ಹಿಂದೂ ರಾಷ್ಟ್ರದ ಪ್ರತಿಗಾಮಿ ಸಿದ್ಧಾಂತವನ್ನು ಹೊಂದಿರುವ, ಸಹಜವಾಗಿ ಪ್ರಜಾಪ್ರಭುತ್ವ ವಿರೋಧಿ ಹಾಗೂ ಸರ್ವಾಧಿಕಾರಿಯಾಗಿರುವ ಆರ್.ಎಸ್.ಎಸ್.ಗೆ ಬದ್ಧತೆಯನ್ನು ಹೊಂದಿರುವ ಪಕ್ಷವೊಂದರ ಆಳ್ವಿಕೆಯ ಅಡಿಯಲ್ಲಿದೆ. ಒಂದು ದಶಕದಿಂದ ಅನುಸರಿಸ ಲಾಗುತ್ತಿರುವ ಉದಾರೀಕರಣದ ಪ್ರಕ್ರಿಯೆ ಮತ್ತು ಅದರಿಂದಾಗಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ಹಿರಿಯ ಬಂಡವಾಳಿಗರಿಗೆ ದೊರೆತಿರುವ ಸ್ವಾತಂತ್ರ್ಯ ಅಪಾಯವನ್ನು ಹೆಚ್ಚಿಸಿದೆ. ಸಮಾಜವನ್ನು ಕೋಮುವಾದೀಕರಿಸುವುದರಿಂದ ಮತ್ತು ಉದಾರೀಕರಣದ ದಾಳಿಯಿಂದ ಪ್ರಜಾಪ್ರಭುತ್ವಕ್ಕೆ ವಿರೋಧವಾದ ಶಕ್ತಿಗಳು ಮೂಲಭೂತವಾಗಿ ಹೊರಹೊಮ್ಮುತ್ತಿವೆ.

ಆಳುವ ವರ್ಗದ ಪ್ರಮುಖ ವಿಭಾಗಗಳು ಈಗಾಗಲೇ ಪರಿಸ್ಥಿತಿಯ ಅವಶ್ಯಕತೆಗಳಿಗೆ ಸ್ಪಂಧಿಸಲು ಆರಂಭಿಸಿವೆ. ಬಿಜೆಪಿ ಆಳ್ವಿಕೆಯಲ್ಲಿ ಸಂಸತ್ತಿನ ಅನುಮತಿ ಇಲ್ಲದೆ ಸಂವಿಧಾನವನ್ನು ಪರಾಮರ್ಶೆಗೆ ಒಳಪಡಿಸುವ ಪ್ರಯತ್ನ ನಡೆದಿದೆ. ಅಧ್ಯಕ್ಷೀಯ ಪದ್ಧತಿಯ ಸರ್ಕಾರಕ್ಕೆ ಅದು ಒಲವು ತೋರಿಸಿದೆ. ಆಳುವ ಪಕ್ಷ ಅಥವಾ ರಂಗವು ಲೋಕಸಭೆಯಲ್ಲಿ ಬಹುಮತವನ್ನು ಕಳೆದುಕೊಂಡರೂ ಅಧಿಕಾರದಲ್ಲಿ ಮುಂದುವರೆಯಲು ಸಾಧ್ಯವಾಗುವಂತೆ ಲೋಕಸಭೆಯ ಅವಧಿಯನ್ನು ನಿಗಧಿಪಡಿಸಲು ಬಿಜೆಪಿ ಉದ್ದೇಶಿಸಿದೆ. ಬಿಜೆಪಿಯು ಬಿಜೆಪಿಯೇತರ ರಾಜ್ಯ ಸರ್ಕಾರಗಳ ವಿರುದ್ಧ ಸಂವಿಧಾನದ 356 ನೇ ವಿಧಿಯನ್ನು ಬಳಸಲು ಕಾಂಗ್ರೆಸ್‌ನಷ್ಟೇ ಉತ್ಸುಕತೆಯನ್ನು ತೋರಿಸಿದೆ. ರಾಜ್ಯ ಸಭೆಯಲ್ಲಿ ಬಿಜೆಪಿಗೆ ಬಹುಮತ ಇಲ್ಲದಿರುವುದು ಒಂದೇ ಅಡ್ಡಿಯಾಗಿದೆ. ಆರ್.ಎಸ್.ಎಸ್. ಈಗ ವಿಶ್ವ ಹಿಂದೂ ಪರಿಷತ್ ಮತ್ತು ಭಜರಂಗದಳಗಳ ಮೂಲಕ ಎಲ್ಲಾ ಸಂಸ್ಥೆಗಳ ಒಳಗೆ ಪ್ರವೇಶಮಾಡಿ ಅಲ್ಪಸಂಖ್ಯಾತರನ್ನು ಬೆದರಿಸುತ್ತಿರುವುದನ್ನು ಗಮನಿಸಿದರೆ ಸರ್ವಾಧಿಕಾರವು ಮತ್ತೊಮ್ಮೆ ತಲೆಎತ್ತುವ ಸಾಧ್ಯತೆಗಳಿವೆ.

ಪ್ರಜಾಸತ್ತಾತ್ಮಕ ನಡವಳಿಕೆಗಳಿಗೆ ಧಕ್ಕೆ ಒಮ್ಮಿಂದೊಮ್ಮೆಲೆ ತುರ್ತು ಪರಿಸ್ಥಿತಿಯನ್ನು ಹೇರುವ ಬದಲು ಸರ್ವಾಧಿಕಾರವನ್ನು ನಿಧಾನವಾಗಿ ಬೆಳಸಲಾಗುತ್ತಿದೆ. ಪ್ರಜಾಸತ್ತಾತ್ಮಕ ಹಕ್ಕುಗಳ ಬಲವನ್ನು ಕುಂದಿಸುವುದು ಅಲ್ಪಸಂಖ್ಯಾತರಿಗೆ ಬೆದರಿಕೆ ಹಾಕುವುದು, ಹಿಂದುತ್ವಕ್ಕೆ ವಿರುದ್ಧವಾದ ವಿಚಾರಗಳಿಗೆ ಸಾಂಸ್ಕೃತಿಕ ಅಸಹಿಷ್ಣುತೆ ತೋರಿಸುವುದು ದುರ್ಬಲ ಜನ ವಿಭಾಗಗಳನ್ನು ಪ್ರತ್ಯೇಕಿಸಿ, ಅವರ ಮೇಲೆ ದೌರ್ಜನ್ಯ ನಡೆಸುವುದು ಮೊದಲಾದ ಪ್ರವೃತ್ತಿಗಳು ಬೆಳೆಯುತ್ತಿರುವ ಸರ್ವಾಧಿಕಾರದ ಲಕ್ಷಣಗಳಾಗಿವೆ. ಒರಿಸ್ಸಾದಲ್ಲಿ ಗ್ರಹಾಂ ಸ್ಟೇನ್ಸ್ ಮತ್ತು ಆತನ ಇಬ್ಬರು ಮಕ್ಕಳನ್ನು ಕೊಂದಿರುವ ದಾರಾಸಿಂಗನನ್ನು ಗೌರವಿಸುವ ಸಂಘಟನೆಗಳು ಹುಟ್ಟುತ್ತಿವೆ. ವಿಶ್ವಹಿಂದೂ ಪರಿಷತ್ ಆದಿವಾಸಿ ಕ್ರಿಶ್ಚಿಯನ್ನರನ್ನು ಮತ್ತೆ ಹಿಂದುಗಳಾಗಿ ಮತಾಂತರಿಸಲು ತೊಡಗಿದೆ. ಕ್ರಿಶ್ಚಿಯನ್ನರ ವಿರುದ್ಧದ ಧಾಳಿಯನ್ನು ಸಮರ್ಥಿಸಲು ಆರ್.ಎಸ್.ಎಸ್. ಮುಖಂಡ ಸುದರ್ಶನ್ ಬೈಬಲ್ ಹಿಂಸೆಯನ್ನು ಬೋಧಿಸುತ್ತದೆ ಎಂದು ಬಹಿರಂಗವಾಗಿ ಹೇಳುತ್ತಿದ್ದಾರೆ. ಬಿಜೆಪಿಯು ಸಮ್ಮಿಶ್ರ ಸರ್ಕಾರವನ್ನು ನಡೆಸಬೇಕಾಗಿರುವುದರಿಂದ ಅದು ತನ್ನ ಎಲ್ಲಾ ಶಕ್ತಿಯನ್ನು ಪ್ರಯೋಗಿಸುತ್ತಿಲ್ಲ. ಈ ಪ್ರವೃತ್ತಿಗಳಿಂದ ಬಿಜೆಪಿಗೆ ಸಂಪೂರ್ಣ ಬಹುಮತದೊರೆತರೆ ಏನಾಗಬಹುದು ಎಂಬದು ವ್ಯಕ್ತವಾಗುತ್ತದೆ.

ಬಿಜೆಪಿಯು ತುರ್ತುಪರಿಸ್ಥಿತಿಯ 25ನೇ ವರ್ಷಾಚರಣೆಯನ್ನು ಆಚರಿಸಲು ನಿರ್ಧರಿಸಿದ್ದು ತಾನು ಪ್ರಜಾಪ್ರಭುತ್ವದ ರಕ್ಷಕ ಎಂದು ತೋರಿಸಲು ಹೊರಟಿದೆ. ತುರ್ತುಪರಿಸ್ಥಿತಿಯ ಆಳ್ವಿಕೆಯೊಂದಿಗೆ ಮತ್ತು ಸಂಜಯ ಗಾಂಧಿಯವರ ಅತಿರೇಕಗಳೊಂದಿಗೆ ಪ್ರತ್ಯಕ್ಷ ಸಂಭಂದ ಹೊಂದಿರುವ ಮೇನಕಾ ಗಾಂಧಿ ವಾಜಪೇಯಿ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿದ್ದಾಳೆ. ಟರ್ಕಮನ್ ಗೇಟಿನಲ್ಲಿ ಸಂಜಯಗಾಂಧಿ ಆದೇಶದ ಮೇರೆಗೆ ಕಟ್ಟಡಗಳ ನೆಲಸಮ ಮಾಡಿದ ಖ್ಯಾತಿಯ ನೌಕರಶಾಹಿ ಅಧಿಕಾರಿ ಜಗಮೋಹನ್ ಈಗ ಬಿಜೆಪಿಯ ಮಂತ್ರಿಯಾಗಿ ಮಂತ್ರಿಮಂಡಲದಲ್ಲಿದ್ದಾರೆ. ತುರ್ತುಪರಿಸ್ಥಿತಿಯಲ್ಲಿ ಜೈಲಿನಲ್ಲಿದ್ದ ಆರ್.ಎಸ್.ಎಸ್. ಮುಖಂಡರ ಮೋಸದ ಪಾತ್ರ ಬಾಳಾಸಾಹೇಬ ದೇವರಸರ ಪತ್ರಗಳಿಂದ ತಿಳಿಯಬಹುದು. ಜೈಲಿನಲ್ಲಿದ್ದ ಆರ್.ಎಸ್.ಎಸ್. ಮುಖಂಡರು ಬರೆದ ತಪ್ಪೊಪ್ಪಿಗೆಯ ಪತ್ರಗಳಿಗೆ ಲೆಕ್ಕವಿಲ್ಲ ಮತ್ತು ಅಂದು ಜೈಲಿನಲ್ಲಿದ್ದು ಇಂದು ಬಿಜೆಪಿಯ ಮಿತ್ರರಾಗಿರುವ "ಸಮಾಜವಾದಿಗಳು" ಸಾಕ್ಷಿ ಹೇಳಬಹುದು.

ಅಧಿಕಾರವನ್ನು ಕಾಯಂ ಉಳಿಸಿಕೊಳ್ಳಬೇಕೆಂದು ಬಯಸುವ ಆಳುವ ವರ್ಗಗಳ ಯಾವುದೇ ಪಕ್ಷದ ಕೈಯಲ್ಲಿ ಪ್ರಜಾಪ್ರಭುತ್ವ ಸುರಕ್ಷಿತವಾಗಿ ಇರಲಾರದು ಎಂಬುದು ತುರ್ತುಪರಿಸ್ಥಿತಿಯಿಂದ ಕಲಿಯಬೇಕಾದ ಪಾಠ. ಉದಾರೀಕರಣದ ಆರ್ಥಿಕ ಮತ್ತು ಸಾಮಾಜಿಕ ನೀತಿಗಳು ಜನತೆಯ ಪ್ರಮುಖ ಹಿತಗಳ ವಿರುದ್ಧ ಹೋಗುವುದರಿಂದ ಬಂಡವಾಳಶಾಹಿ ಹಿತಗಳ ರಕ್ಷಣೆಗಾಗಿ ಪ್ರಜಾಪ್ರಭುತ್ವವನ್ನು ಸೀಮಿತಗೊಳಿಸಲು ಸಾಮ್ರಾಜ್ಯಶಾಹಿಗಳು ಮತ್ತು ಆಂತರಿಕ ಬಂಡವಾಳವು ಒತ್ತಡ ಹೇರುವುದು. ಸ್ವಲ್ಪವಾದರೂ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಅನುಭವಿಸಿರುವ ಜನತೆ ಸರ್ವಾಧಿಕಾರದ ಪ್ರಯೋಗ ನಡೆಸಿದ ಕಾಂಗ್ರೆಸನ್ನು ಹೀನಾಯವಾಗಿ ಸೋಲಿಸಿದರು. ತಾನು ಪ್ರಜಾಪ್ರಭುತ್ವದ ರಕ್ಷಕ ಎಂದು ತೋರಿಸಲು ಹೊರಟಿರುವ ಬಿಜೆಪಿಯು ಸಹ ಅಂತಹ ದಾರಿಯನ್ನೇ ಆಯ್ಕೆಮಾಡಬಹುದು. ಅದು ತನ್ನ ಸರ್ವಾಧಿಕಾರತ್ವದ ಜೊತೆಯಲ್ಲಿ ದುಷ್ಟ ಕೋಮುವಾದವನ್ನು ಜೋಡಿಸಿಕೊಳ್ಳುವುದರಿಂದ ಬಿಜೆಪಿ ಹೆಚ್ಚು ಅಪಾಯಕಾರಿ ಪ್ರಜಾಪ್ರಭುತ್ವಕ್ಕಾಗಿ ಹೋರಾಟ ನಡೆಯುತ್ತಿರುವ ಇಂದಿನ ಪರಿಸ್ಥಿತಿಯಿಂದಾಗಿ ಅದರ ಮಹತ್ವ ಹೆಚ್ಚಾಗಿವೆ. ❍




29.2.76

PRIVATE VIEW



ನಿರಾಶಾದಾಯಕ ಹವಾ ವರ್ತಮಾನದ ವರದಿಯನ್ನು ನಿಲ್ಲಿಸಿ ಎಂದು 'ಸೆನ್ಸಾರ್'ಗೆ ಹೇಳಬೇಕೆಂದಿದ್ದ. ಅದೃಷ್ಟವಶಾತ್ ಅಷ್ಟರಲ್ಲಿ ಮುಂಗಾರು ಮಳೆ ಆರಂಭವಾಗಿದೆ.



ವಂಗ್ಯಚಿತ್ರ ಕೃಪೆ: ಅಬುಅಬ್ರಾಹಂರವರು ತುರ್ತುಪರಿಸ್ಥಿತಿಯನ್ನು ವಿಡಂಬನೆ ಮಾಡಿ ರಚಿಸಿದ ವ್ಯಂಗ್ಯಚಿತ್ರಗಳ ಸಂಗ್ರಹದಿಂದ.

ಗಾಂಧೀಸ್ಮರಣೆ

ಖಾಲೀ ಗದ್ದಲದ ಈ ನಾಡಿನ ಉದ್ದಗಲಕ್ಕೂ
ಈಗ ಶಾಂತಿ ನೆಲೆಸಿದೆ.
ನರನಾಡಿಯೆಲ್ಲ ನಿಂತೇ ಹೋದಂತಾಗಿ
ನಾವೆಲ್ಲ ಯೋಗಿಗಳಾಗಿದ್ದೇವೆ.
ಹಾದಿ ಮಾತು. ಬೀದಿ ಭಾಷಣಗಳ ಸದ್ದಡಗಿ
ಕಿವಿ ತುಂಬ ಹುಲುಸಾಗಿ ಕೂದಲು
ಬೆಳೆಯುತ್ತಿದೆ.
ಅನಾಚಾರ ಅತ್ಯಾಚಾರ ಭ್ರಷ್ಟಾಚಾರಗಳ
ಬದಲು ಪತ್ರಿಕೆಗಳ ತುಂಬ ಶುದ್ಧ ಸಮಾಚಾರ
ತುಂಬಿದೆ.
ಎಲ್ಲಾ ಸಾಮಾನುಗಳ ಬೆಲೆ ಇಳಿದೂ ಇಳಿದೂ
ಈಗ ಕೈಗೆ ಸಿಗದಂತಾಗಿವೆ.
ಬಿಡಾಡಿ ನಾಯಿಗಳ
ನಿರ್ಬೀಜೀಕರಣವಾಗಿದೆ.
ಭಾರತದ ಜನಸಂಖ್ಯೆ ಇಳಿಯುತ್ತಿದೆ.
ನಾಳಿನ ನಾಗರಿಕರಾದ ಇಂದಿನ ಮಕ್ಕಳೆಲ್ಲ
ಸರಿಯಾಗಿ ಬಲೆಗೆ ಹೋಗಿ
'ಒಂದು ಎರಡು ಬಾಳೆಲೆ ಹರಡು'
ಕಲಿಯುತ್ತಿದ್ದಾರೆ.
ಹಸಗಂಡು ಮನೆಗೆ ಬಂದು
ಮಣ್ಣಿನ ವಾಸನೆಯ ತಾಜಾ ಊಟ
ಮಾಡುತ್ತಾರೆ.
ಜಾಣ ಬಾಬಾಗಳಿಗೆ ಹುಚ್ಚಗೌಡರ ಬೆನ್ನುಸಿಕ್ಕು
ಧರ್ಮೋದ್ಧಾರದ ಸವಾರಿ ಮುನ್ನಡೆದಿದೆ.
ಅಸ್ಪೃಶ್ಯ ದೇವರಿಗೆ ಹರಿಜನರ ದರ್ಶನವಾಗಿ
ಅವರ ಉದ್ಧಾರವು ಆಗುತ್ತಿದೆ.
ಸರಕಾರದ ಕೆಲಸ ದೇವರ ಕೆಲಸವಾಗಿ
ತುಪ್ಪದ ದೀಪ ಧಾಳಾಗಿ ಉರಿಯುತ್ತಿವೆ.
ವಿಶೇಷ ಪ್ರಾರ್ಥನೆಗಳಿಂದಾಗಿ ದೇಶದ ತುಂಬ
ಜಿಟಿ ಜಿಟಿ ಮಳೆ ಹಿಡಿದಿದೆ.
ನಮ್ಮ ತ್ರಿವರ್ಣ ಧ್ವಜ ತೊಯ್ದು ತಪ್ಪಡಿಯಾಗಿ
ಅಶೋಕ ಚಕ್ರ ಸ್ಥಿರವಾಗಿದೆ.
ಹೆದ್ದಾರಿಯ ಮೇಲೆ ಕೆಟ್ಟುನಿಂತ ಟ್ರಕ್ಕು ಕೂಡ
ನಾಡು ಮುನ್ನಡೆದಿದೆ- ಎಂಬ ಸಂದೇಶ
ಹೊತ್ತಿದೆ.
ರೇಡಿಯೋದ ಗಿಳಿವಿಂಡು, ಅದೋ,
ಒಕ್ಕೊರಲಿಂದ ಅದೇ ಹಾಡು ಹಾಡುತ್ತಿದೆ.
ಧನ್ಯತೆಯ ಈ ಕ್ಷಣದಿ, ಓ ಮುದ್ದುರಂಗ,
ಕಿವಿ ಮುಚ್ಚಿ, ಕಣ್ಣು ಮುಚ್ಚಿ,
ನೆನೆ ನೆನೆ ಗಾಂಧಿಯನು.
(ಯಾವ ಗಾಂಧಿ? ಅಂತ ತಿಳಿಯದೇ
ಪೆದ್ದಲಿಂಗ?)
ಬಾಯಿ ಮುಚ್ಚಿ,
ನೆನೆ ನೆನೆ ಗಾಂಧಿಯನು.

- ಚಂಪಾ

ಪ್ರೊ॥ ಚಂದ್ರಶೇಖರ ಪಾಟೀಲರ ಗಾಂಧಿಸ್ಮರಣೆ ಎಂಬ ಕವನ ತುರ್ತುಪರಿಸ್ಥಿತಿ ಕಾಲದಲ್ಲಿ ದೇಶದ, ರಾಜ್ಯದ ರಾಜಕೀಯ ವಾತಾವರಣವನ್ನು ಚೆನ್ನಾಗಿ ಪ್ರತಿನಿಧಿಸಿದೆ.

ದಲಿತರ ಬದುಕಿನ ಬವಣೆಗಳು

ಒಂದು ಅಧ್ಯಯನ


ಸಾಯಿನಾಥ್



"ಬಂಡವಾಳ ಶಾಹಿ ವ್ಯವಸ್ಥೆಗೆ ಇನ್ನೂರು ವರ್ಷಗಳ ಇತಿಹಾಸ ಮಾತ್ರ ಇದೆ. ಆದರೆ ಜಾತಿ ವ್ಯವಸ್ಥೆ ಸಾವಿರಾರು ವರ್ಷಗಳಷ್ಟು ಹಳೆಯದು. ಬಂಡವಾಳಶಾಹಿ ಬೆಳವಣಿಗೆಯು ಜಾತಿ ವ್ಯವಸ್ಥೆಯನ್ನು ಸಂಪೂರ್ಣ ಕಿತ್ತೊಗೆದು ಬೆಳೆಯಬೇಕಿತ್ತು ಆದರೆ ಭಾರತದಲ್ಲಿ ಬಂಡವಾಳಶಾಹಿಯೂ ಗ್ರಾಮೀಣ ಪ್ರದೇಶಗಳಲ್ಲಿ ಪ್ರಬಲ ಹಿಡಿತ ಹೊಂದಿರುವ ಭೂಮಾಲಿಕ ಮತ್ತು ಪಾಳೆಗಾರಿ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡಿದ್ದರಿಂದ, ಜಾತಿ ವ್ಯವಸ್ಥೆ ಮತ್ತಷ್ಟು ಭದ್ರವಾಗಿ ಬೇರೂರಲು ಕಾರಣವಾಯ್ತು. ಈ ಹಿನ್ನೆಲೆಯಲ್ಲಿಯೇ ನಮ್ಮ ದೇಶ ಸ್ವಾತಂತ್ರ್ಯಗಳಿಸಿ 53 ವರ್ಷಗಳಾದರೂ, ದಲಿತರ ಮೇಲಿನ ದೌರ್ಜನ್ಯ ದಬ್ಬಾಳಿಕೆ, ಅಸ್ಪೃಶ್ಯತೆ ಭಾರತದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲೂ ಜೀವಂತವಾಗಿ, ನೆಲಸಿ, ಕೆಳಜಾತಿಯ, ಜನರ ಬದುಕನ್ನು ಮತ್ತಷ್ಟು ಅಸಹನೀಯಗೊಳಿಸಿದೆ. ಜಾತಿ, ಅಸ್ಪೃಶ್ಯತೆ ವಿರುದ್ಧ ದೇಶದ ಹಲವಾರು ಭಾಗಗಳಲ್ಲಿ ತೀವ್ರತರವಾದ ಹೋರಾಟಗಳು ನಡೆದು ಸುಧಾರಣೆಗಳು ಕಂಡು ಬಂದಿದ್ದರೂ, ದಲಿತರ ಬದುಕಿನಲ್ಲಿ ಸಮಾನತೆ ಎನ್ನುವುದು ಇನ್ನೂ ಮಾರೀಚಿಕೆ ಯಾಗಿದೆ ಮಾತ್ರ.

'ಮಂಡಲ ಕಮಿಷನ್ ವರದಿ ಬಂದ ಸಂದರ್ಭದಲ್ಲಿ ನಾನು ಮುಂಬೈನ ಒಂದು ಪತ್ರಿಕೆಯಲ್ಲಿ ಉಪಸಂಪಾದಕನಾಗಿದ್ದೆ. ಮಂಡಲ ವರದಿಯನ್ನು ಹಿಂದುಳಿದ ಜನಾಂಗದವರಿಗೆ ಮೀಸಲಾತಿ ನೀಡುವ ಉದ್ದೇಶದಿಂದ ಜಾರಿಗೊಳಿಸಲಾಗಿತ್ತು. ಆದರೆ ಮುಂಬೈನಲ್ಲಿ ಗಲಭೆಗಳನ್ನು ದಿಗಿಲು ಬಿಳುವಂತೆ ಸೃಷ್ಟಿಸಿದ ಶಿವಸೇನಾ ಕಾರ್ಯಕರ್ತರ ಆಕ್ರೋಶವಿದ್ದದ್ದು ದಲಿತರ ಮೇಲೆ ಮಾತ್ರ. ಇದೇ ಸಂದರ್ಭಗಳನ್ನು ಬಳಸಿ ದಲಿತರ ಪ್ರತಿಕೃತಿಗಳನ್ನು ಸುಟ್ಟಿದ್ದು ಮಾತ್ರವಲ್ಲ ಅದರ ಕಾಲೋನಿಗಳಿಗೆ ಬೆಂಕಿ ಇಟ್ಟು ಸಹಸ್ರಾರು ದಲಿತ ಕುಟುಂಬಗಳು ನಿರಾಶ್ರಿತರಾಗುವಂತ ವ್ಯವಸ್ಥೆ ನಿರ್ಮಿಸಿದರು. ದಲಿತರ ಪ್ರತಿಕೃತಿಗಳನ್ನು ಸುಟ್ಟರು ಅವರ ಕಾಲೋನಿಗಳಿಗೆ ಬೆಂಕಿ ಇಟ್ಟರು.

ಇನ್ನು ಉತ್ತರ ಪ್ರದೇಶದಲ್ಲಿನ ದಲಿತ ಕುಟುಂಬಗಳು ಅನುಭವಿಸುತ್ತಿರುವ ಕಷ್ಟ ಮತ್ತೊಂದು ರೀತಿಯದು. ಘಾಜಿಪುರ ಜೈಲಿನ ಅಧಿಕಾರಿಗಳು 'ಮುಜಾಫರ್ ದಲಿತ ಸಮುದಾಯದವರನ್ನು ಕಾನೂನು ಬಾಹಿರವಾಗಿ ಬಂಧಿಸಿ ಜೈಲುಗಳನ್ನು ಸ್ವಚ್ಛಗೊಳಿಸಲು ಬಳಸುತ್ತಾರೆ, ಅಲ್ಲದೆ ಪ್ರಸಿದ್ಧ ಕೃಷ್ಣ ಜನ್ಮಾಷ್ಟಮಿ ಸಂದರ್ಭದಲ್ಲಿ ದಲಿತರ ಕೇರಿಗಳೆಲ್ಲಾ ಖಾಲಿ ಯಾಗುತ್ತವೆ. ಯಾಕೆಂದರೆ ಬಿಟ್ಟಿ ಚಾಕರಿಗಾಗಿ ಅವರನ್ನೆಲ್ಲಾ ಜಿಲ್ಲಾ ಆಡಳಿತದವರು ಕೊಂಡೊಯ್ಯುತ್ತಾರೆ. ಇದಕ್ಕೆ ಪ್ರತಿಭಟಿಸಿದರೆ ಅವರ ಮೇಲೆ ಸುಳ್ಳು ಕ್ರಿಮಿನಲ್ ಮೊಕದ್ದಮೆಗಳನ್ನು ಹಾಕಿ ಬಂಧಿಸಿಡುತ್ತಾರೆ'. ಉ.ಪ್ರದಲ್ಲಿ ಬಹುಜನ ಸಮಾಜ ಪಕ್ಷ ಅಧಿಕಾರಕ್ಕೆ ಬಂದ ನಂತರ ಈ ಪರಿಸ್ಥಿತಿ ಸ್ವಲ್ಪ ಬದಲಾವಣೆಯಾಗಿತ್ತು.



ನಮ್ಮ ದೇಶದಲ್ಲಿ ದಲಿತರ ಮೇಲಿನ ದೌರ್ಜನ್ಯ ತಡೆಯುವುದಕ್ಕಾಗಿ ರಚಿಸಲಾಗುತ್ತಿರುವ ಸಮಿತಿಗಳು ಮತ್ತು ಅವುಗಳ ಸ್ಥಿತಿ ಹೇಗಿದೆ ಗೊತ್ತೇ? ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಜನಾಂಗದವರ ಮೇಲೆ ನಡೆಯುವ ದೌರ್ಜನ್ಯ ಪರಿಶೀಲನೆಗಾಗಿ ರಚಿಸಲಾಗಿರುವ ರಾಷ್ಟ್ರೀಯ ಆಯೋಗಕ್ಕೆ ಸಂವಿಧಾನಿಕ ಮಾನ್ಯತೆ ಇದೆ. ಆದರೆ ಅದಕ್ಕೆ ದಂಡನಾ ಶಕ್ತಿ ಇಲ್ಲ, ಅದು ಪ್ರಕರಣಗಳ ತನಿಖೆ ನಡೆಸಿ ವರದಿಯನ್ನು ರಾಷ್ಟ್ರಾಧ್ಯಕ್ಷರಿಗೆ ಸಲ್ಲಿಸುತ್ತದೆ. ವಿಪರ್ಯಾಸವೆಂದರೆ ಹೀಗೆ ಸಲ್ಲಿಸಲಾಗುವ ವರದಿಗಳನ್ನು ಪಾರ್ಲಿಮೆಂಟ್‌ನಲ್ಲಿ ಚರ್ಚೆಗೆ ಮಂಡಿಸುತ್ತಿಲ್ಲ. ಅಥವಾ ಮಂಡಿಸಿದರೂ ಆ ಪ್ರಕರಣ ಎಷ್ಟೊ ಹಳೆಯದಾಗಿರುತ್ತದೆ. ಮತ್ತು ಆ ಪ್ರಕರಣದಲ್ಲಿ ಭಾಗಿಗಳಾಗಿರುವ ಆರೋಪಿಗಳು ನ್ಯಾಯಲಯದಿಂದ ಖುಲಾಸೆ ಹೊಂದಿರುತ್ತಾರೆ.

ಉದಾ:-1999 ರಲ್ಲಿ ಪಾರ್ಲಿಮೆಂಟ್ 11 ವರ್ಷಗಳ ಹಿಂದೆ ನಡೆದ ಕರ್ಮಚೀಡು ಪ್ರಕರಣ ಕುರಿತು ಚರ್ಚೆ ನಡೆಸಿತು. ಈ ಸಂದರ್ಭದಲ್ಲಿ ಆ ಪ್ರಕರಣದ ಎಲ್ಲಾ ಆರೋಪಿಗಳು ನಿರಪರಾಧಿಗಳಾಗಿ ಬಿಡುಗಡೆ ಹೊಂದಿದ್ದರು.

ದೌರ್ಜನ್ಯ ಪ್ರಕರಣಗಳು ಹೆಚ್ಚಳ

ಅಂಕಿ ಅಂಶದ ಪ್ರಕಾರ 1981-1990 ರ ನಡುವೆ ದಲಿತರ ಮೇಲಿನ ದೌರ್ಜನ್ಯ ಶೇ. 24 ರಷ್ಟು ಹೆಚ್ಚಾಗಿದೆ. 1991 ರ ನಂತರ ಇದು ಇನ್ನೂ ಎರಡರಷ್ಟಾಗಿರಬಹುದು. ಭಾರತದಲ್ಲಿ ದಲಿತರ ಜನಸಂಖ್ಯೆ ಪಾಕಿಸ್ತಾನದ ಒಟ್ಟು ಜನಸಂಖ್ಯೆಗಿಂತ ಜಾಸ್ತಿಯಾಗಿದೆ. 175 ಮಿಲಿಯನ್ ದಲಿತರು ಭಾರತದಲ್ಲಿದ್ದಾರೆ. ಜಗತ್ತಿನಲ್ಲಿ ಬಂಡವಾಳಶಾಹಿಗೆ -200 ವರ್ಷಗಳ ಇತಿಹಾಸವಿದ್ದರೆ ಈ ಜಾತಿ ವ್ಯವಸ್ಥೆ 2000 ವರ್ಷಗಳಷ್ಟು ಹಳೆಯದಾಗಿದೆ. ಶ್ರೀಲಂಕಾದಲ್ಲಿ ಪ್ಲಾಂಟೇಷನ್ ತಮಿಳರು, ಜಾಫ್ನ ತಮಿಳರಿಗಿಂತ ಹೆಚ್ಚು ತುಳಿತಕ್ಕೊಳಗಾದವರು. ಅವರೆಲ್ಲಾ ದಲಿತರೆ, ಜಾಟ್‌ಸಿಖ್ಖರು, ದಲಿತ ಸಿಖ್ಖರನ್ನು ಕೆನಡಾ, ಮಾರಿಷಸ್, ದ. ಆಫ್ರಿಕಾ ದೇಶಗಳಲ್ಲಿಯೂ ತಮ್ಮವರೆಂದು ಸ್ವೀಕರಿಸಲು ಸಿದ್ಧರಿಲ್ಲ.

ನೀರಾವರಿ ಸೌಲಭ್ಯಗಳಿಂದ ವಂಚಿತರು

ಭಾರತದಲ್ಲಿ ದಲಿತರು ಶೇ 1/6 ಪ್ರಮಾಣದಲ್ಲಿದ್ದಾರೆ. ಆದರೆ ಅವರು ಹೊಂದಿರುವ ನೀರಾವರಿ ಪ್ರದೇಶ, ಭೂಮಿ ಶೇ.2 ಕ್ಕಿಂತಲೂ ಕಡಿಮೆ. ನೀರಾವರಿ ವ್ಯವಸ್ಥೆಯೂ ಬಹುತೇಕವಾಗಿ ಜಾತಿ ವ್ಯವಸ್ಥೆಗೆ ತಕ್ಕಂತೆ ರಚನೆಯಾಗಿದೆ. ದಲಿತರ ಓಣಿಗಳು ಯಾವಾಗಲೂ ಊರಿನ ದಕ್ಷಿಣ ಭಾಗದಲ್ಲಿರುತ್ತವೆ. ಯಾಕೆಂದರೆ ಧಾರ್ಮಿಕ ನಂಬಿಕೆ ಪ್ರಕಾರಅಭಾಗದಲ್ಲಿಯಮ ವಾಸಿಸುತ್ತಾನಂತೆ. ಸಾಮಾನ್ಯವಾಗಿ ನದಿಗಳು ಹರಿಯುವುದು ಉತ್ತರದಿಂದ ದಕ್ಷಿಣದ ಕಡೆಗೆ. ದಲಿತರು ಬಳಸುವುದು ಯಾವಾಗಲೂ ಕೆಳಗಿನ ನೀರನ್ನೆ. ಆದರೆ ರಾಜಸ್ಥಾನದ ಪರಿಸ್ಥಿತಿ ಬೇರೆ. ಮೇಲ್ವಾರ್ಗದವರೆಲ್ಲರೂ ಮೇಲ್ಭಾಗದಲ್ಲಿ ವಾಸಿಸುತ್ತಾರೆ. ಯಾಕೆಂದರೆ ತಂಪಾದ ವಾತವರಣ ಮತ್ತು ಸುರಕ್ಷತೆ ಇರುವ ಕಾರಣದಿಂದ. ಆದರೆ ದಲಿತರು ವಾಸಿಸುವ ಕೆಳ ಪ್ರದೇಶಗಳಲ್ಲಿ ರಜಪೂತರು ವ್ಯವಸಾಯ ಮಾಡುತ್ತಾರೆ. ಯಾಕೆಂದರೆ ಭೂಮಿ ಫಲವತ್ತತೆ ಹೊಂದಿರುತ್ತದೆ.

ಅಸ್ಪೃಷ್ಯತೆ ಕೇವಲ ಸಾಮಾಜಿಕವಾಗಿ ಮಾತ್ರವಲ್ಲ ಆರ್ಥಿಕವಾಗಿಯೂ ಇದೆ

ಉತ್ತರ ಭಾರತದಲ್ಲಿ ಆಕಳು ಕಾಯುವುದು ಅಲ್ಲಿನ ದಲಿತ ಮಹಿಳೆಯರ ದಿನನಿತ್ಯದ ಕೆಲಸ. ಆದರೆ ಈ ದುಡಿಮೆ ದೇಶದ ಆದಾಯದ ಭಾಗವಾಗಿಲ್ಲ. ಉಚಿತಸೇವೆ ಹೆಸರಿನಲ್ಲಿ ದಲಿತರನ್ನು ದುಡಿಸಿಕೊಳ್ಳಲಾಗುತ್ತಿದೆ. ಇದ್ಯಾವುದು ಕೂಡ ಲೆಕ್ಕಕ್ಕಿಲ್ಲ. ದಲಿತರನ್ನ ಮತ್ತು ಹಿಂದುಳಿದವರನ್ನು ಪ್ರತ್ಯೇಕಿಸಿಡಲು ನಡೆಸಿದ ತಂತ್ರ ಇದಾಗಿದೆ. ಇಂದು 170 ಮಿಲಿಯನ್ ತುಳಿತಕ್ಕೊಳಗಾದ ಜನರಿಗೆ ಸ್ವಾತಂತ್ರ್ಯವನ್ನು ನಿರಾಕರಿಸಲಾಗಿದೆ. ಅದ್ದರಿಂದ ಅಸ್ಪೃಶ್ಯತೆ ನಾಶಪಡಿಸದೇ ಜಾತಿ ವ್ಯವಸ್ಥೆ ಮುರಿಯಲು ಸಾಧ್ಯವಿಲ್ಲ. ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು

ಭಾರತದಲ್ಲಿ ಶೇ 75% ರಷ್ಟು ದಲಿತರು ಕೃಷಿ ಮೂಲಾಧಾರ ಹೊಂದಿದ್ದಾರೆ. ಅವರೆಲ್ಲರೂ ಭೂ ಕಾರ್ಮಿಕರೆ, ಅದರಲ್ಲಿ ಶೇ. 85 ರಷ್ಟು ಬಡವರು ಭಾರತದಲ್ಲಿ ಭೂ ಹೀನ ಕೃಷಿಕರು. ಗ್ರಾಮೀಣ ಕಸುಬುದಾರರು ಶೇ 7.5 ರಷ್ಟಿದ್ದರೆ, ಶೇ 7.5 ರಷ್ಟು ನಗರದವರು. ಇವರೆಲ್ಲರೂ ಬಹುತೇಕ 9 ರಾಜ್ಯಗಳಲ್ಲಿ ಕೇಂದ್ರೀಕೃತಗೊಂಡಿದ್ದಾರೆ. ಕರ್ನಾಟಕದಲ್ಲಿ ಹೈದ್ರಾಬಾದ್ ಕರ್ನಾಟಕ, ಮಧ್ಯಪ್ರದೇಶದಲ್ಲಿ ಬಂದೇಲ್ ಖಂಡ್, ಒರಿಸ್ಸಾದ ಪಶ್ಚಿಮ ಭಾಗಗಳಲ್ಲಿದ್ದಾರೆ ಇವರಲ್ಲಿ ಆದಿವಾಸಿಗಳು ದಲಿತರು ಮತ್ತು ಹಿಂದುಳಿದವರ ಪ್ರಮಾಣವೇ ಜಾಸ್ತಿ.

ವರದಿ
ಕೆ.ಮಹಾಂತೇಶ್ ಮತ್ತು ವಿ.ಜಿ.ಕೆ.ನಾಯರ್

ಮೀಸಲಾತಿಬೇಡ 10 ಎಕರೆ ಭೂಮಿ ಕೊಡಿ

ದಲಿತರೆಲ್ಲರೂ ಬಹುತೇಕ ಭೂಹೀನ ಕೃಷಿಕಾರ್ಮಿಕರೇ ಆಗಿರುವುದರಿಂದ ಈ ಪ್ರಶ್ನೆ ಮೇಲೆ ಹಲವಾರು ಬಾರಿ ಚರ್ಚೆ ನಡೆದಿದೆ. ಸಂವಿಧಾನಿಕ ಮಂಡಳಿ ಸದಸ್ಯ ಎಸ್. ನಾಗಪ್ಪ ಒಂದು ಚರ್ಚೆಯಲ್ಲಿ ಮಾತನಾಡಿದ್ದು ಹೀಗೆ "ದಲಿತರೆಲ್ಲರೂ ಮೀಸಲಾತಿಯನ್ನು ಬಿಡಲು ಸಿದ್ಧರಿದ್ದೇವೆ. ಅದಕ್ಕೆ ಬದಲಾಗಿ, ನಮಗೆ 10 ಎಕರೆ ಕೃಷಿಯೋಗ್ಯಭೂಮಿ ನೀಡಿ. ಜೊತೆಗೆ ಎಲ್ಲಾ ದಲಿತ ಮಕ್ಕಳಿಗೂ ವಿಶ್ವವಿದ್ಯಾನಿಲಯ ಮಟ್ಟದವರೆಗೂ ಉಚಿತ ಶಿಕ್ಷಣ ನೀಡಿ" ಎಂಬ ಬೇಡಿಕೆಯನ್ನು ಮಂಡಿಸಿದರು. ದೇಶದಲ್ಲಿ ಲಕ್ಷಾಂತರ ಕೃಷಿ ಕಾರ್ಮಿಕರು ದಲಿತರೆ, 10-12 ಘಂಟೆಗಳ ಕಾಲ ಕೇವಲ 10-15 ರೂಪಾಯಿಗೆ ಈಗಲೂ ದುಡಿಯುತ್ತಿದ್ದಾರೆ. ಅದರಲ್ಲಿ 1 ಕೆ.ಜಿ. ಅಕ್ಕಿ ಕೊಳ್ಳಲು ಸಾಧ್ಯವಾಗುವುದಿಲ್ಲ. ಅಲ್ಲದೆ ಕೃಷಿ ಕೂಲಿಕಾರರ ಕೂಲಿಯನ್ನು ಕಳೆದ ಹಲವಾರು ವರ್ಷಗಳಿಂದಲೂ ಪರಿಷ್ಕರಿಸಿಲ್ಲ. ಸ್ವಾತಂತ್ರ್ಯ ಬಂದು 53 ವರ್ಷಗಳಾದರೂ ಸರ್ಕಾರದ ವರದಿಯಂತೆ ಈಗಲೂ ದಲಿತರು ಹಳ್ಳಿಗಳಲ್ಲಿ ಪ್ರತ್ಯೇಕವಾಗಿ ಜೀವಿಸುತ್ತಿದ್ದಾರೆ. 21ನೇ ಶತಮಾನದಲ್ಲಿಯೂ ಸರ್ಕಾರಗಳು ಜಾರಿಗೊಳಿಸುತ್ತಿರುವ 'ಇಂದಿರಾ ಅವಾಸ್' ಯೋಜನೆಗಳು ಕೂಡ ಜಾತಿ ವ್ಯವಸ್ಥೆಯನ್ನು ಶಾಶ್ವತಗೊಳಿಸುತ್ತಿವೆ.

ಗ್ರಾಮೀಣ ಭಾರತದಲ್ಲಿ ದಲಿತರಿಗೆ ಹೆಣ ಊಳಲು, ಸುಡಲು ಜಾಗಸಿಗದಂತಹ ಅಮಾನವೀಯ ಪರಿಸ್ಥಿತಿಯ ಮದ್ಯೆ ದಲಿತ ಕುಟುಂಬಗಳು ಬದುಕುತ್ತಿವೆ. ಗುಲ್ಬರ್ಗಾ ಜಿಲ್ಲೆಯ ಮಹಾಗಾಂವ ಹಳ್ಳಿಯಲ್ಲಿ ಬಂಡಿಯಪ್ಪ ಎಂಬುವನ ಹೆಣವನ್ನು ಸುಡುತ್ತಿದ್ದಾಗ ಅರ್ಧಕ್ಕೆ ಎಳೆದು ಹಾಕಿದಂತಹ ಘಟನೆಗಳು.. ದೇಶದಗಲಕ್ಕೂ ನಡೆದಿವೆ. ಮಹಾಗಾಂವ್‌ನಲ್ಲಿ ಜನವಾದಿ ಮಹಿಳಾ ಸಂಘಟನೆಯವರು ನಡೆಸಿದ ಹೋರಾಟದ ಫಲವಾಗಿ 2 ಎಕರೆ ಭೂಮಿ ಸ್ಮಶಾನಕ್ಕೆ ದೊರೆತಿದೆ.

ಅಮಾನವೀಯ.... ಮುಖಗಳು

ಹಲವಾರು ರಾಜ್ಯಗಳ ಗ್ರಾಮೀಣ ಪ್ರದೇಶಗಳಲ್ಲಿ ಇವತ್ತು ಮೇಲ್ಜಾತಿಯವರ ಓಣಿಯಲ್ಲಿ ದಲಿತರು ಓಡಾಡುವಂತಿಲ್ಲ. ಉತ್ತರ ಪ್ರದೇಶ ಥೆಲಾರ್ ಕಾಲೋನಿಗೆ ದಲಿತ ಪೋಸ್ಟ್‌ಮ್ಯಾನ್ ಬರಬೇಕಾದರೆ ಸೈಕಲ್ ಇಳಿದು ಬರಬೇಕು. ದಲಿತ ಹುಡುಗನೊಬ್ಬ ಬಿಳಿ ಸಮವಸ್ತ್ರ ಧರಿಸಿ ಸೈಕಲ್ ಏರಿ ಹೋಗಿದ್ದಕ್ಕಾಗಿ ತಮಿಳು ನಾಡಿನ ಕೆಲವು ಹಳ್ಳಿಗಳಲ್ಲಿ ಗಲಭೆಗಳಾದವು. ರಾಜಸ್ಥಾನದಲ್ಲಿ ದಲಿತರು ಕುದುರೆ ಸವಾರಿ ಮಾಡುವುದನ್ನು ಠಾಕೋರರು ಎಂದಿಗೂ ಸಹಿಸುವುದಿಲ್ಲ. ಅಲ್ಲಿ ದಲಿತರು ಕುದುರೆ ಸವಾರಿ ಮಾಡಲು ಪ್ರೋತ್ಸಾಹಿಸಿದರೆಂಬ ಕಾರಣಕ್ಕಾಗಿ ಅಲ್ಲಿನ ಸಿಪಿಐ(ಎಂ) ಶಾಸಕರು ಮೇಲ್ವರ್ಗದವರಿಂದ ಕಲ್ಲೇಟು ತಿನ್ನಬೇಕಾಯಿತು. ಭೂಮಾಲಿಕರ ವಿರುದ್ಧ ತೀವ್ರ ರೀತಿಯ ಹೋರಾಟ ನಡೆದು 10 ಲಕ್ಷ ಎಕರೆ ಭೂಮಿ ವಿತರಣೆಯಾಗಿರುವ ಆಂದ್ರದ ತೆಲಂಗಾಣ ಪ್ರದೇಶದಲ್ಲಿ ಕೂಡ ಈ ಪರಿಸ್ಥಿತಿ ಮುಂದುವರೆದಿದೆ.

ದಲಿತರು ಮಾತ್ರ ಅಸ್ಪೃಶ್ಯರು ಅವರ ಹಣವಲ್ಲ!

ಅಸ್ಪೃಶ್ಯತೆ ಆಚರಣೆಯಿರುವುದು ದಲಿತರ ಮೇಲೆ ಮಾತ್ರ ಅವರು ನೀಡುವ ರೂಪಾಯಿಗೆ ಅಲ್ಲ! ಈಗಲೂ ಕರ್ನಾಟಕ ಮತ್ತು ಆಂಧ್ರದ ನಿಜಾಮ್ ಪ್ರಾಂತ್ಯಗಳ ಹೋಟೆಲ್‌ಗಳಲ್ಲಿ ದಲಿತರಿಗೆ ಪ್ರತ್ಯೇಕ ಚಹಾ ಗ್ಲಾಸುಗಳನ್ನು ಇರಿಸುತ್ತಿದ್ದಾರೆ. ಇದರ ವಿರುದ್ಧ ಕೃಷಿಕೂಲಿಕಾರರ ಸಂಘವು ಮಹಬೂಬ್ ನಗರದಲ್ಲಿ ಜಂಟಿ ಹೋರಾಟಗಳು ನಡೆಸಿ 2000 ಗ್ಲಾಸುಗಳನ್ನು ಹೊಡೆದು ಹಾಕಿತು. ಹೋರಾಟ ತೀವ್ರಗೊಂಡದ್ದರಿಂದ ಆಂದ್ರ ವಿಧಾನಸಭೆ ಅಸ್ಪೃಶತೆ ಬಗ್ಗೆ ಚರ್ಚೆ ನಡೆಸಿತು. ಮಾತ್ರವಲ್ಲ ಇದರ ಬಗ್ಗೆ ಜಸ್ಟಿಸ್ ಪೊನ್ನಯ್ಯ ಸಮಿತಿಯನ್ನು ರಚಿಸಿ ತನಿಖೆಗೆ ಆದೇಶಿಸಲು ಸಾದ್ಯವಾಯಿತು.

ಕಂಬಾಲಪಲ್ಲಿ .....ಘಟನೆ

ಕೋಲಾರದ ಕಂಬಾಲಪಲ್ಲಿ ದಲಿತ ಯುವಕ ಶ್ರೀರಾಮಪ್ಪ ಕೊಲೆಯಾಗಿದಕ್ಕೆ ಕೆಲವು ಮುಖ್ಯ ಕಾರಣಗಳೂ ಇವೆ. ಅವನು ಆ ಊರಿನ ಪ್ರಥಮ ಪಧವೀಧರ ಜೊತೆಗೆ ಪ್ರಥಮ ಸರ್ಕಾರಿ ನೌಕರಿ ಪಡೆದವನು. ಇದಲ್ಲದೆ ಆ ಯುವಕ ತನ್ನ ಹೊಲಕ್ಕೆ ಸರ್ಕಾರದ ಸಹಾಯಧನದಿಂದ ಕೊಳವೆ ಭಾವಿ ತೊಡಿಸಿದ್ದು, ತನ್ನ ದಲಿತ ಕೇರಿಗೆ 4 ಕೊಳವೆ

• ಪುಟ 11 ಕ್ಕೆ

**ಭಾರತದ ಪ್ರತಿಕೋದ್ಯಮದಲ್ಲಿ ಸಾಮಾಜಿಕ ಕಾಳಜಿಯ ವರದಿ ಹಾಗೂ ವಿಶ್ಲೇಷಣೆಗಾಗಿ ಬದ್ಧರಾದವರು ಸಾಯಿನಾಥ್‌ರವರು.
ಬರ ಪ್ರದೇಶಗಳ ಕರುಣಾಜನಕ ಪರಿಸ್ಥಿತಿಯನ್ನು ಕುರಿತ ಅವರ ವರದಿಗಳು ಸಾಮಾಜಿಕ ಬದ್ಧತೆಯ ವರದಿಗಳಿಗೊಂದು ಮಾದರಿಯಾಗಿದೆ. ಹಾಗೂ ಪ್ರಶಸ್ತಿಗಳಿಗೆ ಪಾತ್ರವಾಗಿದೆ.
ಈಗ ದೇಶಾದ್ಯಂತ ದಲಿತರ ಬದುಕಿನ ಹಲವು ಬವಣೆಗಳಿಗೆ ದನಿ ನೀಡುತ್ತಿರುವ ಅವರ ವರದಿಗಳು 'ದಿ ಹಿಂದೂ' ಪತ್ರಿಕೆ ಮಾಲಿಕೆಯಲ್ಲಿ ಪ್ರಕಟವಾಗುತ್ತಿವೆ.
ಲೇಖನ ಮಾಲೆಗಾಗಿ ಕರ್ನಾಟಕದ ದಲಿತರ ಪರಿಸ್ಥಿತಿಯ ಅಧ್ಯಯನದ ಬಗ್ಗೆ ಒಂದು ಉಪನ್ಯಾಸದ ವರದಿ**

ವಾಸ್ತವದ ಸ್ಪರ್ಶದಿಂದ ದೀಪ್ತವಾದ ಕವಿತೆಗಳು

"ನಮ್ಮ ಕಾಲದ ಕಲೆ ಎಂತಹದು? ಅದು, ಸಮಾಜದ ಕುರಿತಾದ ತೀರ್ಪು. ಪೃಥಕ್ಕರಣ; ಪರಿಣಾಮವಾಗಿ ಸಮಾಜದ ವಿಮರ್ಶೆ. ಈಗ ವಿಚಾರದ ಅಂಶ ಕಲೆಯ ಅಂಶದೊಡನೆ ಬೆರೆತಿದೆ"(ಉಚ್ಚಾರಣೆ ಪ್ರತಿಧ್ವನಿ, ನಿರಂಜನ) ಎರಡುನೂರು ವರ್ಷಗಳ ಹಿಂದೆ ಜೀವಿಸಿದ್ದ ರಶಿಯಾದ ಚಿಂತಕ ಬೆಲಿನ್ಸ್ಕಿ ಕಾವ್ಯ, ಕಲೆಗಳ ಕುರಿತು ಹೇಳಿದ ಮಾತಿದು. ಡಾ. ಆರ್.ಕೆ.ಮಣಿಪಾಲ ಈ ಪ್ರಕಾರ ವಿಚಾರವಂತರು ಮತ್ತು ಕವಿಗಳು.

'ಕವಿಮಾತು' ಸಂಕಲನದಲ್ಲಿ ಮೂರು ಭಾಗಗಳಿವೆ. ಒಂದನೆಯದು ಸಂಪೂರ್ಣವಾಗಿ ಸ್ವತಂತ್ರ ರಚನೆಯಾದರೆ ಎರಡನೆಯದು ವ್ಯಕ್ತಿ ಅಥವಾ ಸಂದರ್ಭದಿಂದ ಪ್ರೇರಣೆಗೊಂಡದ್ದು. ಮೂರನೆಯದು ಅನುವಾದ, ಭಾವಾನುವಾದಗಳು. ಈ ಮೂರು ಭಾಗ ತನ್ನ ವಿಶಿಷ್ಟತೆಯಿಂದ ಮನಸೆಳೆಯುತ್ತದೆ.

ಮಣಿಪಾಲರ ಎಲ್ಲ ಕವನಗಳಲ್ಲಿಯೂ ವಾಸ್ತವದ ಸ್ಪರ್ಶ ಇಲ್ಲದೇ ಇಲ್ಲ. ವಾಸ್ತವ ಎನ್ನುವುದು ಇಲ್ಲಿ ಎರಡು ಹಂತದಲ್ಲಿ ಕೆಲಸ ಮಾಡುತ್ತದೆ. ಒಂದೆಂದರೆ ಅದು ಸಾಮಾಜಿಕ ವಾಸ್ತವ(ಬಹಿರಂಗ) ಎರಡನೆಯದು ಕ್ರಿಯಾತ್ಮಕ ವಾಸ್ತವ, ಚಾರಿತ್ರಿಕ ನಡೆ(ಅಂತರಂಗ ವಾಸ್ತವ) ಕವಿತೆಗಳಲ್ಲಿ ತಂತ್ರ ಕೌಶಲ್ಯವನ್ನೇ ಮನೋರಂಜನೆಯನ್ನಾಗಿ ಮಾಡಿಕೊಂಡವರಿಗೆ ಅಷ್ಟೊಂದು ಆಹಾರ ಸಿಗದು ಇಲ್ಲಿ. ಆದರೆ ಕಲೆಯ ಜೊತೆ ವಿಚಾರದ ಅಂಶವೂ ಮುಖ್ಯವಾಗಿ, ಅದು ರಚನಾ ಸಂಕೀರ್ಣತೆಗಿಂತ ವೈಚಾರಿಕ ಸಂಕೀರ್ಣತೆಗೆ ತೆರೆದುಕೊಳ್ಳುವುದು ಇಲ್ಲಿಯ ವೈಶಿಷ್ಟ್ಯ. ಈ ಹದಕ್ಕೆ 'ವಿಶ್ವಸುಂದರಿಯೂ ಟೇಪೂ' ಕವನ ನೋಡಬಹುದು. ವಿಶ್ವ ಸುಂದರಿ ಸ್ಪರ್ಧೆಯ, ಗೆಲುವಿಗಾಗಿ ಎಲ್ಲೆಲ್ಲೂ ಸಂತೋಷ, ಅಭಿಮಾನ ಕಟ್ಟೊಡೆದು ಉಕ್ಕುತ್ತಿರುವಾಗ ಮಣಿಪಾಲ 'ವಿಶ್ವಸುಂದರಿ ಸ್ಪರ್ಧೆ' ಹೇಗೆ ವಾಣಿಜ್ಯ ವ್ಯವಸ್ಥೆಯ ಜಾಹೀರಾತು ಆಗುತ್ತದೆಂಬುದನ್ನು ಚಿತ್ರಿಸುತ್ತಾರೆ. ಹಾಗೆ ಕವನ ಕೊನೆಗೆ ಕೇಳುವ ಪ್ರಶ್ನೆ ವೈಚಾರಿಕ-ಸಿಡಿಮದ್ದಿಗೆ ಸಾಕ್ಷಿಯಾಗಿದೆ.

ಇಲ್ಲಿ ಬಿಗಿದಿದ್ದು ಬರಿಯ ಟೇಪೇ?
ಬಳಸಿದ್ದು ಬರಿಯ ಸೊಂಟವೇ?
ಟೇಪಿನುದ್ದ ಬರಿಯ ಇಂಚೇ?
ಸುತ್ತಿಕೊಂಡು ಬತ್ತಿಹೋದದ್ದು
ಬರಿಯ ಸುಶ್ಮಿತ್ರಳೇ?
ಬರಿಯ ಐಶ್ವರ್ಯಳೇ?

ಕೋಮುವಾದದ ಹಿಂದೆ ಇರುವ ಅಚಾರಿತ್ರಿಕತೆ(ರಾಮನ ಹೆಸರಿನಲ್ಲಿ) 'ಕವಿಮಾತು' ವಿನಲ್ಲಿ ಮೈತಳೆದರೆ 'ಕಡಲಾಯಿತು' 'ಹೆಣ್ಣು ಕಣ್ಣೀರು'ನಲ್ಲಿ ಹೆಣ್ಣಿನ ಸಂಕಷ್ಟ ವಾಸ್ತವವನ್ನು ಪುರಾಣವನ್ನಾಗಿ ಮಾಡುತ್ತದೆ. ಅಮೆರಿಕೆಯ ಹೆಸರನ್ನು ಎಲ್ಲಿಯೂ ಹೇಳದಿದ್ದರೂ 'ಮಾವ' ಅದನ್ನು ವ್ಯಂಗ್ಯವಾಗಿ ಚಿತ್ರಿಸುತ್ತದೆ.

'ಬಿದ್ದ ಶಿಖರ' ಕಾರಂತರ ಬಗ್ಗೆ ಬರೆದದ್ದು. ಇದು ಕೇವಲ ವ್ಯಕ್ತಿ ಚಿತ್ರಣವಾಗದೇ ಕಾವ್ಯಕ್ಕೇರುವ ಸತ್ವ ಪ್ರಾಪ್ತವಾದದ್ದು

'ಕಣ್ಣಿದ್ದೂ
ಕಾಣರಿವರು
ಆದರೆ
ಚೋಮನ
ಮೊಮ್ಮಕ್ಕಳಾದರು
ಕೇಳಿಯೂರು
ಕೊನೆಯಿಲ್ಲದ
ದುಡಿಯಸ್ವಾದ"

ಇಂತಹ ಸ್ಟಾಂಝಾಗಳಿಂದ.

ಎರಡನೇ ಭಾಗದಲ್ಲಿ ಅನೇಕ ಚೀನಿ ಜಾನಪದ ಕತೆಗಳಿಂದ ಪ್ರೇರಣೆಗೊಂಡ ಕವಿತೆಗಳಿವೆ. ರಚನೆ ಸರಳವಾಗಿದ್ದಂತೆ ತೋರಿದರೂ ಧ್ವನಿಪೂರ್ಣವಾಗಿರುತ್ತದೆ. ಕವಿತೆಗಳ ಸಾರಾಂಶ ಹೇಳುವುದು ಅರ್ಥವಿಲ್ಲದ್ದು. ಆದರೆ ಸ್ಥಳಾವಕಾಶದ ಕೊರತೆಯಿಂದ ಎಲ್ಲ ಹೇಳಲಾಗುವುದಿಲ್ಲ. ಮಾದರಿಗಾಗಿ 'ಮೂಷಿಕ ಯಜ್ಞ'ವನ್ನು ಗಮನಿಸಬಹುದು. ಮೂಷಿಕವನ್ನು ಹಿಡಿಯುವ ಕುರಿತಾಗಿ ದೊಡ್ಡ ಗ್ರಂಥ ಬರುತ್ತದೆ. ಆದರೆ ಇಲಿಗಳೆಲ್ಲವು ಸೇರಿ ಅದನ್ನು ಕಚ್ಚಿ ಹಾಕುತ್ತವೆ. ರಕ್ಷಾಪುಟ ಮಾತ್ರ ಇರುತ್ತದೆ. ಅದರ ಮೇಲೆ ಕುಳಿತ ಮೂಷಿಕ ರಾಜ ಹೀಗೆ ಘೋಷಿಸುತ್ತದೆ-

"ಈ ನರಮನುಷ್ಯರು
ಮೊದಲು ಏನಾದರೂ
ಮಾಡಿ ತೋರಿಸಲಿ
ಮಾಡದೆ ಬರೆದರೆ
ಗತಿಯೇನೆಂದು
ತಿಳಿಯುವಂತಾಗಲಿ

ಸರಳವಾಗಿ ತೋರುವ ಈ ರಚನೆ 'ಮಾಡಿಯೇ ಬರೆಯಬೇಕು' ಎಂಬುದನ್ನು ಮಾತ್ರ ಹೇಳುತ್ತಿಲ್ಲ, ಅದರೊಟ್ಟಿಗೆ ಸದ್ಯದ ಚರಿತ್ರೆಯ ಅವಶ್ಯಕತೆಯನ್ನು ಕೂಡ ಹೇಳುತ್ತದೆ.

ಅನುವಾದ ಕವಿತೆಗಳಲ್ಲಿ ಬಂಗಾಳಿ ಕವಿ ಸುಭಾಷ ಮುಖ್ಯೋಪಾಧ್ಯಾಯ ಹ್ಯಾನ್‌ಟೊಂಗ್, ಕಿವುಝಿ ಮೊದಲಾದವರ ಕವಿತೆಗಳಿವೆ. 'ಪ್ರೊಫೆಸರುಗಳು', ನಗ್ನ ಚಕ್ರವರ್ತಿ, ನಾನೆದ್ದು ಬರುತ್ತೇನೆ, ಅಪ್ಪ ಯಾಕೆ ಹಿಂದಿರುಗಲಿಲ್ಲ, ಬಿಲ್ಗಾರರೂ ತೋಳವೂ, ಪುರಾಣ ಶ್ರವಣ ಆದರೆ ಪ್ರಹರಿ ಮುಂತಾದ ಗಮನೀಯ ಕವನಗಳಿವೆ.

ಮಣಿಪಾಲರ ರಚನೆಯ ಇನ್ನೊಂದು ಬಗೆ ಚುಟುಕ ಕವಿತೆಯದು. ಬಿಗಿಯುವ ಬಂಧದಲ್ಲಿ ವೈಚಾರಿಕ ಸ್ಫೋಟಕ ಗುಣವುಳ್ಳಂಥ ರಚನೆಗಳವು

ಬಹುವಚನ
ವ್ಯಾಕರಣದ
ಪರಿಭಾಷೆ ಅಷ್ಟೇ ಅಲ್ಲ
ಸಮಾಜಶಾಸ್ತ್ರದ್ದು
ಕೂಡ.

ಈ ಚಿಕ್ಕ ರಚನೆ ಬ್ರಹ್ಮಾಂಡದಷ್ಟು ಶಕ್ತಿಯನ್ನು ಹೊಂದಿರುವಂತಹದು.

ಒಮ್ಮೊಮ್ಮೆ ಅರ್ಥದ ಅಸ್ಪಷ್ಟತೆ ತಲೆ ಹಾಕುವುದುಂಟು. ಆದರೆ ಇಂಥವು ಬಹಳಿಲ್ಲ.

ಚಿಲ್ಲರೆ ಪದ್ಯಗಳು, ಅದರಲ್ಲಿಂದ ಒಂದು
ಓಡಿ ಗೆಳೆಯರೆ
ಮುಳುಗುವ ಸೂರ್ಯನ
ತುಸುವೇ ಎತ್ತಿ ಹಿಡಿಯಿರಿ
ಹೊಲೆಯ ಹುಡುಗನ್ನಿನ್ನು
ಓದು ಮುಗಿಸಿಲ್ಲ........

ಎಂದು ಸಾಗುವ ಕವಿತೆ "ಹೋಗಿ ತುಸು ಹೊತ್ತಿರಿ ಸೂರ್ಯನ ಹೆಣ" ಎಂದು ಕೊನೆಗೊಳ್ಳುತ್ತದೆ. ಸಾಯಂಕಾಲದ ಸೂರ್ಯನನ್ನು ಎತ್ತಿ ಹಿಡಿಯಲು ಹೇಳುವ ಕವಿ ಸೂರ್ಯನ ಹೆಣವನ್ನು ಎತ್ತಿ ಹಿಡಿ ಅನ್ನುವುದರ ಔಚಿತ್ಯವೇನು? ಅರ್ಥವನ್ನು ಶೈಲಿಯಲ್ಲಿ (ತಂತ್ರವನ್ನೊಳಗೊಂಡು) ಮುಚ್ಚಿಹಾಕುವ ಕವಿಯಲ್ಲ...... ರಚನೆಯಲ್ಲಿ ನಿರಾಡಂಬರತ್ವ-ಜನರ ಹಟ ಅರ್ಥಗಾಂಭೀರ್ಯ, ವ್ಯಂಗ್ಯ-ವಿಡಂಬನೆಯಿಂದಲೇ ಗಮನ ಸೆಳೆಯುವುದು ಇಲ್ಲಿಯ ವಿಶಿಷ್ಟತೆ.

- ಡಾ. ಆರ್.ವಿ.ಭಂಡಾರಿ

'ಕವಿಮಾತು'
(ಕವನ ಸಂಕಲನ)
ಲೇ: ಡಾ. ಆರ್.ಕೆ.ಮಣಿಪಾಲ
ಮಾರ್ಗದರ್ಶಿ ಪ್ರಕಾಶನ, ಮಂಗಳೂರು.
ವರ್ಷ: 1999, ಪು 103,
ಬೆಲೆ ರೂ 35/-

ದಲಿತರ ಬದುಕಿನ ಬವಣೆಗಳು.....

ಪುಟ 10 ರಿಂದ

ಬಾವಿಗಳನ್ನು ಓಡಾಡಿ ಕೊರೆಸಿದ. ಇದು ಮೇಲ್ವರ್ಗದವರ ಅಸಹನೆಗೆ ಕಾರಣವಾಯ್ತು. ಎಲ್ಲಿ ದಲಿತರು ತಮ್ಮ ಜೀವನವನ್ನು ಉತ್ತಮ ಪಡಿಸಿಕೊಳ್ಳುತ್ತಾರೋ ಅಲ್ಲಿ ಅಸಮಧಾನದ ಕಿಡಿ ಹಾರುತ್ತಿರುವುದನ್ನು ದೇಶದ ವಿವಿದೆಡೆಗಳಲ್ಲಿ ಕಾಣಬಹುದು.

ಶಿಕ್ಷಣದಲ್ಲಿ..... ಹಿಂದುಳಿಯುವಿಕೆ, ತಾರತಮ್ಯ

ಶಾಲೆಯನ್ನು ಅರ್ಧಕ್ಕೆ ಬಿಡುವ ಪ್ರಮಾಣದಲ್ಲಿ ಶೇ. 95 ರಷ್ಟು ಕೃಷಿ ಕಾರ್ಮಿಕರ ಮಕ್ಕಳೇ ಜಾಸ್ತಿ. ಅದರಲ್ಲಿ ಬಹುತೇಕ ಪಾಲು ದಲಿತರದ್ದು , ಶಿಕ್ಷಣ ಪಡೆಯುವ ಅತ್ಯಲ್ಪ ಜನರುಕೂಡ ತಾರತಮ್ಯಕ್ಕೊಳಗಾಗಿದ್ದಾರೆ. ರಾಜಸ್ಥಾನದಲ್ಲಿ ಭಂಗೀಸ್ ಜನಾಂಗವು ಆರ್ಥಿಕವಾಗಿ ಉತ್ತಮವಾಗಿದ್ದರೂ ಅವರಿಗೆಶಾಲೆಯಲ್ಲಿ ಪ್ರತ್ಯೇಕವಾಗಿ ನಿಲ್ಲಿಸಲಾಗುತ್ತದೆ. ಬಲಿಪಾಡ ಮತ್ತು ಬಿನಾಪುರ ಸ್ಕೂಲ್‌ಗಳಲ್ಲಿ ಅಲ್ಲಿನ ಹೆಡ್‌ಮಾಸ್ಟರ್ ದಲಿತ ಮಕ್ಕಳನ್ನು ಮಧ್ಯಾಹ್ನ ಉಪಹಾರಕ್ಕಾಗಿ ಪ್ರತ್ಯೇಕ ಕೂಡಿಸುತ್ತಾರೆ. ಮತ್ತು ಇತರರು ತಿಂದು ಬಿಟ್ಟ ತಟ್ಟೆಗಳನ್ನು ಸ್ವಚ್ಛಗೊಳಿಸಲು ಬಳಸಲಾಗುತ್ತದೆ.

ಇತ್ತೀಚಿಗೆ ಉಡುಪಿ ಜಿಲ್ಲೆಯ ಹಜರಿ ಹಾದ್ ಊರಿನ ಶಾಲೆಯಲ್ಲಿ ದಲಿತ ಮಕ್ಕಳನ್ನು ದೂರವಿರಿಸಿ ಶಾಲಾ ಕ್ರೀಡಾ ಸಂಸ್ಕಾತಿಕ ಕಾರ್ಯಕ್ರಮವನ್ನು ಯೋಜಿಸಲಾಗಿತ್ತು. ಕೃಷ್ಣನ ನಾಟಕದಲ್ಲಿ ಒಂದು ಪಾತ್ರದಲ್ಲಿಯೂ ದಲಿತ ವಿದ್ಯಾರ್ಥಿಗಳು ಇರಲ್ಲಿಲ್ಲ. ಸ್ಥಳೀಯ ಡಿ.ಎಸ್.ಎಸ್. ನವರು ಪ್ರತಿಭಟಿಸಿ ದ್ದರಿಂದ ಕಾರ್ಯಕ್ರಮವನ್ನು ಬದಲಾಯಿಸಿ ನಾಟಕದಲ್ಲಿ ಒಂದು ಕಟುಕನ ಪಾತ್ರವನ್ನು ಸೃಷ್ಟಿಸಿದಲಿತ ಬಾಲಕನಿಗೆ ವಹಿಸಲಾಯಿತು. ತಮಿಳುನಾಡಿನ ಗಂಗೈಕೊಂಡ ಸ್ಕೂಲ್ ನಲ್ಲಿ ಕಬ್ಬಡ್ಡಿ ಆಟವನ್ನು ತೇವಾರ V/S ಮಾರವಾರ್ಸ್ ಎಂದು ಇಬ್ಭಾಗ ಮಾಡಿ ಆಡಿಸಿದರು. ದಲಿತ ಯುವಕರು ಆದರಲ್ಲಿ ಗೆದ್ದ ಪರಿಣಾಮವಾಗಿ ಇಡೀ ಊರೇ ಎರಡು ಗುಂಪಾಗಿ ದಂಗೆ ಎದ್ದಿತು. ಪರಿಣಾಮವಾಗಿ 20 ಜನರು ಪ್ರಾಣ ಕಳೆದುಕೊಂಡರು.

ದೇವಸ್ಥಾನಗಳ ಪ್ರವೇಶ ನಿರಾಕರಣೆ

ಲಕ್ಷಾಂತರ ದಲಿತರಿಗೆ ಈಗಲೂ ದೇವಸ್ಥಾನ ಪ್ರವೇಶದಿಂದ ವಂಚಿಸಲಾಗುತ್ತಿದೆ. ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಈ ಪ್ರಶ್ನೆ ಇತ್ತೀಚಿಗೆ ಪರಿಸ್ಥಿತಿಯನ್ನು ಕೈಮೀರುವಂತೆ ಮಾಡಿತ್ತು. ದಲಿತರಿಗೆ ನಂದಾವರ ದೇವಸ್ಥಾನಕ್ಕೆ ಪ್ರವೇಶಕ್ಕೆ ಪ್ರಯತ್ನಿಸಿದ ಸ್ವಾಮಿ ಅಗ್ನಿವೇಶರ ಮೇಲೆ ಹಲ್ಲೆ ನಡೆಸಿದ ಘಟನೆ ನಡೆಯಿತು. ಅದೇ ಸಂಸ್ಥೆಯ ಆಸ್ಪತ್ರೆಯಲ್ಲಿ ಕಳೆದ 14 ವರ್ಷಗಳಿಂದ ಕಾಂಪೌಡರ್ ಆಗಿ ಕೆಲಸ ಮಾಡುತ್ತಿರುವ ದಲಿತ ನೌಕರನ ಕೆಲಸ ಖಾಯಂ ಮಾಡಲು ಸಿದ್ದರಿಲ್ಲ. ಹಾಗೆಯೆ ಕರ್ನಾಟಕದ ಧರ್ಮಸ್ಥಳದಲ್ಲಿ ಯಾವುದೇ ದಲಿತರನ್ನು ನೌಕರಿಗೆ ಸೇರಿಸಿಕೊಂಡಿಲ್ಲ. ಎಂಬುದು ಗಮನಿಸಬೇಕು

ಭಾರತದ ನಗರ ಪ್ರದೇಶಗಳಲ್ಲಿಯ ಸ್ಥಿತಿ

ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆ ಕೇವಲ ಗ್ರಾಮೀಣ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ ನಗರ ಪ್ರದೇಶಗಳಲ್ಲಿಯೂ ವಿವಿಧ ರೀತಿಯಲ್ಲಿ ಜೀವಂತವಾಗಿದೆ. ಎನ್ನುವುದಕ್ಕೆ ದೆಹಲಿಯಲ್ಲಿ ನಡೆದ ಘಟನೆಯೇ ಸಾಕ್ಷಿ. ದೆಹಲಿಯ ಗುರುತೇಜ್ ಬಹದ್ದೂರ್ ಕಾಲೇಜ್‌ನಲ್ಲಿ ದಲಿತ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯದಲ್ಲಿ ಪ್ರತ್ಯೇಕವಾಗಿ ವಾಸಿಸುವ ಮತ್ತು ಅವರಿಗೆ ಪ್ರತ್ಯೇಕ ಊಟದ ವ್ಯವಸ್ಥೆ ನಡೆಸಲಾಗುತ್ತಿತ್ತು. ವಿಪರ್ಯಾಸವೆಂದರೆ ಸರ್ಕಾರ ತನಿಖೆ ನಾಟಕ ನಡೆಸಿ ಈ ಅಂಶವನ್ನು ಅಲ್ಲಗಳೆಯಿತು.

ಸಾರ್ವಜನಿಕ ಉದ್ದಿಮೆಯಾದ ಬಿ.ಹೆಚ್.ಇ. ಎಲ್. ಸಂಘವು ಈಗ ಸಂಪೂರ್ಣ ಜಾತಿ ಆಧಾರದಲ್ಲಿ ಇಬ್ಭಾಗ ಅಗಿದೆ. ದಲಿತ ನೌಕರರು ಮನೆಗಳನ್ನು ಪಡೆಯಲು ಸುಮಾರು ವರ್ಷಗಳು ಕಾಯುವಂತಹ ಪರಿಸ್ಥಿತಿ ಇದೆ. ಈ ತಾರತಮ್ಯದ ಬಗ್ಗೆ ಕಾರ್ಮಿಕ ಸಂಘಟನೆಗಳ ಪ್ರತಿಕ್ರಿಯೆ ಸರಿಯಾಗಿಲ್ಲ. ಸಿಐಟಿಯು ಸಂಘಟನೆಯನ್ನು ಹೊರತು ಪಡಿಸಿ ಇತರೆ ರಾಷ್ಟ್ರೀಯ ಸಂಘಟನೆಗಳನ್ನು ಅಲ್ಲಿನ ಕಾರ್ಮಿಕರು ತಿರಸ್ಕರಿಸಿದ್ದಾರೆ. ಜೊತೆಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಇತರೆ ವಿವಿಧ ಕ್ಷೇತ್ರಗಳಲ್ಲಿ ನಿರಂತರವಾಗಿ ಶೋಷಣೆ ನಡೆಯುತ್ತಲೇ ಇದೆ. ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಬಳಸಿ ದಲಿತರಿಗೆ ಸಿಗುವ ಸೌಲಭ್ಯಗಳನ್ನು ಪಡೆದುಕೊಂಡಿರುವುದು ಹಲವಾರು ಕಡೆಗಳಲ್ಲಿ ಬೆಳಕಿಗೆ ಬಂದಿದೆ.

ಇವತ್ತು, ಮುಂಬೈ ಮತ್ತು ದೆಹಲಿಗಳಲ್ಲಿ ಆಫ್ರಿಕನ್ನರು ವಸತಿ ಪಡೆಯಲು ಪರದಾಡಬೇಕಾಗಿದೆ. ದಲಿತ ಯುವಜನರಲ್ಲಿ ಹೊಸ ರೀತಿಯ ಬದಲಾವಣೆ ಕಂಡು ಬರುತ್ತಿದ್ದು ತಮ್ಮ ಹೆಸರುಗಳನ್ನು ಬದಲಿಸಿಕೊಂಡು ನಗರ ಪ್ರದೇಶಗಳಲ್ಲಿ ಮನೆಗಳನ್ನು ಬಾಡಿಗೆಗೆ ಪಡೆಯುತ್ತಿರುವ ಉದಾಹರಣೆಗಳಿವೆ. ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಕಳೆದ 50 ವರ್ಷಗಳಿಂದಲೂ ಮೀಸಲಾತಿ ಹುದ್ದೆಗಳನ್ನು ಭರ್ತಿ ಮಾಡಿಲ್ಲ ಎಂದರೆ ಆಶ್ಚರ್ಯವಾಗುತ್ತದೆ.

ಕೇರಳದಲ್ಲಿ ಜಾತಿ ಪ್ರಬಲವಾಗಿದೆ. ಕ್ರಿಶ್ಚಿಯನ್ ಮತ್ತು ದಲಿತ ಕ್ರಿಶ್ಚಿಯನ್‌ರ ನಡುವೆ ಭೇದವಿದೆ. ಅದರೆ ಕೇರಳದ ದಲಿತರು ಅತ್ಯಂತ ಸುಶಿಕ್ಷಿತರು ಕೂಲಿಕಾರರೆ ಪ್ಲಾಂಟೇಷನ್‌ಗಳಲ್ಲಿ ಅಧಿಕಾರ ನಡೆಸುತ್ತಾರೆ. ಕೂಲಿಯು ಸಹಾ 120 ರಿಂದ 150 ಪಡೆಯುತ್ತಾರೆ. ಬಂಗಾಳದಲ್ಲಿ ಅಲ್ಲಿನ ದಲಿತರು ಬ್ರಾಹ್ಮಣರಿಗಿಂತ ಉತ್ತಮವಾಗಿದ್ದಾರೆ. ಆದರೂ ಅಲ್ಲಿ ಕೂಡ ಜಾತಿತಾರತಮ್ಯವಿದೆ.

ಈ ಹಿನ್ನೆಲೆಯಲ್ಲಿ ಎಲ್ಲಾ ಪ್ರಗತಿಪರರು ಅರ್ಥಿಕ ಹೋರಾಟದೊಂದಿಗೆ ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆ ವಿರುದ್ಧದ ಹೋರಾಟವನ್ನು ಮೇಳವಿಸಬೇಕು, ಈ ಹೋರಾಟವನ್ನು ವಿಶಾಲ ತಳಹದಿಯ ಮೇಲೆ ನಡೆಸಬೇಕು. ಅದು ಮಾತ್ರವೇ ಆ ವಿಭಾಗದ ಮಧ್ಯೆ ಆತ್ಮಸ್ಥೈರ್ಯವನ್ನು ತುಂಬಬಲ್ಲದು.

ಕೆರಳಿಸುವ ಅಭಿನಯ ...

ಪುಟ 12 ರಿಂದ

ಕೂರುವ ಬದಲು ಹೇಗೋ ಕಷ್ಟಪಡುತ್ತಾ ತಮ್ಮ ಜೀವನವನ್ನು ಸುಂದರವಾಗಿ ಮಾಡಿಕೊಳ್ಳುತ್ತಾರೆ. ಇದರ ಚಿತ್ರಣವಾಗಬೇಕು ಎನ್ನುವುದು ನನ್ನ ಮತ್ತು ನಿರ್ದೇಶಕರ ಪ್ರಯತ್ನವಾಗಿತ್ತು. ಹೀಗಾಗಿ ಆ ಪಾತ್ರ ನಿಗೂಢವಾಗಿ ಬೆಳೆಯುತ್ತಾಹೋಗುತ್ತದೆ. ಒಮ್ಮೆ ಸಿಡುಕಿದರೆ, ತಕ್ಷಣವೇ ನಕ್ಕು ಬೇರೊಂದು ಮುಖ ತೋರಿಸುತ್ತಾಳೆ. ಒಮ್ಮೆ ಅತ್ತರೆ, ತಕ್ಷಣವೇ ಉಡಾಫೆಯ ನೆಲೆಯಿಂದ ಇನ್ನೇನೋ ಹೇಳುತ್ತಾಳೆ. ಹೀಗಾಗಿ ಪ್ರೇಕ್ಷಕನನ್ನು ಅಳಿಸುವ, ನಗಿಸುವುದಷ್ಟಕ್ಕೇ ಪಾತ್ರ ಸೀಮಿತವಾಗಿ ಉಳಿಯದೆ ಯಾಕೆ ಹೀಗೆ ನಿಗೂಢ ಎಂದು ನೋಡುಗರಿಗೆ ಅನ್ನಿಸುತ್ತದೆ. ಚಿತ್ರ ಬಿಡುಗಡೆಯಾದಾಗ ಈ ಕುರಿತಂತೆ ಅನೇಕ ಪತ್ರಗಳು ಪ್ರೇಕ್ಷಕರಿಂದ ಬಂದಾಗ ಪಾತ್ರ ನಿರ್ವಹಣೆ ಯಶಸ್ವಿಯಾಯಿತೇನೋ ಎಂದು ಭಾವಿಸಿದ್ದೆ.

'ಆಕ್ರಮಣ'ದ ಒಂದು ದೃಶ್ಯ ಹೀಗಿದೆ. ತನ್ನ ಜೀವನ ಎಷ್ಟು ಬರಡಾಗಿತ್ತು ಎನ್ನುವುದನ್ನು ಲಕ್ಷ್ಮಿ ನಾಯಕ ರವಿಗೆ ಹೇಳುತ್ತಾಳೆ. ತನ್ನ ಬಾಲ್ಯದಲ್ಲಿ ತಾನೊಂದು ಹುಡುಗನ ಜೊತೆಗೆ ಕಣ್ಣಾಮುಚ್ಚಾಲೆ ಆಡುತ್ತಾ ಇದ್ದಾಗ ಈ ಹುಡುಗ ಅಡಗಿ ಕುಳಿತ ಜಾಗ ಗೊತ್ತಾಗಲೇ ಇಲ್ಲ. ಆ ಒಂಟಿ ಮನೆಯ ಕಣ್ಣು ಕಟ್ಟುವ ಕತ್ತಲಲ್ಲಿ ನನ್ನ ಕನಸಿನ ಆಟವನ್ನು ಪೂರ್ಣ ಮಾಡುವ ಆ ಹುಡುಗನಿಗಾಗಿ ಹುಡುಕಿಯೇ ಹುಡುಕಿದೆ - ಕೊನೆಗೂ ಸಿಗಲಿಲ್ಲ. ಆ ಹುಡುಗ ನೀನೇ ಆಗಿರಬಹುದಲ್ಲವೇ? ಎಂದು ರವಿಯನ್ನು ಕೇಳುವ ದೃಶ್ಯ. ಎಲ್ಲೂ ಕಂಠ ಬಿಗಿಯಬಾರದು, ಎಲ್ಲೂ ಅಳು ಸೇರಬಾರದು, ಕೇವಲ ಯಾರದ್ದೋ ಕತೆ ಹೇಳುವಂತಿರಬೇಕು, ಹಾಗಾದಾಗಲೇ ನೋಡುವ ಪ್ರೇಕ್ಷಕನಿಗೆ ಇದು ತನ್ನ ಕತೆ ಇರಬಹುದೇ ಎನ್ನಿಸುತ್ತದೆ ಎಂಬುದು ನನ್ನ ನಿಲುವು. ಚಿತ್ರದ ಒಂದು ಅತ್ಯುತ್ತಮ ದೃಶ್ಯ ಅದು ಎಂದು ಜನ ಬೆನ್ನು ತಟ್ಟಿದಾಗ ಗೆದ್ದ ಭಾವನೆ ಬಂತು.

ಕೃಪೆ: ಸಂಕುಲ-20, 1997

ಚಲಚಿತ್ರಗಳಲ್ಲಿ : ಭಾವನೆಗಳನ್ನು ಕೆರಳಿಸುವ ಅಭಿನಯ

ವೈಶಾಲಿ ಕಾಸರವಳ್ಳಿ

ಪ್ರಶ್ನೆ: ನಮ್ಮ ಚಿತ್ರಗಳಲ್ಲಿ ಭಾವೋದ್ರಿಕ್ತ ನೆಲೆಯ ಅಭಿನಯು ಮಾತ್ರ ಕಾಣುತ್ತಿದ್ದೇವೆ. ಅಂದರೆ ಪ್ರೇಕ್ಷಕನಲ್ಲಿ ಭಾವನೆ ಕೆರಳಿಸುವುದಕ್ಕೆ ಮಾತ್ರ ಅಭಿನಯುದ ಬಳಕೆಯಾಗುತ್ತಿದೆ. ತಾನು ಅಭಿನಯಿಸುವ ಪಾತ್ರದ ಬಗ್ಗೆ ಅನುಕಂಪ, ಸಿಟ್ಟು, ನಗು ತರಿಸುವುದಷ್ಟಕ್ಕೆ ನಟನ ಕೆಲಸ ಸೀಮಿತವಾಗುಳಿಯುತ್ತದೆ. ಈ ಭಾವನೆಗಳಾಚೆಗೆ ಪ್ರೇಕ್ಷಕನನ್ನು ಕೊಂಡೊಯ್ಯುತ್ತಿಲ್ಲ. ಈ ಅನುಕಂಪ, ಈ ಸಿಟ್ಟು, ಈ ನಗುವನ್ನು ಹುಟ್ಟುಹಾಕುವ ಪರಿಸ್ಥಿತಿಯೊಂದಿಗೆ ಪ್ರೇಕ್ಷಕನನ್ನು ಮುಖಾಮುಖಿಯಾಗಿಸುತ್ತಿಲ್ಲ ಎನ್ನುವ ಒಂದು ಆಕ್ಷೇಪವನ್ನು ನಾವು ಅನೇಕ ನಿಟ್ಟಿನಿಂದ ಕೇಳುತ್ತಿದ್ದೇವೆ. ಇದಕ್ಕೆ ನೀವು ಹೇಗೆ ಪ್ರತಿಕ್ರಿಯಿಸುತ್ತೀರಿ?

ಉತ್ತರ: ಈ ಪ್ರಶ್ನೆ ಬಹಳ ಕಾಡುವಂಥದ್ದು. ಪ್ರಶ್ನೆಯು ಮೊದಲ ಭಾಗದಲ್ಲಿ ಭಾವನೆಗಳನ್ನು ಕೆರಳಿಸುವುದಕ್ಕೇ ಅಭಿನಯು ಬಳಕೆಯಾಗುತ್ತಿದೆ ಎಂದಾಗ 'ಕೆರಳಿಸುವ' ಶಬ್ದವನ್ನು ಉದ್ದೇಶಪೂರ್ವಕವಾಗಿಯೇ ಬಳಸಿದ್ದೀರಿ ಎಂದು ಭಾವಿಸುತ್ತೇನೆ. ಅಂದರೆ ಪ್ರೇಕ್ಷಕನನ್ನು ಭಾವನಾತ್ಮಕವಾಗಿ ಮುಟ್ಟುವುದು ಸರಿ. ಆದರೆ ಭಾವುಕನನ್ನಾಗಿ ಮಾಡಿ ಕೆರಳಿಸುವುದು ತಪ್ಪು ಎಂಬ ಅರ್ಥ ನಿಮ್ಮ ವಾದದಲ್ಲಿ ಇರಬಹುದಲ್ಲವೇ?

ಪ್ರಶ್ನೆಯು ಎರಡನೆಯು ಭಾಗದಲ್ಲಿ ಭಾವನೆಗಳಾಚೆಗೆ ಪ್ರೇಕ್ಷಕನನ್ನು ಕೊಂಡೊಯ್ಯಬೇಕು ಎನ್ನುವ ವಾದ ಕಾಣುತ್ತೇವೆ. ನಾನು ಹವ್ಯಾಸಿ ರಂಗಭೂಮಿಯುಲ್ಲಿ ನಟಿಯಾಗಿ ಪ್ರವೇಶಿಸಿದಾಗ ಈ ವಿಚಾರದ ಮಹತ್ವ ಏನು ಅನ್ನುವುದು ತಿಳಿದು ಬಂತು.

ಮೊದಲನೆಯ ಪ್ರಶ್ನೆ ನಟಿಯಾಗಿ ನನ್ನನ್ನು ಸಿದ್ಧಪಡಿಸಿಕೊಳ್ಳಲು ಸಂಬಂಧಿಸಿದ್ದು, ಎರಡನೆಯ ಪ್ರಶ್ನೆ ನಟ, ನಟಿ ಮತ್ತು ನಿರ್ದೇಶಕ ಜಂಟಿಯಾಗಿ ನಿರ್ವಹಿಸಬೇಕಾದ ಜವಾಬ್ದಾರಿಯನ್ನು ಕುರಿತದ್ದು.

ಭಾವನೆಯನ್ನು ಕೆರಳಿಸುವುದಕ್ಕೆ ಮಾತ್ರ ಅಭಿನಯು ಸೀಮಿತವಾಗುಳಿದಿರುವುದಕ್ಕೆ ಎರಡು ಕಾರಣಗಳಿವೆ. ಒಂದು, ಆ ನಟ/ನಟಿಯುರ ಸೀಮಿತವಾದ ಗ್ರಹಿಕೆ, ಎರಡು - ನಟ ಒಂದು ಚಿತ್ರದಲ್ಲಿ ತನ್ನ ಪಾತ್ರ ಮಾತ್ರ ಮುಖ್ಯ ಎಂದು ನಂಬಿರುವ ಒಂದು ಕೆಟ್ಟ ಸಂಪ್ರದಾಯ. ಭಾವನೆ ಕೆರಳಿಸುವುದು ಮಾತ್ರ ಉದ್ದೇಶವಾಗಿರಬಾರದು ಎಂಬ ವಾದವನ್ನು ಒಪ್ಪಿದರೆ ಬೇರೆ ಯಾವುದು ಮುಖ್ಯವಾಗಬೇಕು ಎನ್ನುವ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಒಂದು ಗುಂಪಿನಲ್ಲಿ ಮಾತಾಡಬೇಕಾದಾಗ ಎರಡು ರೀತಿಯಲ್ಲಿ ಆ ಗುಂಪಿನ ಗಮನ ನಮ್ಮ ಕಡೆಗೆ ಸೆಳೆದುಕೊಳ್ಳಬಹುದು. ಒಂದು ಸತ್ವಪೂರಿತ ವಿಷಯುವೊಂದನ್ನು ಮಂಡಿಸುವ ಮೂಲಕ. ಆಗ ಗುಂಪು ವಿಚಾರದ ಪ್ರಖರತೆಗೆ ಅಥವಾ ಸತ್ವಕ್ಕೆ ಮಾರುಹೋಗಿ ಆಲಿಸುತ್ತದೆ. ಇನ್ನೊಂದು ಕ್ರಮ, ವಿಚಾರ ಮಂಡಿಸುವಾಗ ಪ್ರಚೋದನಕಾರಿಯಾಗಿ ಅಂದರೆ ಅವೇಶದಿಂದ, ಅಬ್ಬರದಿಂದ ಮಾತಾಡುವ ಮೂಲಕ ಗುಂಪಿನ ಗಮನ ತನ್ನತ್ತ ಸೆಳೆದುಕೊಳ್ಳುವುದು. ಇಲ್ಲಿ ವಿಚಾರಗಳು ಹಳಸಲಾಗಿದ್ದರೂ ನಡೆಯುತ್ತದೆ. ಇಲ್ಲಿ Performance ಮುಖ್ಯವಾಗುತ್ತದೆ.



ಪ್ರಶಸ್ತಿ ವಿಜೇತ 'ಗಾಡ್‌ಮದರ್' ನಲ್ಲಿ ಶಬಾನಾಅಜ್ಮಿಯ ಅಭಿನಯ - ಪ್ರತಿಭೆಗೆ



ವೈದೃಶ್ಯವಾದ ಅಬ್ಬರದ ಕುಣಿತಗಳು

ಬಿ.ವಿ.ಕಾರಂತರು ನಮಗೆ ನಾಟಕ ಮಾಡಿಸುತ್ತಿರುವಾಗ ಈ ಅಂಶಗಳನ್ನು ಮತ್ತೆ ಮತ್ತೆ ನೆನಪಿಸಿಕೊಡುತ್ತಿದ್ದರು. ನಟ ಆದವನು perform ಮಾಡಬಾರದು. ನಟಿಸಬೇಕು. perform ಮಾಡುವಾಗ ಆತನಿಗೆ ತಾನು ನಿರ್ವಹಿಸುತ್ತಿರುವ ಪಾತ್ರದ ಬಗ್ಗೆ ನಂಬಿಕೆಯಿರುವುದಿಲ್ಲ. ಹಾಗಾಗಿ ಆತ ಹೊರಗಿನ ಅಂಶಗಳಿಂದ, ಭಾವವಿಕಾರಗಳಿಂದ ಪ್ರೇಕ್ಷಕನನ್ನು ಮುಟ್ಟಲು ಪ್ರಯತ್ನಿಸುತ್ತಾನೆ. ಆದರೆ ನಟ ಅಥವಾ ನಟಿಗೆ ತನ್ನ ಪಾತ್ರದಬಗ್ಗೆ, ತನ್ನ ಅಭಿನಯು ಸಾಮರ್ಥ್ಯದ ಬಗ್ಗೆ ನಂಬಿಕೆ ಇದ್ದಲ್ಲಿ perform ಮಾಡುವ ಬದಲು ನಟಿಸುತ್ತಾನೆ. ಅಂದರೆ ಪಾತ್ರದ ಔಚಿತ್ಯ ತಿಳಿದು ಅದರಂತೆ ಪಾತ್ರ ನಿರ್ವಹಿಸುತ್ತಾನೆ. ನಮ್ಮ ಅನೇಕ ನಟರಲ್ಲಿ ಈ performance ಮಾತ್ರ ಕಾಣಿಸಿಕೊಂಡರೆ ಅದಕ್ಕೆ ಕಾರಣ ಇವೆರಡರ ನಡುವಿನ ವ್ಯತ್ಯಾಸ ಅವರಿಗೆ ಗೊತ್ತಿಲ್ಲದೇ ಇರುವುದು. ಭಾರತೀಯ ಚಿತ್ರರಂಗದ ಇಬ್ಬರು ಮಹಾನ್ ನಟರು ಕಮಲಹಾಸನ್ ಹಾಗೂ ನಸೀರುದ್ದೀನ್ ಷಾ. ಇವರಲ್ಲಿ ಕಮಲಹಾಸನ್ performer ಅದರೆ, ನಸೀರುದ್ದೀನ್ ಷಾ ನಟ.

ಇನ್ನೊಂದು ಕಾರಣವೆಂದರೆ ನಮ್ಮಲ್ಲಿ ನಟನಟಿಯುರು ಪಾತ್ರವನ್ನು ಅವರ ವರ್ಚಸ್ಸು ಬೆಳೆಸುವ ಸಾಧನ ಎಂದು ತಿಳಿದಿರುವುದು. ಅವರಿಗೆ ಚಿತ್ರದ ಒಟ್ಟು ಉದ್ದೇಶವಾಗಲಿ, ಉದ್ದೇಶಿತ ಪರಿಣಾಮವಾಗಲೀ ಮುಖ್ಯವಾಗುವುದಿಲ್ಲ. ಹಾಗಾದಾಗ ಈ ಭಾವನೆ ಕೆರಳಿಸುವ ಅಭಿನಯದಿಂದ ಅವರಿಗೆ ಥಟ್ಟನೆ ಜನಪ್ರಿಯುತೆ ಸಿಗುತ್ತದೆ. ಹಾಗಾಗಿ ನಮ್ಮ ಅನೇಕ ನಟರಿಗೆ ತಾವು ನಟಿಸುತ್ತಿರುವ ಕ್ರಮ ಸರಿ ಅಲ್ಲ ಎಂದು ಗೊತ್ತಿದ್ದೂ ಈ ಕ್ರಮವನ್ನೇ ಬಳಸಿಕೊಳ್ಳುತ್ತಿರುತ್ತಾರೆ.

ನಿಮ್ಮ ಪ್ರಶ್ನೆಯು ಎರಡನೆಯ ಭಾಗಕ್ಕೆ ಈಗ ಬರೋಣ. ಭಾವನೆಗಳಾಚೆಗೆ ಪ್ರೇಕ್ಷಕನನ್ನು ಕೊಂಡೊಯ್ಯಬೇಕಾದರೆ ನಟ ನಟಿಯುರೊಂದಿಗೆ ಆ ಚಿತ್ರವನ್ನು ರೂಪಿಸುವ ನಿರ್ದೇಶಕನೂ ಸೇರಿಕೊಳ್ಳಬೇಕಾಗುತ್ತದೆ. ಏಕೆಂದರೆ ಇದು ಒಂದು ಪಾತ್ರಕ್ಕೆ ಸೀಮಿತವಾಗಿರುವ ವಿಷಯುವಲ್ಲ. ಇಡೀ ಚಿತ್ರದ ಶೈಲಿ ಅದಕ್ಕೆ ಪೂರಕವಾಗದಿದ್ದರೆ ಭಾವನೆಗಳಾಚೆಗೆ ಕೊಂಡೊಯ್ಯುವ ನಟ/ನಟಿಯ ಪ್ರಯತ್ನ ಅಭಾಸವೆನ್ನಿಸಿ ಕೆಟ್ಟ ಅಭಿನಯು ಎನ್ನುವ ಹಣೆಪಟ್ಟಿ ಹೊತ್ತು ಕೊಂಡು ಬಿಡಬಹುದು. ಒಂದು ವೇಳೆ ತಾನು ಅಂತಹದೊಂದು ಶೈಲಿಯನ್ನು ರೂಢಿಸಿಕೊಂಡು ಅಭಿನಯಿಸಿದ್ದೀನಿ ಎಂದಿಟ್ಟುಕೊಳ್ಳಿ. ನನ್ನ ಸಹನಟ/ನಟಿಯು ಎತ್ತರದ ಧಾಟಿಯು ಅಭಿನಯು ರೂಪಿಸಿ ಕೊಂಡರೆ, ಆಗ ನನ್ನ ಪಾತ್ರ ನಿರ್ವಹಣೆ ಪೇಲವವಾಗಿಬಿಡುತ್ತದೆ. ಅಥವಾ ನಿರ್ದೇಶಕನಿಗೆ ಆ ಕಲ್ಪನೆಗಳಿಲ್ಲದಿದ್ದರೆ ಆಗ ಆತ ನನ್ನ ಅಭಿನಯು ಸಾಲದೆಂದು ಗ್ರಹಿಸಿ ರಿರೆಕಾರ್ಡಿಂಗ್ ಹಂತದಲ್ಲಿ ಪೂರಕ ಸಂಗೀತ ಸೇರಿಸಿ ಈ ಉದ್ದೇಶವನ್ನು ಮಣ್ಣು ಮಾಡಬಹುದು. ಆದ್ದರಿಂದ ನಿರ್ದೇಶಕನಿಗೆ ಸ್ಪಷ್ಟ ಕಲ್ಪನೆ ಇದ್ದಾಗ ಮಾತ್ರ ಈ ಸ್ತರದ ಅಭಿನಯು ಸಾಧ್ಯ.

ನನಗೆ ಶ್ರೇಷ್ಠ ನಟಿ ರಾಜ್ಯ ಪ್ರಶಸ್ತಿ ತಂದುಕೊಟ್ಟ 'ಆಕ್ರಮಣ' ಚಿತ್ರದ ಲಕ್ಷ್ಮಿಯ ಪಾತ್ರ ನಿರ್ವಹಣೆಯುನ್ನು ಇಲ್ಲಿ ಉದಾಹರಣೆಯಾಗಿ ಕೊಡುತ್ತೇನೆ.

ಗಂಡನಿಂದ ಯಾವ ರೀತಿಯಲ್ಲೂ ಸಾಂತ್ವನ ಸಿಗದ ಹೆಂಡತಿಯ ಪಾತ್ರ ಅದು. ಆದರೆ ಎಲ್ಲೂ ಪಾತ್ರದ ಬಗ್ಗೆ 'ಅಯ್ಯೋಪಾಪ' ಎಂದು ಪ್ರೇಕ್ಷಕ ಮರುಕಪಡುವಂತಾಗಬಾರದು ಎಂದು ನಿರ್ದೇಶಕರ ಕಲ್ಪನೆ. ನಮ್ಮ ಸುತ್ತಲ ಪ್ರಪಂಚದಲ್ಲಿ ಕಣ್ಣುಬಿಟ್ಟು ನೋಡಿದರೆ ಗಂಡಸಿನ ದಬ್ಬಾಳಿಕೆಗೆ ಒಳಗಾದ ಎಷ್ಟೋ ಹೆಣ್ಣು ಜೀವಗಳು ಅಳುತ್ತಾ

ಪುಟ 11 ನೋಡಿ

ನವ ಪ್ರಕಾಶನ

ಪ್ರಕಾಶಕರು ನವಕರ್ನಾಟಕ ಪಬ್ಲಿಕೇಷನ್ ಪ್ರೈ ಲಿಮಿಟೆಡ್,
ಎಂಬೆಸಿ ಸೆಂಟರ್, ಕ್ರೆಸೆಂಟ್‌ರಸ್ತೆ ಬೆಂಗಳೂರು -560 001

ಬಾಲಕರಿಗಾಗಿ ಸ್ಕೌಟಿಂಗ್	ಲೇ।। ಲಾರ್ಡ್ ಬೇಡನ್ ಬೆಲೆ 110 ರೂ
ಪ್ರಾಥಮಿಕ ಶಿಕ್ಷಣ ಸಮಸ್ಯೆಗಳು-ಸವಾಲುಗಳು	ಲೇ।। ಡಾ।। ಮಹಾಬಲೇಶ್ವರ ಬೆಲೆ 110 ರೂ
ವಿಸ್ಮಯುಗಳ ನಾಡಿನಲ್ಲಿ	ಲೇ।। ವಿ.ಜಿ. ಕುಲಕರ್ಣಿ ವಿ.ಜಿ.ಗಂಭೀರ್, ಆರ್.ಎಂ. ಭಾಗವತ್ ಬೆಲೆ 40 ರೂ
ಸಂವಿಧಾನ ಮತ್ತು ಕಾನೂನು	ಲೇ।। ಕೃಷ್ಣ ಮೂರ್ತಿ ಸಿರ್ಸಿ ಬೆಲೆ 35 ರೂ
ನೀವು ಬಳಸುವ ಔಷದಗಳು	ಲೇ।। ಡಾ।। ಸಿ.ಆರ್. ಚಂದ್ರ ಶೇಖರ್ ಬೆಲೆ 60 ರೂ
ಗಡಿಯಾರದ ಕಥೆ	ಲೇ।। ಎಂ.ಎಸ್. ಚಂದ್ರಶೇಖರ ಅಯ್ಯರ್ ಬೆಲೆ 20 ರೂ
ಗಣಪತಿ ಪುರಾಣಂ	ಲೇ।। ಸುಬ್ರಮಣ್ಯ ಶರ್ಮ ಬೆಲೆ 12 ರೂ
ಕಳವು ಕಲಿಸುವ ದೇವರು	ಲೇ।। ಡಾ।। ಸ.ಜ. ನಾಗಲೋಠಮಠ ಬೆಲೆ 22 ರೂ
ಸ್ವಾಸ್ಥ್ಯ ಸಂಗಾತಿ	ಲೇ।। ಡಾ।। ಸ.ಜ. ನಾಗಲೋಠಮಠ ಬೆಲೆ 25 ರೂ
ಪ್ರತಿ ಬಿಂಬ	ಲೇ।। ಪ್ರೊ।। ಡಿ.ಆರ್. ಬಳೂರಗಿ ಬೆಲೆ 35 ರೂ
ದೇಶ ವಿದೇಶಗಳ ಪರಿಚಯು	ಲೇ।। ಪಾಂಡುರಂಗಶಾಸ್ತ್ರಿ, ಸಿ.ಆರ್. ಕೃಷ್ಣರಾವ್ ಬೆಲೆ 135 ರೂ.
ಕಿವಿಮಾತು (ಕವನ ಸಂಕುಲನ)	ಲೇ। ಡಾ।ಆರ್.ಕೆ. ಮಣಿಪಾಲ ಮಾರ್ಗದರ್ಶಿ ಪ್ರಕಾಶನ, ಮಂಗಳೂರು .....ಬೆಲೆ ರೂ..35

PRB DECR 319-79/79 AIKYARANGA WEEKLY Reg.No.17015/64 KRNM/BGS-405 MAG(2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ